## 4. ನಿಯಮ 69ರ ಮೇರೆಗೆ

**ವಿಷಯ:-ನಕಲಿ ಛಾಪಾ ಕಾಗದದ ಹಗರಣ ಕುರಿತು.**

+ ಬಿ.ಎನ್.ಬಚ್ಚೇಗೌಡ(ಹೊಸಕೋಟೆ):- ಸನ್ಮಾನ್ಯ ಅಧ್ಯಕ್ಷರೇ, ಬಹುಕೋಟಿ ನಕಲಿ ಛಾಪಾ ಕಾಗದದ ಹಗರಣದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ನಾವೂ ಕೂಡ ನಿಲುವಳಿ ಸೂಚನೆಯ ಮೂಲಕ ಪ್ರಸ್ತಾವಕ್ಕೆ ಅವಕಾಶವನ್ನು ಕೋರಿ ತಮ್ಮ ಅವಗಾಹನೆಗೆ ಸಲ್ಲಿಸಿದ್ದೇವೆ. ಆ ಕುರಿತ ವಾದವನ್ನು ತಾವುಗಳು ಪರಿಶೀಲಿಸಿ ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ಹೇಳಿ, ಸದನದಲ್ಲಿ ಆ ಕುರಿತು ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ನಾನು ತಮ್ಮನ್ನು ಪ್ರಥಮತಃ ಅಭಿನಂದಿಸುತ್ತೇನೆ. ನಕಲಿ ಛಾಪಾ ಕಾಗದದ ಹಗರಣವು ನಮ್ಮ ದೇಶ, ವಿದೇಶಗಳಲ್ಲಿ ಹಬ್ಬಿದ್ದು ಇದೊಂದು ದೊಡ್ಡ ಜಾಲದ ಮೂಲಕ ತನ್ನ ಅವ್ಯವಹಾರಗಳನ್ನು ಬೆಳೆಸಿಕೊಂಡು ಬಂದಿದೆ. ವಿಶೇಷತಃ ನಮ್ಮ ರಾಜ್ಯದಲ್ಲಿ ಈ ಕುರಿತು ಹಗರಣವು ಬೆಳಕಿಗೆ ಬಂದಾಗ ಇದರ ಗಂಭೀರತೆಯ ಅರಿವು ಉಂಟಾಯಿತು. ಹತ್ತಾರು ಸಾವಿರ ಕೋಟಿ ರೂಪಾಯಿಗಳಷ್ಟು ಮೌಲ್ಯದ ಈ ಹಗರಣದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತಿತರರು ಚರ್ಚೆಯ ಮೂಲಕ ಬೆಳಕು ಚೆಲ್ಲಿದ್ದಾರೆ. ನಮ್ಮ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಬಿ.ಸೋಮಶೇಖರ್‌ರವರೂ ಕೂಡ ಸಾಕಷ್ಟು ಪ್ರಮುಖ ವಿಚಾರಗಳನ್ನು ಸರಕಾರದ ಗಮನಕ್ಕೆ ಈ ಸದನದ ಮೂಲಕ ತಂದಿದ್ದಾರೆ. ನಮ್ಮ ರಾಜ್ಯದಲ್ಲಿ ಇದನ್ನು ಪತ್ತೆ ಹಚ್ಚಿದ್ದು ಬೆಂಗಳೂರಿನ ಆರ್.ಟಿ.ನಗರದ ಸ್ಟಾಂಪ್ ವೆಂಡಿಂಗ್ ಸಂಸ್ಥೆಯೊಂದನ್ನು ಸಕಾರಣವಾಗಿ ತನಿಖೆ ಮಾಡಿದಾಗ. ಆಗ ಈ ಹಗರಣದ ಮೂಲಗಳು ಹೊರಬರಲಾರಂಭಿಸಿದವು. ಆಗ ಅಲ್ಲಿ ಸುಮಾರು 12 ಕೋಟಿ ರೂಪಾಯಿಗಳ ಮೌಲ್ಯದ ನಕಲಿ ಛಾಪಾ ಕಾಗದ ಪತ್ತೆ ಹಚ್ಚುವುದರೊಂದಿಗೆ 13 ಜನ ಈ ಅಕೃತ್ಯದಲ್ಲಿ ಸೇರಿಕೊಂಡವರು ಸಿಕ್ಕಿಹಾಕಿಕೊಂಡರು. ಆಗಸ್ಟ್ 10ರ 2000ನೇ ಇಸವಿಯಲ್ಲಿ ಇದು ಬೆಳಕಿಗೆ ಬರುವಂತಾಯಿತು. ಈ ಒಂದು ದುಷ್ಕರ್ಮಿಗಳ ಜಾಲದ ಹಿಂದೆ ಕರೀಂಲಾಲಾ ಎಂಬುವನ ನೇತೃತ್ವ ಇರುವುದು ಕಂಡುಬಂತು. ಈ ಅವ್ಯವಹಾರವು ಆಗ ಬೆಳಕಿಗೆ ಬಂದು ಅಂದಾಜು 10 ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಅವ್ಯವಹಾರವು ಇಲ್ಲಿ ನಡೆದಿರಬಹುದೆಂದು ಅಂದಾಜು ಮಾಡಲಾಯಿತು. ಎಂಬಿತ್ಯಾದಿ ವಿಚಾರಗಳು ಬೆಳಕಿಗೆ ಬಂದಿವೆ. ಇಂಥ ಅವ್ಯವಹಾರಗಳು 1993 ರಿಂದ, 1995 ರಿಂದ ನಡೆಯುತ್ತಿದೆ ಎಂದು ಹೇಳುತ್ತಾ ಬಂದಿದ್ದರೂ 1998ರಿಂದ ಈಚೆಗೆ ಹೆಚ್ಚು ಬೆಳಕಿಗೆ ಬಂತೇ ಮತ್ತು ಇದಕ್ಕೆ ಕಟ್ ಆಫ್ ಡೇಟ್ ಏನು ಎನ್ನುವುದರ ಬಗ್ಗೆ ಯಾವುದೇ ನಿಖರವಾದ ಮಾಹಿತಿಗಳು ನಮ್ಮಲ್ಲಿ ಇಲ್ಲ. ಆ ಕುರಿತು ನಿಖರವಾದ ಮಾಹಿತಿಗಳನ್ನು ನಾವು ಸರಕಾರದವರಲ್ಲಿ ಕೇಳಬಯಸುತ್ತೇವೆ. ತಾವುಗಳು ಚರ್ಚೆಗೆ ಅವಕಾಶ ಮಾಡಿಕೊಟ್ಟಾಗ ಅಂಥ ವಿಷಯಗಳ ಸಂಗ್ರಹಣೆಗೆ

ನಮ್ಮಲ್ಲಿರುವಂತಹ ವಿಷಯಗಳ ಬಗ್ಗೆ ಬೆಳಕು ಚೆಲ್ಲಲು ಅನುಕೂಲವಾಗುತ್ತದೆ. ಈ ಹಗರಣದ ಕುರಿತು ಜನಸಾಮಾನ್ಯರಲ್ಲಿ, ಸಾರ್ವಜನಿಕರಲ್ಲಿ ಇದ್ದಿರಬಹುದಾದಂತಹ ಸಂಶಯಗಳಿಗೆ ಸಾಕಷ್ಟು ಸಮಾಧಾನವೂ ಸಿಗುತ್ತದೆ. ಅದಕ್ಕೋಸ್ಕರ ಸಿ.ಬಿ.ಐ.ಗೆ ಈ ತನಿಖೆಯನ್ನು ಒಪ್ಪಿಸಬೇಕು ಎನ್ನುವುದು ನಮ್ಮ ವಾದ. ಈ ನಕಲಿ ಛಾಪಾ ಕಾಗದದ ಜಾಲವು ನೇಪಾಳ, ಬಾಂಗ್ಲಾದೇಶ, ನಮ್ಮ ರಾಜ್ಯ ಹಾಗೂ ಪಕ್ಕದ ರಾಜ್ಯಗಳಲ್ಲಿ ಪ್ರಮುಖವಾಗಿ ಆಂಧ್ರಪ್ರದೇಶ ಮುಂಬಯಿ, ಗುಜರಾತ್, ಪಶ್ಚಿಮ ಬಂಗಾಳದಲ್ಲಿ ವ್ಯಾಪಕವಾಗಿ ಹರಡಿರುವುದರಿಂದ ನಮ್ಮ ಪೋಲೀಸ್ ಇಲಾಖೆಯವರು ಪ್ರಕರಣವನ್ನು ಸಿಸಿಬಿಗೆ ವಹಿಸಬೇಕೆಂದು ಶ್ರೀ ಸಾಂಗ್ಲಿಯಾನರವರನ್ನು ನೇಮಕ ಮಾಡಿದಾಗ ಇದರಲ್ಲಿ ಸಾಕಷ್ಟು ವಿಷಯಗಳು ಅಡಗಿವೆ, ಮತ್ತು ಸಾಕಷ್ಟು ಜನರ ಕೈವಾಡವು ಇದರಲ್ಲಿದೆ ಎಂಬಿತ್ಯಾದಿ ವಿಚಾರಗಳು ಮೇಲ್ನೋಟಕ್ಕೆ ಕಾಣಿಸತಕ್ಕಂಥಾದ್ದು ಇದೆ. ಆ ಒಂದು ದೃಷ್ಟಿಯಿಂದ ಇದರ ಸಮಗ್ರ ತನಿಖೆಯು ನಡೆಯಬೇಕಾದುದರಿಂದ ಮತ್ತು ರಾಜ್ಯ ಹೊರರಾಜ್ಯಗಳಲ್ಲಿಯೂ ಆಗಿರತಕ್ಕಂಥ ವಿಷಯವಾದುದರಿಂದ ಇದನ್ನು ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿ ತನಿಖೆ ಮಾಡುವಂಥ ವಿಚಾರಣೆ ಅಲ್ಲ. ಇದು ಬೇರೆ ರಾಜ್ಯಗಳಲ್ಲಿಯೂ ಸೇರಿರತಕ್ಕಂಥಾದ್ದು, ಆದುದರಿಂದ ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಇವೊತ್ತು ರಾಜ್ಯದಲ್ಲಿ ಕಂದಾಯ ಸೋರಿಕೆ ಆಗಿರತಕ್ಕಂಥಾದ್ದು, ರಿಜಿಸ್ಟ್ರೇಷನಲ್ಲಿ ನಕಲಿ ಛಾಪಾ ಕಾಗದಗಳು, ಅವುಗಳ ಬಳಕೆಯಾಗಿರತಕ್ಕಂಥಾದ್ದು ಮುಂತಾಗಿ ಇವೆ. ನಾನೂ ಕೂಡ ವಕೀಲನಾಗಿದ್ದೇನೆ, ವಕೀಲರ ಸಂಘಗಳಿವೆ. ನಾವು ಜೆನ್ಯೈನ್ ಆಗಿರತಕ್ಕಂಥ ಛಾಪಾ ಕಾಗದಗಳನ್ನು ಖರೀದಿ ಮಾಡುತ್ತೇವೆ. ನಮ್ಮ ಆಸ್ತಿಗಳು ಬೇರೆ ಕಡೆ ಮಾರಾಟವಾಗಬೇಕು ಮತ್ತು ದಾನಪತ್ರಗಳನ್ನು ಕೊಡಬೇಕು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟೀಸ್ ಆಕ್ಟ್‌ನಲ್ಲಿ ಅದು ಸೇರಿಕೊಂಡಿರತಕ್ಕಂಥಾದ್ದಾಗಿರುವುದರಿಂದ ಇವೊತ್ತು ಸಾಕಷ್ಟು ಜನರು ಅದನ್ನು ಕೊಂಡುಕೊಂಡು ಮಾನ್ಯ ಕಂದಾಯ ಸಚಿವರೇ ಹೇಳಿದ ಹಾಗೆ ಸಾಕಷ್ಟು ರಿಜಿಸ್ಟ್ರೇಷನ್ಸ್ ಆಗಿಬಿಟ್ಟಿವೆ. ಸ್ಟಾಂಪ್ಸ್ ರೆವಿನ್ಯೂ ಸ್ಟ್ಯಾಂಪ್ಸ್ ಇರಬಹುದು, ಇವೊತ್ತು ಬಹಳ ಮುಖ್ಯವಾಗಿ ಕರೀಂಲಾಲಾ ಎಂಬುವನು ಈ ದಂಧೆಯಲ್ಲಿ ಏನು ಸೇರಿಕೊಂಡಿದ್ದಾನೆ, ಅವನು ಹೆಸರು ಪ್ರಕರಣದಲ್ಲಿ ಈಚೆಗೆ ಬಂದಿತಕ್ಕಂಥಾದ್ದು, ಅವನನ್ನು ಅಜ್ಮೀರ್‌ನಲ್ಲಿ ಅರೆಸ್ಟ್ ಮಾಡಿ ಇಲ್ಲಿಗೆ ತಂದು ಸುಮಾರು ಎರಡೂವರೆ ತಿಂಗಳು ಈಚೆಗೆ ಆಗಿರತಕ್ಕಂಥಾದ್ದು. ಆತನ ಹೇಳಿಕೆಗಳನ್ನು ತೆಗೆದುಕೊಂಡ ಮೇಲೆ ಸಾಕಷ್ಟು ವಿಷಯಗಳು ಈಚೆಗೆ ಬಂದಿರುತ್ತವೆ. ಅಡಿಷನಲ್ ಚಾರ್ಜ್‌ಶೀಟ್ ರೂಪದಲ್ಲಿ ಆ ವಿಷಯಗಳನ್ನು ಹಾಕಬೇಕಾಗುತ್ತದೆ. ಆ ವಿಷಯಗಳ ಮೇಲೆ ಬೆಳಕಿಗೆ ಬಂದಿರತಕ್ಕಂಥ ಪ್ರಕರಣ ಇದಾಗಿದೆ. ಈತನು ಕೇವಲ ಸಾಮಾನ್ಯ ಮನುಷ್ಯನಾಗಿದ್ದ. ಗಲ್ಫ್ ದೇಶದಲ್ಲಿ ಕೆಲಸ ಮಾಡುತ್ತಿದ್ದವನು ಮತ್ತೆ ವಾಪಸ್ ಮುಂಬೈಗೆ ಬಂದ ಮುಂಬೈಯಲ್ಲಿನ ಭೂಗತ ದೊರೆ ದಾವೂದ್ ಇಬ್ರಾಹಿಂನ ಸಹಚರರ ಜೊತೆಗೆ ಇವನು ತನ್ನ ವ್ಯವಹಾರವನ್ನು

ಮಾಡಿಕೊಂಡು ಶುರು ಮಾಡಿದ. ಇವನು ಖೋಟಾ ನೋಟು ಪ್ರಕರಣಗಳಲ್ಲಿಯೂ ಈತನ ಹೆಸರು ಇರತಕ್ಕಂಥಾದ್ದು ನಮಗೆ ಗೊತ್ತಿರತಕ್ಕಂಥ ವಿಷಯ. 500 ಮತ್ತು 1000 ರೂ.ಗಳ ಖೋಟಾ ನೋಟ್ ಪ್ರಕರಣಗಳಲ್ಲಿಯೂ ಈತನ ಹೆಸರು ಇದೆ ಎಂದು ಹೇಳಿಕೊಂಡಿರತಕ್ಕಂಥಾದ್ದು ಇದೆ. ಇಂಥ ದೇಶದ್ರೋಹಿ ಚಟುವಟಿಕೆಗಳಲ್ಲಿ ಈತನು ಭಾಗಿಯಾಗಿದ್ದಾನೆ. ಇವೊತ್ತು ನಾವೇನು ಟೆರ್ರರಿಸಂ ಎಂದೇನು ಹೇಳುತ್ತೇವೆ, ಇವೊತ್ತು ಉಗ್ರಗಾಮಿಗಳು ಈ ರಾಷ್ಟ್ರದ ಮೇಲೆ ಮಾಡುತ್ತಾ ಇರತಕ್ಕಂಥ ದುಷ್ಕೃತ್ಯಗಳು, ಪಾರ್ಲಿಮೆಂಟ್ ಭವನದ ಮೇಲೆ ಮಾಡಿರತಕ್ಕಂಥ ಕೃತ್ಯ ಇರಬಹುದು, ಅದೇ ರೀತಿಯಲ್ಲಿ ಕೋಲ್ಕತ್ತಾದಲ್ಲಿ ನಿನ್ನೆ ಮೊನ್ನೆ ನಡೆದಿರತಕ್ಕಂಥ ಪ್ರಕರಣವೇ ಇರಬಹುದು, ಜಾಗತಿಕ ಮಟ್ಟದಲ್ಲಿ ಡಬ್ಲ್ಯೂಟಿಸಿ ಕಟ್ಟಡವನ್ನು ಉಡಾವಣೆ ಮಾಡಿರತಕ್ಕಂಥ ದುಷ್ಕೃತ್ಯವೇ ಇರಬಹುದು, ಅದೇ ರೀತಿಯಲ್ಲಿ ದೇಶದಲ್ಲಿ ಆರ್ಥಿಕವಾಗಿ ಅಭದ್ರತೆಯನ್ನು ಹುಟ್ಟು ಹಾಕುವ ಕಾರ್ಯವನ್ನು ಈ ಮೂಲಕ ದುಷ್ಕರ್ಮಿಗಳು ಮಾಡಲು ಹೊರಟಿದ್ದಾರೆ. ಇದನ್ನು ನಾವು ಪತ್ತೆ ಹಚ್ಚಬೇಕಾಗುತ್ತದೆ. ಅದನ್ನು ಬಿಟ್ಟು ಬರೇ ಈ ನಮ್ಮ ರಾಜ್ಯಕ್ಕೆ ಇದು ಸೀಮಿತ ಎಂದು ತೆಗೆದುಕೊಂಡು ಇವನು ಏನೋ ಮಾಡಿದ್ದಾನೆ, ಇದು ನಕಲಿ ಛಾಪಾ ಕಾಗದ, ಇದು ಅಸಲಿ ಎಂದು ನಮಗೆ ಗೊತ್ತಿಲ್ಲ ಎಂದು ಇದನ್ನು ಕಂಡಿಹಿಡಿಯುವುದಕ್ಕಾಗುವುದಿಲ್ಲ ಎಂದು ಅವರು ಹೇಳುತ್ತಾರೆ. ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ವೈ.ಕೆ.ರಾಮಯ್ಯನವರು ಸಬ್‌ರಿಜಿಸ್ಟ್ರಾರ್ ಏನು ಮಾಡುತ್ತಾ ಇದ್ದಾರೆ, ಅವರಿಗೆ ಅಸಲಿ, ನಕಲಿ ಎಂಬುದು ಗೊತ್ತಾಗುವುದಿಲ್ಲವೇ ಎಂದು ಹೇಳಿದರು. ಸರಕಾರವೇ ನಮಗೆ ಅದು ಗೊತ್ತಾಗುವುದಿಲ್ಲವೆಂದು ಹೇಳಿಕೊಳ್ಳುತ್ತಿದೆ.... ಇದೆಲ್ಲವನ್ನೂ ಸ್ಟ್ಯಾಂಪ್‌ವೆಂಡರ್ಸ್ ಮಾಡುವಂಥಾದ್ದು. ತಾವುಗಳೂ ಕೂಡ ವಕೀಲರಾಗಿದ್ದೀರಿ. ವಕೀಲರ ಸಂಘಗಳ ಮೂಲಕ ಸ್ಟ್ಯಾಂಪ್ ಪೇಪರ್‌ಗಳನ್ನು ಕ್ರಯ ಮಾಡಿಕೊಳ್ಳುತ್ತಿದ್ದೆವು. ಅಲ್ಲಿ ಕೂಡ ಇದು ಗೊತ್ತಾಗಲಿಲ್ಲ. ಇದರ ಮೂಲ ಕಂಡುಬಂದದ್ದು ಕೊಡಗಿನಲ್ಲಿ ಬಹುಶಃ 1993 ಅಥವಾ 1995ರಲ್ಲಿ. ಇದು ಕೊಡಗಿನ ಬಾರ್ ಅಸೊಸಿಯೇಷನ್‌ನಲ್ಲಿ ಕೊಂಡಂಥ ಛಾಪಾ ಕಾಗದಗಳು.... ಆಗ ಮಾನ್ಯ ನಾಣಯ್ಯನವರು ಸಚಿವರಾಗಿದ್ದರು. ಅವರು ಭಾಸ್ಕರ್ ಎನ್ನುವಂಥವರಿಗೆ ಹೇಳಿ ಇದರ ಬಗ್ಗೆ ವಿಚಾರಣೆಯಾಗಬೇಕು ಎಂದು ವ್ಯವಸ್ಥೆ ಮಾಡಿದರು......

ಶ್ರೀ ಬಿ.ಆರ್.ಯಾವಗಲ್:- ಈಗಲೂ ಖೊಟ್ಟಿ ಛಾಪಾ ಕಾಗದಪತ್ರಗಳು ನಡೆಯುತ್ತಿವೆಯೋ ಏನೋ? ಛಾಪಾ ಕಾಗದಪತ್ರಗಳಲ್ಲಿ ಖೊಟ್ಟಿ ಯಾವುದು, ಅಸಲಿ ಯಾವುದು ಎಂದು ಗೊತ್ತಾಗದೆ ಇರುವಂಥ ಪರಿಸ್ಥಿತಿ ಇದ್ದರೆ, ಅದು ಈಗಲೂ ನಡೆಯುತ್ತಿದೆ ಎಂದು ಅರ್ಥವಲ್ಲವೇ?

ಶ್ರೀ ಬಿ.ಎನ್.ಬಚ್ಚೇಗೌಡ:- ಹೌದು, ಈಗಲೂ ನಡೆಯುತ್ತಾ ಇದೆ. ಇವೊತ್ತು ಇವುಗಳ ಮುದ್ರಣ ನಾಸಿಕನಲ್ಲಿ ಆಯಿತಾ? ಅದು ಎಲ್ಲಿ ಮುದ್ರಣವಾಯಿತು ಎಂಬುದು

ನಮಗೆ ಗೊತ್ತಿಲ್ಲ. ಇಷ್ಟು ಕೋಟ್ಯಾಂತರ ರೂಪಾಯಿಗಳ ನಕಲಿ ಛಾಪಾ ಕಾಗದಗಳು ಮತ್ತು ರೆವಿನ್ಯೂ ಸ್ಟ್ಯಾಂಪ್‌ಗಳ ಮುದ್ರಣ ಎಲ್ಲಿ ನಡೆಯಿತು? ಅದು ಈಚೆಗೆ ಎಲ್ಲಿಂದ ಬಿಡುಗಡೆಯಾಯಿತು? ಇದರ ಟೋಟಲ್ ನೆಟ್‌ವರ್ಕ್ ಜಾಲ ಯಾವರೀತಿಯಲ್ಲಿದೆ? ಎಲ್ಲೆಲ್ಲಿ ಇದರ ಮಾರಾಟ ಕೇಂದ್ರಗಳಿವೆ? ಇದು ದೊಡ್ಡ ಹಗರಣವಾದುದರಿಂದ ಇದನ್ನು ಸರ್ಕಾರವಾಗಲಿ ಅಥವಾ ನಾವಾಗಲಿ ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ನಾವು ಚಾರ್ಜ್‌ಶೀಟ್ ಹಾಕಿಬಿಟ್ಟಿದ್ದೇವೆ, ವಿಶೇಷ ನ್ಯಾಯಾಲಯ ರಚನೆ ಮಾಡಿಬಿಟ್ಟಿದ್ದೇವೆ ಅಥವಾ ಹೈಕೋರ್ಟಿನಲ್ಲಿ ಅನೇಕರು ಪಿಐಎಲ್ ಹಾಕಿದ್ದಾರೆ - ಅಲ್ಲಿ ತೀರ್ಮಾನವಾಗಲಿ ಎಂದು ಹೇಳುವ ಹಾಗಿಲ್ಲ. ಸರ್ಕಾರ ಎಂದು ಇದ್ದ ಮೇಲೆ, ಸರ್ಕಾರದ ವಿರುದ್ಧವಾಗಿ ನಡೆದ ಈ ಹಗರಣ ಅಥವಾ ಕೃತ್ಯವೇನಿದೆ ಇದು ಸಮಗ್ರವಾಗಿ ತನಿಖೆಯಾಗಬೇಕಾಗುತ್ತದೆ. ಇವತ್ತು ಸಾಂಗ್ಲಿಯಾನರನ್ನು ನೇಮಕ ಮಾಡಲಾಗಿದೆ. ನಮ್ಮ ಗೃಹಸಚಿವರು ಒಂದು ಕಡೆ ಹೇಳಿದ್ದಾರೆ. ಒಂದು ಪೋಲಿಸ್ ಸ್ಟೇಷನ್‌ನಲ್ಲಿ ಒಂದು ಪ್ರಕರಣ ರಿಜಿಸ್ಟರ್ ಆಗುತ್ತದೆ, ಅಲ್ಲಿಗೆ ಸಂಬಂಧಪಟ್ಟವನು ಆ ಪ್ರಕರಣವನ್ನು ಮೊಕದ್ದಮೆಗೆ ಹಾಕುವುದು ಅವನಿಗೆ ಕೊಟ್ಟಂತಹ ಸ್ವಾತಂತ್ರ್ಯ. ಒಂದು ಕೊಲೆ ಕೇಸಾಗಲಿ, ಡಕಾಯಿತಿಯಾಗಲಿ ಒಂದು ದೂರು ಬಂದಾಗ ಅದನ್ನು ಅವನು ರಿಜಿಸ್ಟರ್ ಮಾಡಿ ವಿಚಾರಣೆಗೆ ತೆಗೆದುಕೊಳ್ಳಬೇಕು. ಆದರೆ ನಮ್ಮ ಗೃಹಸಚಿವರು ಹೇಳುತ್ತಾರೆ ಇಲ್ಲ, ಸಾಂಗ್ಲಿಯಾನ ವರದಿ ಏನು ಕೊಟ್ಟರು, ಸಾಕಷ್ಟು ವಿಷಯಗಳು ಇದರಲ್ಲಿ ಅಡಗಿವೆ, ಹಾಗೆ ಮಾಡಿ ಅಂದಾಗ ಇದನ್ನು ಡೈರೆಕ್ಟರ್ ಜನರಲ್ ಆಫ್ ಪೋಲಿಸ್‌ಗೆ ಒಪ್ಪಿಸಿದ್ದೇವೆ, ಅವರಿಂದ ವರದಿ ಬಂದ ಮೇಲೆ ನಾವು ಕ್ಯಾಬಿನೆಟ್‌ನಲ್ಲಿಟ್ಟು ತೀರ್ಮಾನ ಮಾಡುತ್ತೇವೆ ಎಂದು. ಇದೆಲ್ಲಿ ಸ್ವಾಮಿ ಈ ತರಹ? ಎಲ್ಲೂ ಈ ತರಹ ಹೇಳುವುದನ್ನು ನಾನು ಕೇಳಲಿಲ್ಲ, ಇದು ಮೊದಲನೇ ಬಾರಿ. ಕಮೀಶನರ್ ಮಟ್ಟದಲ್ಲಿರತಕ್ಕಂಥ ಒಬ್ಬ ಅಧಿಕಾರಿ ಇದರ ಬಗ್ಗೆ ವಿಚಾರಣೆ ಮಾಡಿ ವರದಿ ಕೊಟ್ಟ ಮೇಲೆ, ಆ ವರದಿ ಸರಿಯಿಲ್ಲ, ಡಿಜಿಪಿ ವರದಿ ಬಂದ ಮೇಲೆ ಕ್ಯಾಬಿನೆಟ್ ಮುಂದೆ ಇಡುತ್ತೇನೆ ಎನ್ನುವುದು. ಈ ಸಂಶಯ ಯಾಕೆ ಬೇಕು? ಈ ಸಂಶಯ ಬೇಕಾಗಿಲ್ಲ. ಇಲ್ಲಿ ಯಾರನ್ನೋ ಶೀಲ್ಡ್ ಮಾಡುವ ಪ್ರಯತ್ನ ಬೇಕಾಗಿಲ್ಲ. ಯಾಕೆಂದರೆ ಕರೀಂ ಲಾಲಾ ಆತನ ದುಷ್ಟಕೂಟ, ಭೂಗತ ದೊರೆಗಳೆಂದು ಕರೆಸಿಕೊಳ್ಳುವವರ ವಿರುದ್ಧ ಹತ್ತೆಂಟು ಪ್ರಕರಣಗಳಿವೆ, ಇವರ ಹಿಂದೆ ಇರುವವರು ಯಾರು? ಪೋಲೀಸ್ ಆಫೀಸರ್ಸ್, ಡಿವೈಎಸ್‌ಪಿಗಳ ಹೆಸರು ಬಂದಿದೆ. ಅನೇಕ ಪೋಲೀಸ್ ಆಫೀಸರ್ಸ್ ಶಾಮೀಲಾಗಿದ್ದಾರೆಂದು ಬಂದಿದೆ, ನೂರಾರು ಕೋಟಿ ರೂಪಾಯಿಗಳ ಆಸ್ತಿ ಮಾಡಿದ್ದಾರೆ ಎಂದು ಬಂದಿದೆ. ಯಾರು ಆಸ್ತಿ ಮಾಡಿರುವುದು? ಅವರ ಹಿಂದೆ ಇರುವವಗು ಯಾರು? ಇವತ್ತು ಪತ್ರಿಕೆಗಳಲ್ಲಿ ನಾವು ಓದಿದ್ದೇವೆ, ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಸ್ಟೇಷನ್ ಅನ್ನು ಒಬ್ಬ ಅಧಿಕಾರಿ ಏಕೆ ಆಧುನೀಕರಣ ಮಾಡಿಸಿಕೊಳ್ಳುತ್ತಾನೆ? ಗೃಹ ಇಲಾಖೆ ಇದರ ಬಗ್ಗೆ ಏನು ಮಾಡುತ್ತಿದೆ? ಯಾರೋ ಖಾಸಗಿಯವರು 10 ಲಕ್ಷ ರೂಪಾಯಿಯಲ್ಲಿ ರಿನೋವೇಟ್ ಮಾಡಿಕೊಡುತ್ತಾನೆಂದರೆ

ಇವರು ಯಾವರೀತಿ ಆ ಹಣ ತೆಗೆದುಕೊಳ್ಳುತ್ತಾರೆ? 5 ಲಕ್ಷ ರೂಪಾಯಿ ಏಕೆ ತೆಗೆದುಕೊಳ್ಳುತ್ತಾರೆ?

ಶ್ರೀ ಪಿ.ಜಿ.ಆರ್.ಸಿಂಧ್ಯ:-ಮಾನ್ಯ ಅಧ್ಯಕ್ಷರೇ, ಇವತ್ತು ಬಹಳ ಗಹನವಾಗಿರತಕ್ಕಂಥ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಈಗತಾನೇ ಮಾನ್ಯ ಬಚ್ಚೇಗೌಡರು ಪೋಲೀಸ್ ಇಲಾಖೆಯ ಮೇಲೆ ಆರೋಪ ಮಾಡಿದರು. ಅವರು ಏನು ಹೇಳಿದರು ಅಂದರೆ ಪೋಲೀಸ್ ಸ್ಟೇಷನನ್ನು ನವೀಕರಣ ಮಾಡುವ ಸಂದರ್ಭದಲ್ಲಿ 5, 10 ಲಕ್ಷ ರೂಪಾಯಿಗಳನ್ನು ಡೊನೇಷನ್‌ಗಳನ್ನು ಸ್ಥಳೀಯ ಪೋಲೀಸ್ ಅಧಿಕಾರಿಗಳು ತೆಗೆದುಕೊಳ್ಳುತ್ತಾರೆ ಎಂದು. ನನಗೆ ತಿಳಿದಮಟ್ಟಿಗೆ, ಗೃಹ ಇಲಾಖೆಯಿಂದ ಸ್ಪಷ್ಟ ಸುತ್ತೋಲೆ ಇದೆ, ಪ್ರತಿಯೊಬ್ಬ ಅಧಿಕಾರಿ ಹೀಗೆ ಹೀಗೆ ಮಾಡಬೇಕು ಎಂದು ಎರಡನೆಯದಾಗಿ ಯಾರ್ಯಾರೋ ದುಡ್ಡು ಕೊಡುತ್ತೇವೆ ಅಂದರೆ ನೀವು ಕಲೆಕ್ಟ್ ಮಾಡಿಕೊಳ್ಳುತ್ತೀರೋ? ಕಾನೂನಿನ ವಿರುದ್ಧವಾಗಿ ಆ ಕಡೆ ಇರತಕ್ಕ ಜನ ದುಡ್ಡು ಕೊಟ್ಟರೆ ನೀವು ತೆಗೆದುಕೊಂಡು ರಿ ನೋವೇಷನ್ ಮಾಡುತ್ತೀರೋ? ಈ ಪ್ರಶ್ನೆ ಬರುತ್ತದೆ. ನಾನು ಏಕೆ ಇದನ್ನು ಹೇಳಿದೆ ಅಂದರೆ- ಈ ವಿಚಾರ ಬಹಳ ಗಂಭೀರವಾಗಿರುವಂಥಾದ್ದು, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರ ಕೊಡಬೇಕು, ಗೃಹಮಂತ್ರಿಗಳೂ ಸಹ ಉತ್ತರ ಕೊಡಬೇಕು. ಯಾರಿಂದ ನಾವು ಉತ್ತರ ನಿರೀಕ್ಷೆ ಮಾಡುತ್ತೇವೆ? ಕೇಳಲೂ ಇಲ್ಲ ಅಂದರೆ ಇದು ಒಣ ಚರ್ಚೆಯಾಗುತ್ತದೆ.

ಅಧ್ಯಕ್ಷರು:- ಗೃಹ ಸಚಿವರು ಬೆಳಗ್ಗೆ ನನಗೆ ಫೋನ್ ಮಾಡಿ ನಾನು ಮೇಲ್ಮನೆಯಲ್ಲಿರುತ್ತೇನೆ, ಇಲ್ಲಿ ಏನಾದರೂ ವಿಚಾರ ಇದ್ದರೆ ಕರೆಸಿ ಎಂದು ಹೇಳಿದ್ದಾರೆ. ಎರಡೂ ಕಡೆಯಲ್ಲಿಯೂ ಒಂದೇ ವಿಷಯದ ಚರ್ಚೆ ನಡೆದಿದೆ. ಎರಡೂ ಕಡೆ ಒಬ್ಬರೇ ಗೃಹ ಸಚಿವರು ಹೇಗಿರಲು ಆಗುತ್ತದೆ? ನೀವೇ ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನೋಡಿ ಸ್ವಾಮಿ, ನಾನು ಸಾರ್ವಜನಿಕರ ಹಿತದೃಷ್ಟಿಯಿಂದ ಚರ್ಚೆ ಮಾಡುವುದು ಇದು ಬಹಳ ಮುಖ್ಯವಾದ ವಿಷಯ. ಇದು ಅಲ್ಲಿರತಕ್ಕಂಥ ಒಬ್ಬ ಆರೋಪಿ ಯಾವುದೋ ಒಂದು ಪರ್ಟಿಕ್ಯುಲರ್ ಪೋಲಿಸ್ ಸ್ಟೇಷನ್‌ಗೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟ ಅಂದರೆ ಅವನು ಏಕೆ ಕೊಟ್ಟ? ಸುಮ್‌ಸುಮ್ನೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟುಬಿಡುತ್ತಾರ ಸ್ವಾಮಿ? ಆದಾಯ ತೆರಿಗೆ ಇಲಾಖೆಯವರು ಏನು ಮಾಡುತ್ತಿದ್ದರು? ಪೋಲೀಸರು ಮತ್ತು ಇವರು ಶಾಮೀಲಾಗಿದ್ದರಾ ಹಾಗಾದರೆ? ಇವೆಲ್ಲಾ ಪ್ರಶ್ನೆ ಬರುತ್ತವಲ್ಲಾ.

ಅಧ್ಯಕ್ಷರು:- ಮಾನ್ಯ ಬಚ್ಚೇಗೌಡರೇ, ಸ್ಟಾಂಪ್ ಪೇಪರ್ ಬಗ್ಗೆ ಮಾತನಾಡಿ, ಐದು ಲಕ್ಷದ ಮೇಲೆ ಬೇಡಿ.

ಶ್ರೀ ಜಗದೀಶ ಶೆಟ್ಟರ್:- ಅದೇ ರೆಲವೆಂಟ್ ಇರುವುದು. ಐದು ಲಕ್ಷ ರೂಪಾಯಿಗಳನ್ನು ಯಾಕೆ ಕೊಡುತ್ತಾರೆ? ಸುಮ್ಮನೆ ಹಾಗೆಯೇ ಕೊಡುತ್ತಾರೇನು?

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಅನೇಕ ವಿಚಾರಗಳು ಸಬ್‌ಜ್ಯುಡೀಸಾಗುತ್ತದೆ ಎಂದು ಕಾನೂನು ಸಚಿವರು ಮೊನ್ನೆ ಪ್ರತಿಪಾದಿಸಿದರು. ನಾವೆಲ್ಲಾ ಅದನ್ನೆಲ್ಲಾ ಬಿಟ್ಟೇ ಮಾತನಾಡುತ್ತಿರುವುದು. ನಾವು ಮಂತ್ರಿಗಳ ಹೆಸರು ತೆಗೆದುಕೊಳ್ಳಲಿಲ್ಲ, ರಾಜಕಾರಣಿ ಹೆಸರುಗಳನ್ನು ತೆಗೆದುಕೊಳ್ಳಲಿಲ್ಲ, ಡಿವೈಎಸ್‌ಪಿ ಹೆಸರು ತೆಗೆದುಕೊಳ್ಳಲಿಲ್ಲ, ಯಾರ ಹೆಸರನ್ನೂ ತೆಗೆದುಕೊಳ್ಳಲಿಲ್ಲ, ಬಹಳ ಪ್ಲೇನಾಗಿ ಹೇಳಿಕೊಂಡು ಹೋಗುತ್ತಿದ್ದೇವೆ. ನೇರವಾಗಿ ಮಾನ್ಯ ಶ್ರೀಕಂಠಯ್ಯನವರು ಇದರಲ್ಲಿ ಸೇರಿಕೊಂಡಿದ್ದಾರೆ ಅಥವಾ ಮಾನ್ಯ ರೋಷನ್‌ಬೇಗ್ ಇದ್ದಾರೆ, ಮಾನ್ಯ ಗೃಹ ಸಚಿವರು ಇದ್ದಾರೆ ಎಂದು ನಾವು ಹೇಳಲು ಆಗುವುದಿಲ್ಲ, ಅದು ತಪ್ಪಾಗುತ್ತದೆ. ನಾವು ಹೇಳುವುದು ಏನೆಂದರೆ ಈ ವಿಚಾರವನ್ನು ಸಿಬಿಐ ತನಿಖೆಗೆ ಒಪ್ಪಿಸಿದರೆ ಸಾಕಷ್ಟು ವಿಚಾರಗಳು ಈಚೆಗೆ ಬರುತ್ತದೆ, ಸಮಗ್ರವಾಗಿ ಎಲ್ಲಾ ಈಚೆಗೆ ಬರಲಿ ಎಂದು ಮಾತ್ರ ಹೇಳುತ್ತಿರುವುದು. ಏನೋ ಉದ್ದೇಶವಿಟ್ಟುಕೊಂಡು ಯಾರ ಮೇಲೋ ಹೇಳಬೇಕೆಂದು ಅಲ್ಲ. ಇದನ್ನು ಏಕೆ ಹೇಳುತ್ತೇನೆ ಅಂದರೆ, ಆ ಕಡೆಯಿಂದ ಮಾನ್ಯ ಯಾವಗಲ್ ಹೇಳಿದರು ಇವತ್ತಿಗೂ ನಕಲಿ ಛಾಪಾ ಕಾಗದಗಳು ರಿಜಿಸ್ಟ್ರೇಷನ್ ಆಗುತ್ತಿವೆಯೇ ಎಂದು ನಾನು ಮಾನ್ಯ ವೈ.ಕೆ.ರಾಮಯ್ಯನವರಿಗೆ ಹೇಳುತ್ತೇನೆ; ಮೊದಲನೆ ಕಾಗದ ಜೆನ್ಯೆನ್ ಇರುತ್ತದೆ, ಇದು ಸ್ಟಾಂಪ್ ಪೇಪರ್ ವೆಂಡರ್ಸ್ ಹತ್ತಿರ ಆಗುವ ದಂಧೆ. ಕೆಳಗೆ ಹಾಕುವ ಪೇಪರ್ಸ್ ಏನಿವೆ ಅವನ್ನು ನಕಲಿ ಹಾಕುತ್ತಿದ್ದಾರೆ. ಸಬ್‌ರಿಜಿಸ್ಟ್ರಾರ್ ಪ್ರತಿಯೊಂದು ಪೇಪರನ್ನೂ ನೋಡಲು ಆಗುವುದಿಲ್ಲ. ನಿನ್ನೆ ಮಾನ್ಯ ಶ್ರೀನಿವಾಸಗೌಡರು ಹೇಳಿದರು, ಬೇರೆ ದೇಶಗಳಲ್ಲಿ ನಕಲಿ ನೋಟುಗಳನ್ನು ಬೇರ್ಪಡಿಸುವ ಮೆಷಿನ್ ಇರುತ್ತವೆ, ಸಿಂಗಪುರದಲ್ಲೆಲ್ಲಾ ನಾವು ನೋಡಿದ್ದೇವೆ. ಖೋಟಾ ನೋಟನ್ನು ಒಂದು ನಿಮಿಷಕ್ಕೆ ಹಿಡಿದು ಹಾಕುತ್ತಾರೆ. ನಮ್ಮಲ್ಲಿ ಆ ವ್ಯವಸ್ಥೆ ಇಲ್ಲ. ನಮ್ಮ ವ್ಯವಸ್ಥೆಯಲ್ಲಿ ಈಗ ಬ್ಯಾಂಕ್‌ಗಳಲ್ಲಿ 500 ಅಥವಾ 1000ರೂ. ಖೋಟಾ ನೋಟು ಅಸಲಿನೋ ಅಥವಾ ನಕಲಿನೋ ಎಂದು ಗುರುತಿಸಲು ಆಗುತ್ತಿಲ್ಲ, ಅಂಥಾದ್ದರಲ್ಲಿ ನಕಲಿ ಛಾಪಾ ಕಾಗದ ಹೇಗೆ ಗುರ್ತಿಸುತ್ತೀರಿ? ಶ್ರೀಕಂಠಯ್ಯನವರು ಅಸಲಿನೋ ನಕಲೀನೋ ಎಂದು ಗುರ್ತಿಸಲು ನಮ್ಮ ಕೈಲಿ ಆಗುವುದಿಲ್ಲ ಎಂದಿದ್ದಾರೆ. ಆದ್ದರಿಂದ ಇವತ್ತಿಗೂ ನಕಲಿ ಬಳಕೆಯಲ್ಲಿರಬಹುದು, ಅದು ನಮಗೆ ಗೊತ್ತಿಲ್ಲ, ಅದಕ್ಕೇ ಸೋಮಶೇಖರ್ ಏನು ಹೇಳಿದರು ಅಂದರೆ ನಾಳೆಯಿಂದ ಈ ಛಾಪಾ ಕಾಗದ ನಾವು ಉಪಯೋಗಿಸುವುದಿಲ್ಲ ಎಂದು ಡಿಕ್ಲೇರ್ ಮಾಡಿ ನಿಲ್ಲಿಸಿಬಿಡಿ ಎಂದು. ಅದಕ್ಕೆ ಬೇರೆ ವ್ಯವಸ್ಥೆ ಏನು ಇಟ್ಟುಕೊಂಡಿದ್ದೀರಿ ಎಂಬುದನ್ನು ಸರ್ಕಾರ ಹೇಳಲಿ ಎಂದು ಅವರು ಹೇಳಿದರು.

(ಮಾನ್ಯ ಶ್ರೀ ಬಿ.ಆರ್.ಯಾವಗಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾನ್ಯ ಕಂದಾಯ ಸಚಿವರು ಇವತ್ತು ರಿಪ್ಲೈ ಕೊಡುವಾಗ ಘೋಷಣೆ ಮಾಡಲಿ. ಇವತ್ತು ಕಂಪ್ಯೂಟರ್, ವೆಬ್‌ಸೈಟ್ ಅಂತೆಲ್ಲಾ ನಾನಾಭಾಗಗಳಲ್ಲಿ ವೇಗವಾಗಿ ಏನು ಹೋಗುತ್ತಿದ್ದೇವೆ. ಈ ತಂತ್ರಜ್ಞಾನದಲ್ಲಿ ಡೂಪ್ಲಿಕೇಷನ್ ಬರುತ್ತಿವೆ. ಇವತ್ತೇನು ಡಿಜಿಟಲ್ ಆಪರೇಷನ್ಸ್ ಎಂದು ಹೇಳಿಕೊಂಡು ಏನು ಹೋಗುತ್ತಿದ್ದೇವೆ ನಾನಾರೀತಿಯ ಪ್ರಿಟಿಂಗ್ ಟೆಕ್ನಾಲಜಿ ದೇಶದಲ್ಲಿ ಏನೂ ಜಾಸ್ತಿಯಾಗಿದೆ, ಇದರಿಂದ ಇದನ್ನೆಲ್ಲಾ ಮಾಡುವ ಜಾಲ ಎಲ್ಲಾ ಕಡೆ ಇದೆ. ನಮ್ಮ ಸುದ್ದಿಯ ಪ್ರಕಾರ ಸಾವಿರ ರೂಪಾಯಿಯ ಖೋಟ ನೋಟೂ ಇದೆ ಅಂತಾರೆ, ನಮಗೆ ತೆಗೆದುಕೊಳ್ಳಲು ಭಯ, ಐನೂರು ರೂಪಾಯಿ ನೋಟು ಕೊಟ್ಟರೆ ಭಯ. ಹಾಗೆ ಇವತ್ತು ಯಾರು ಛಾಪಾ ಕಾಗದದ ಮೂಲಕ ಆಸ್ತಿ ನೋಂದಾಯಿಸುತ್ತಾರೋ ಅವರಿಗೆ ಸಂಶಯ ಬಂದಿದೆ. ಪ್ರಾಪರ್ಟಿಯನ್ನು ರಿಜಿಸ್ಟರ್ ಮಾಡುವುದಾ ಬಿಡುವುದಾ ಅಂತ. ಏಕೆಂದರೆ ಇವೆಲ್ಲಾ ಇವತ್ತು ಗೂಡು ಸೇರಿವೆ. ಯಾರು ರಿಜಿಸ್ಟ್ರೇಷನ್ ಮಾಡಿಸಿಕೊಂಡಿದ್ದಾನೆ ಅವನ ಮನೆಯಲ್ಲಿ ನಾವು ಹೋಗಿ ಹುಡುಕಲು ಆಗುವುದಿಲ್ಲ ಅವನು ಮನೆಯಲ್ಲಿಟ್ಟುಕೊಂಡಿರುತ್ತಾನೆ. ಆ ಸಂಸ್ಕೃತಿ ನಮ್ಮಲ್ಲಿದೆ. ಛಾಪಾ ಕಾಗದದ ಮೂಲಕ ನಾವು ರಿಜಿಸ್ಟ್ರೇಷನ್ ಮಾಡಿಸಿಕೊಂಡರೇನೇ ನಮಗೆ ಖುಷಿ. ಓ ಪ್ರಾಪರ್ಟಿ ನಮ್ಮದಾಯಿತಪ್ಪ ಅಂತ. ನಮ್ಮ ಸೋಮಶೇಖರ್ ಹೇಳಿದ ವೈಟ್‌ಪೇಪರ್ ಸಂಸ್ಕೃತಿ ಏನು ಹೇಳಿದರು ಅದಿನ್ನೂ ನಮಗೆ ಒಗ್ಗಿಲ್ಲ. ಆ ಸಂಸ್ಕೃತಿಯನ್ನು ನಾವು ಡೆವಲಪ್ ಮಾಡಬೇಕು. ಮಾನ್ಯ ಸೋಮಶೇಖರ್ 5 ಪರ್ಸೆಂಟ್ ಮಾತ್ರ ನಕಲಿ ಕಾಗದ ಬಳಕೆಯಾಗಿರಬಹುದು ಎಂಬ ಅಂಕಿಅಂಶ ಕೊಟ್ಟರು. ಈಗ ನಡೆದಿರತಕ್ಕಂಥ ಟೋಟಲ್ ಡಾಕ್ಯುಮೆಂಟೇಷನ್‌ನಲ್ಲಿ ಇದು ಮಾತ್ರ ಆಗಿರುವುದಕ್ಕೆ ಸಾಧ್ಯ. ಈ ವ್ಯವಸ್ಥೆಯನ್ನು ಕೆಲವು ಕಂಪೆನಿಗಳು, ಸಹಕಾರ ಸಂಘಗಳು, ಕೆಲವು ಬ್ಯಾಂಕಿಂಗ್‌ನಲ್ಲಿ ಈ ವ್ಯವಸ್ಥೆ ಆಗಬಹುದು. ಸಾರ್ವಜನಿಕವಾಗಿ ಆಗುವುದಕ್ಕೆ ನಾವು ಖಾತರಿ ಕೊಟ್ಟು ಎಜ್ಯುಕೇಟ್ ಮಾಡಬೇಕಾಗಿದೆ.

ಶ್ರೀ ಎಚ್.ಸಿ.ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಅನೇಕ ಸದಸ್ಯರು ದೀರ್ಘವಾಗಿ ಮಾತನಾಡಿದ್ದಾರೆ. ಅನೇಕ ಸಲಹೆಗಳನ್ನು ಮಾಜಿ ರೆವಿನ್ಯೂ ಸಚಿವರು ಸಹ ನೀಡಿದ್ದಾರೆ. ತಂತ್ರಜ್ಞಾನದ ಬಗ್ಗೆ ಎಲ್ಲಾ ಹೇಳುತ್ತಿದ್ದಾರೆ. ಅದನ್ನು ಯಾವ ರೀತಿ ಮಾಡಬೇಕೆನ್ನುವ ಬಗ್ಗೆ ಒಂದು ಕಮಿಟಿಯನ್ನು ಮಾಡಿ ಅನೇಕ ಸದಸ್ಯರು ಅದರ ಬಗ್ಗೆ ತಿಳಿವಳಿಕೆ ಇರತಕ್ಕವರು ಸಲಹೆಯನ್ನು ಕೊಡಲಿ. Technology I am telling.

ಶ್ರೀ ಬಿ.ಸೋಮಶೇಖರ್:- ಈಗ ಇರತಕ್ಕ ಪದ್ಧತಿಯಲ್ಲಿ ಎಕ್ಸ್‌ಪೆರಿಮೆಂಟ್ ಆಗಿ ಲ್ಯಾಕುನಾ ಏನಾದರೂ ಕಂಡುಹಿಡಿದಿದ್ದೀರಾ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ:- ಎಲ್ಲವನ್ನೂ ಚರ್ಚೆ ಮಾಡೋಣ.

ಶ್ರೀ ಬಿ.ಸೋಮಶೇಖರ್:- ಆದೇಶ ಹೊರಡಿಸಿರುವುದನ್ನು ನೀವು ಏಕೆ ಇಂಪ್ಲಿಮೆಂಟ್ ಮಾಡಿಲ್ಲ? ಅದನ್ನು ಮಾಡುತ್ತೇವೆಂದು ಹೇಳಿ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ:- ನೀವು ಆದೇಶ ಹೊರಡಿಸಿರುವ ಬಗ್ಗೆ ಅದನ್ನು ಯಾವರೀತಿ ಉಪಯೋಗಿಸಿಕೊಳ್ಳಬೇಕೋ ಉಪಯೋಗಿಸಿಕೊಳ್ಳೋಣ. ಕಮಿಟಿಯವರೇ ಅದನ್ನು ತೀರ್ಮಾನ ಮಾಡಲಿ, ಎರಡೂ ಮಾಡಲಿ. ಉತ್ತಮವಾದ ಸಲಹೆಯನ್ನು ಕೊಡಲಿ. ಅದಕ್ಕಾಗಿ ಸದನದ ಒಂದು ಸಮಿತಿಯನ್ನು ಮಾಡಿ ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳೋಣ ಅದಕ್ಕೇನಂತೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಕಂದಾಯ ಸಚಿವರ ಕಡೆಯಿಂದ ಇವತ್ತು ಲೋಪವಾಗಿದೆ ಎಂದು ನಾನು ಹೇಳುವುದಿಲ್ಲ. ಇವತ್ತು ಇದನ್ನು ಬೆಳಕಿಗೆ ತಂದಂಥದ್ದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು. ಶ್ರೀ ಜಯಂತ್ ಎಂದು ಏನು ಇದ್ದಾರೆ ಅವರು ಸಾಕಷ್ಟು ಇದರ ಬಗ್ಗೆ ಬೆಳಕನ್ನು ಚೆಲ್ಲಿದಂಥ ಮನುಷ್ಯ. ಪೋಲೀಸ್ ಆತನಿಗೆ ರಕ್ಷಣೆ ಕೊಟ್ಟರೆ ಇನ್ನಷ್ಟು ವಿಷಯಗಳು ಈಚೆಗೆ ಬರುತ್ತವೆ. ಆದ್ದರಿಂದ ಆತನಿಗೆ ರಕ್ಷಣೆ ಬೇಕಾಗುತ್ತದೆ. ಇದರ ಜೊತೆಗೆ ಇದಕ್ಕೆ ಸಂಬಂಧಿಸಿದಂತೆ ಗುಜರಾತ್‌ನಲ್ಲಿ ಕೇಸ್‌ಗಳು ದಾಖಲಾಗಿವೆ. ಆಂಧ್ರಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ ಕೇಸ್‌ಗಳು ದಾಖಲಾಗಿವೆ. ವೆಸ್ಟ್-ಬೆಂಗಾಲ್‌ನಲ್ಲೂ ದಾಖಲಾಗಿವೆ. ಹತ್ತಾರು ಮೊಕದ್ದಮೆಗಳು ಈತನ ಮೇಲೆ ಇರತಕ್ಕಂಥಾದ್ದು. ಇವತ್ತು ರಾಷ್ಟ್ರ ವ್ಯಾಪ್ತಿ ಮೊಕದ್ದಮೆಗಳು ಒಂದಲ್ಲ, ಹತ್ತಾರು, ಹಲವಾರು ಇವೆ. ನಮ್ಮ ಪೋಲೀಸ್‌ನವರು ಇನ್‌ಫೀರಿಯರ್ ಇದ್ದಾರೆ, ನಮ್ಮ ಪೋಲೀಸರು ಸಾಕಾಗುವುದಿಲ್ಲವೆಂದು ನಾನು ಹೇಳುವುದಿಲ್ಲ. ನಮ್ಮ ಪೋಲೀಸರಿಗೆ ಎಲ್ಲಾ ಶಕ್ತಿ ಇದೆ. I appreciate our police. ಇವತ್ತು ನಮ್ಮ ಪೋಲೀಸ್‌ನವರು ಹೋಗಿ ಅಲ್ಲಿರುವ ಮೊಕದ್ದಮೆಗಳನ್ನು ತಿಳಿದುಕೊಂಡು ಆ ರಾಜ್ಯದಲ್ಲಿ ಕೊಡುವ ಸಹಕಾರದ ಮೇಲೆ ಇವತ್ತು ನಮ್ಮವರು ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಇವತ್ತು ನಮ್ಮ ಪೋಲೀಸ್‌ನವರು ಎಲ್ಲಾ ರಾಷ್ಟ್ರಗಳಿಗೆ ಹೋಗಿ, ರಾಜ್ಯಗಳಿಗೆ ಹೋಗಿ ಇದನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಇವತ್ತು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಹೇಳಿ ಸಾಂಗ್ಲಿಯಾನ ವರದಿ ಬಂದ ಕೂಡಲೇ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇದರ ಮಧ್ಯೆ ರೀಆ್ಯಕ್ಷನನ್ನು ಕೊಟ್ಟರು. ಹೌದು, ಇದು ದೇಶದ ಮತ್ತು ಬೇರೆ ರಾಜ್ಯದ ವಿವಿಧ ಭಾಗಗಳಲ್ಲಿ ಆಗಿದೆ, ಬೇರೆ ದೇಶಗಳಲ್ಲೂ ಆಗಿದೆ, ಇದನ್ನು ಸಿಬಿಐಗೆ ಒಪ್ಪಿಸಬೇಕೆಂದು ಹೇಳಿ 19-11-2001ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಹೇಳಿಯಾದ ಮೇಲೆ ಅದೇನಾಯಿತು ಎಂಬುದು ನಮಗೆ ಗೊತ್ತಿಲ್ಲ. ಇವತ್ತು ಅದನ್ನು ವಾಪಸ್ ತೆಗೆದುಕೊಂಡರು. ಈ ಬಗ್ಗೆ ಸಿಬಿಐ-ಗೆ

ಕೊಡುವುದು ನಿಂತು ಹೋಯಿತು. ಮಾನ್ಯ ಮುಖ್ಯಮಂತ್ರಿಗಳು ಮೊದಲು ಹೇಳಿದ್ದು ಇದರ ತೀವ್ರತೆಯನ್ನು ಅರಿತುಕೊಂಡು ಇದು ಆಗಬೇಕಾಗುತ್ತದೆ ಎಂದು ಇದ್ದಂಥ ಉದ್ದೇಶವನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ನಾವು ಈ ಸದನದಲ್ಲಿ ಒತ್ತಾಯ ಮಾಡುತ್ತಿರುವುದು ಏನೆಂದರೆ, ಮುಖ್ಯಮಂತ್ರಿಗಳು ಈ ಸದನದಲ್ಲಿ ಹೇಳಬೇಕು, ಇದನ್ನು ಸಿಬಿಐಗೆ ಕೊಟ್ಟು ಸಮಗ್ರ ತನಿಖೆಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ, ಇದರ ಬಗ್ಗೆ ಇವತ್ತು ಅವರು ಫೇರ್ ಆಗಿ ತೀರ್ಮಾನವನ್ನು ಕೊಡಬೇಕಾಗುತ್ತದೆ. ಇವತ್ತು ಜನರಿಗೆ ಇರುವ ಅನುಮಾನ ಅಥವಾ ಸಂಶಯ ಸರ್ಕಾರದ ಮೇಲೆ ಏನು ಇದೆ, ಅಥವಾ ಈ ವ್ಯವಹಾರದ ಮೇಲೆ, ನಕಲಿ ಛಾಪಾ ಕಾಗದಗಳು ಎನ್ನುವುದರ ಮೇಲೆ, ಇದು ಹೋಗಬೇಕಾಗುತ್ತದೆ. ಆ ದೃಷ್ಟಿಯಿಂದ ಇದನ್ನು ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಏನಾಗುತ್ತೋ ಆಗಲೀ, ಯಾರಾದರೂ ರಾಜಕಾರಣಿ ಸಿಕ್ಕಿಹಾಕಿಕೊಂಡರೆ ಇದರಿಂದ ಈಚೆಗೆ ಬರಲಿ, ಯಾರು ಪೋಲೀಸ್ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ, ಎಂಬುದು ಈಚೆಗೆ ಬರಲಿ, ಏಕೆ ಬರಬಾರದು? ಇವತ್ತು ಬೇರೆ ಸರ್ಕಾರಗಳು ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಸಿದ್ಧ ಇವೆ. ಇವತ್ತು ನಮ್ಮ ರಾಜ್ಯದಲ್ಲೇ ಈ ಪ್ರಕರಣ ಹೆಚ್ಚಾಗಿರುವುದರಿಂದ ನಮ್ಮ ರಾಜ್ಯದವನೇ ಮೂಲ ಕರಿಂಲಾಲ ಅವನ ಮೂಲಕ ಆಗಿರುವ ಈ ಪ್ರಕರಣದಲ್ಲಿ ಅವನ ವಿಷಯ ಇಲ್ಲಿ ಬೆಳಕಿಗೆ ಬಂದಿರುವುದರಿಂದ ಇವತ್ತು ಅವ್ಯವಹಾರ ಏನಾಗಿದೆ, ಅಥವಾ ವ್ಯವಹಾರ ಏನು ಅವನು ನಡೆಸಿದ್ದಾನೆ ಸಾವಿರಾರು ಕೋಟಿ ರೂಪಾಯಿಗಳು ಎಂದು ನಾವೇನು ಹೇಳುತ್ತಿದ್ದೇವೆ, ಇದರ ಬಗ್ಗೆ ನಾವು ಒತ್ತಾಯ ಮಾಡತಕ್ಕದ್ದು ಸಮಗ್ರ ತನಿಖೆ ಸಿಬಿಐ ಮೂಲಕ ಆಗಬೇಕೆಂದು. ಇದರ ಜೊತೆಯಲ್ಲೇ ನಮ್ಮ ಕಂದಾಯ ಸಚಿವರ ಹೇಳಿಕೆಗಳು ಇವತ್ತೇನು ಇವೆ. ಅವುಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅದನ್ನು ನಾನು ಈಗಾಗಲೇ ಹೇಳಿದ್ದೇನೆ. ನಮಗೆ ಯಾವುದು ಅಸಲಿ, ನಕಲಿ ಗೊತ್ತಿಲ್ಲವೆಂದು ತಾವು ಅಲ್ಲಿದ್ದಾಗ (ಮಾನ್ಯ ಯಾವಗಲ್‌ರವರನ್ನು ಉದ್ದೇಶಿಸಿ) ಹೇಳಿದಿರಿ. ಇವತ್ತು ನಮ್ಮವರು ಈ ಛಾಪಾ ಕಾಗದಗಳಲ್ಲಿ ರಿಜಿಸ್ಟರನ್ನು ಮಾಡಿಸುತ್ತಲೇ ಇದ್ದಾರೆ. ಅದು ವ್ಯವಹಾರ ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ನಡೆಯುತ್ತಲೇ ಇದೆ. ಇವತ್ತೇನೂ ಅದು ನಿಂತಿಲ್ಲ, ಅದು ನಡೆದುಕೊಂಡು ಹೋಗುತ್ತಲೇ ಇದೆ. ಸರ್ಕಾರ ಇವತ್ತು 750 ಕೋಟಿ ರೂಪಾಯಿಯ ಟಾರ್ಗೆಟ್ ಕೊಟ್ಟಿರುವುದನ್ನು ಅಚೀವ್ ಆಗಿದ್ದಾರೋ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ಇದರಲ್ಲಿ ಎಷ್ಟು ಅವ್ಯವಹಾರ ಆಗಿದೆ ಎಂಬುದು ನಮಗೆ ಗೊತ್ತಿಲ್ಲ. ಈವತ್ತು ಮಾರಾಟ ಮಾಡುವ ವೆಂಡರ್‌ಗಳು ಜಿಲ್ಲಾ ಕೇಂದ್ರಗಳಲ್ಲಿ ಇದ್ದಾರೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಇದ್ದಾರೆ. ಇವತ್ತು ಈ ಪೇಪರ್‌ಸ್ ಕಲ್ಕತ್ತಾದಲ್ಲಿ ಪ್ರಿಂಟ್ ಆಗಿದೆ, ಕಲ್ಕತ್ತ ಪ್ರೆಸ್‌ನಲ್ಲಿ ಆಗಿದೆ ಎಂದು ಹೇಳುತ್ತಾರೆ, ತಾವು ನಾಸಿಕ್‌ನಲ್ಲೇ ಆಗಬಹುದು ಎಂದು ಲಘುವಾಗಿ ಹೇಳಿದ್ದೀರಿ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ:- ಹೇಳಿಲ್ಲ ಎಂದು ನಾನು ನಿರಾಕರಣೆ ಮಾಡಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ತಾವು ಈ ಸದನಕ್ಕೆ ಬಂದ ಮೇಲೆ ನಿನ್ನೆ ಮಾನ್ಯ ಅಧ್ಯಕ್ಷರಿಗೆ ಕಳುಹಿಸಿಕೊಟ್ಟಿದ್ದೇವೆ ಎಂದು ಹೇಳಿದಿರಿ. ಆದರೆ ತಮ್ಮ ಹೇಳಿಕೆ ಪತ್ರಿಕೆಗಳಲ್ಲಿ ಬರಲಿಲ್ಲ. ಯಾವ ಪತ್ರಿಕೆಗಳಲ್ಲೂ ಬರಲಿಲ್ಲ. ಕೌಂಟರ್ ತಾವು ಮಾಡಿದ್ದು ಬರಲಿಲ್ಲ.

ಶ್ರೀ ಕೆ.ಶ್ರೀನಿವಾಸಗೌಡ:- ಮಾನ್ಯ ಕಂದಾಯ ಮಂತ್ರಿಗಳು ಹೇಳುವಾಗ ಹೇಳಿಬಿಟ್ಟಿರುತ್ತಾರೆ. ಆಮೇಲೆ ಇದನ್ನು ಗೃಹಮಂತ್ರಿಗಳು ತಿಳಿದುಕೊಂಡು ಫೋನ್ ಮಾಡಿರುತ್ತಾರೆ. ಇದ್ಯಾವ ಗ್ರಹಚಾರವೆಂದು ಹೇಳಿ ಆಮೇಲೆ ನಾನು ಹೇಳಲೇ ಇಲ್ಲ ಎಂದು ಹೇಳಿರಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ:-ಮಾನ್ಯ ಸಚಿವರಿಗೆ ಅಥವಾ ಸರ್ಕಾರಕ್ಕೆ ಈ ಬಗ್ಗೆ ಮಾಹಿತಿಗಳು ಇಲ್ಲವೋ ಎನ್ನುವ ಅನುಮಾನ ಬರಬಾರದು. The Government is supreme. ಪೋಲೀಸ್ ಇಲಾಖೆಯವರು ಯಾವುದನ್ನು ಬೇಕಾದರೂ ತನಿಖೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಚಂದ್ರೇಗೌಡರು ಈಗ ಬಂದಿದ್ದಾರೆ. ಇದರ ಬಗ್ಗೆ ಏನೋ ಗೋಲ್‌ಮಾಲ್ ನಡೆಯುತ್ತಿದೆ, ಸರ್ಕಾರ ಇದನ್ನು ಏನೋ ಒಳಗೇ ಇಟ್ಟುಕೊಳ್ಳುತ್ತಿದ್ದಾರೆ, ಆ ಒಂದು ಅನುಮಾನಕ್ಕೆ ಅವಕಾಶ ಕೊಡದೇ ಇರುವ ಹಾಗೆ ಪ್ರಾಮಾಣಿಕವಾಗಿ ಸರ್ಕಾರ ಪ್ರಯತ್ನಪಟ್ಟಿದೆ ಈ ದಿಶೆಯಲ್ಲಿ ಎನ್ನುವುದನ್ನು ನಾವು ನಮ್ಮ ಕರ್ನಾಟಕದ ಜನತೆಗೆ, ಈ ರಾಷ್ಟ್ರದ ಜನತೆಗೆ ಕೊಡಬೇಕಾಗುತ್ತದೆ. ಅದಕ್ಕೆ ನಾವು ಮುಂದಾಗಬೇಕಾಗುತ್ತದೆ. ತಾವು ಹಿಂದೆ ಉಳಿಯುವಂಥಾದ್ದಲ್ಲ. ನಿನ್ನೆಯೇ ಚಂದ್ರೇಗೌಡರು ಹೇಳಿದರು. ಅಪರಾಧಿ ಸಿಕ್ಕಿದ್ದು ಅಜ್ಮೇರ್‌ನಲ್ಲಿ. ನಮ್ಮವರು ಸಾಕಷ್ಟು ಕಷ್ಟಪಟ್ಟು ಅವನ ಮೊಬೈಲ್ ಫೋನ್ ಮೂಲಕ ಭಾವಾ ಎನ್ನುವ ಪೋಲೀಸ್ ಅಧಿಕಾರಿಯವರು, ಮರಿಸ್ವಾಮಿಗೌಡ ಯಾರ್‍ಯಾರೋ ಹೋಗಿದ್ದಾರೆ, ಹಿಡಿದುಕೊಂಡು ಬಂದಿದ್ದಾರೆ. 2000ನೇ ಇಸವಿಯ ಆಗಸ್ಟ್‌ನಲ್ಲಿ ಆರ್.ಟಿ.ನಗರದಲ್ಲಿ ಸಿಕ್ಕಿದಂಥ ಮಾಹಿತಿ ಹಾಗೂ ಅಲ್ಲಿ ಸಿಕ್ಕಿದಂಥ ಅಪರಾಧಿಗಳು ಕೊಟ್ಟಂಥ ಹೇಳಿಕೆಗಳ ಮೇಲೆ ಇವನನ್ನು ಹಿಡಿಯುವುದಕ್ಕೆ ಒಂದೂವರೆ-ಒಂದು ಮುಕ್ಕಾಲು ವರ್ಷವಾಯಿತು. ಅಲ್ಲಿಂದ ಹಿಡಿದುಕೊಂಡು ಬಂದಾದ ಮೇಲೆ ಅವನು ಕೊಟ್ಟ ಮಾಹಿತಿ ಮೇಲೆ ಅಡಿಷನಲ್ ಛಾರ್ಜ್‌ಸೀಟ್‌ನ್ನು ಹಾಕಬಹುದು. ಮಾನ್ಯ ಚಂದ್ರೇಗೌಡರಿಗೆ ಅದು ಗೊತ್ತಿದೆ. You can put additional chargesheet at any time. ಯಾವಾಗ ಬೇಕಾದರೂ ತಾವು ಹಾಕಬಹುದು. ಇವತ್ತು ತಾವು ವಿಶೇಷ ನ್ಯಾಯಾಲಯಗಳನ್ನು ಮಾಡಿದ್ದೀರಿ. ಅದಕ್ಕೆ ತಾವು ಹಾಕಬಹುದು. ಇಂಥ ಇಂಥ ವಿಷಯಗಳ ಮೂಲಕ ನಾವು ಮಾಡಿದ್ದೇವೆಂದು ಹೇಳಿ. ಆ ದೃಷ್ಟಿಯಿಂದ ಯಾವತ್ತೂ ಅದಕ್ಕೆ there is no bar under the Criminal Procedure Code. ನಾವು ಹಾಕಿಕೊಂಡು ಹೋಗಬಹುದು. 19-11-2001ರಲ್ಲಿ

ಮಾನ್ಯ ಮುಖ್ಯಮಂತ್ರಿಗಳೇನು ತೀರ್ಮಾನವನ್ನು ತೆಗೆದುಕೊಂಡಿದ್ದರು ಸಿಬಿಐಗೆ ಒಪ್ಪಿಸುವುದಕ್ಕೆ ಸೂಕ್ತವೆಂದು ಹೇಳಿ ಅದನ್ನು ಮಾಡಬೇಕು. ಇವತ್ತು ನಮ್ಮ ಪೋಲೀಸ್ ಅಧಿಕಾರಿಗಳಿಗೆ ಸರ್ವಶಕ್ತಿ ಇದೆ. ಆದರೂ ಕೂಡ ಬೇರೆ ಬೇರೆ ಕಡೆ ಈ ಒಂದು ಪ್ರಕರಣವಾಗಿರುವ ದೃಷ್ಟಿಯಿಂದ ಇದನ್ನು ಪತ್ತೆ ಹಚ್ಚಬೇಕಾಗಿದೆ. ಎಷ್ಟು ಛಾಪಾ ಕಾಗದ ಈಚೆಗೆ ಬಂದಿದೆ, ಎಷ್ಟು ಪ್ರಿಂಟ್ ಆಗಿದೆ? ಅದರ ವ್ಯಾಲ್ಯು ಏನು? ಅದಕ್ಕೇನು ಹಣವನ್ನು ತೊಡಗಿಸಿದ್ದಾರೆ, ಇವೆಲ್ಲಾ ಇವತ್ತು ಈಚೆಗೆ ಬರ ಬೇಕಾಗುತ್ತದೆ, ಒಂದಲ್ಲ ಎರಡಲ್ಲ ಎಲ್ಲವೂ ಬರಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಒಂದು ದೊಡ್ಡ ಜಾಲವನ್ನು ಕಂಡುಹಿಡಿಯುವುದಕ್ಕೋಸ್ಕರ ಈ ಪ್ರಕರಣವನ್ನು ಸಿ.ಬಿ.ಐ.ಗೆ ಒಪ್ಪಿಸುವುದು ಬಹಳ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ತಿಳಿಸಿ ಇವತ್ತೇನು ಅಂತರರಾಜ್ಯದ ವ್ಯವಹಾರದ ಈ ಲೋಪ ಇರತಕ್ಕಂಥ ಈ ನಕಲಿ ಛಾಪಾ ಕಾಗದದ ದಂಧೆ ಇದೆ, ಇದಕ್ಕೇನು ಕೆಲವು ರಾಜಕಾರಣಿಗಳು ಮತ್ತು ಅಧಿಕಾರಿಗಳು ಎಲ್ಲರ ಮೇಲೆ ಏಕೆ ಈ ಸಂಶಯವಿರಬೇಕು, ಈ ಲೋಪ ಹೋಗುವಂಥ ಕಾರಣವಾಗಬೇಕು. ಅದಕ್ಕೋಸ್ಕರ ಇವತ್ತು ಮುಖ್ಯಮಂತ್ರಿಗಳು ಪಾರದರ್ಶಕ ಆಡಳಿತ, ಟ್ರಾನ್ಸಪೆರೆನ್ಸಿ ಆ್ಯಕ್ಟ್‌ನ್ನು ತಂದಿದ್ದಾರೆ, ಹೀಗೆಲ್ಲಾ ಇರುವ ದೃಷ್ಟಿಯಿಂದ ಇದನ್ನೂ ಪಾರದರ್ಶಕವಾಗಿ ತೆಗೆದುಕೊಂಡು ಈ ಸರ್ಕಾರ ಮಾಡಬೇಕಾಗುತ್ತದೆ. ನಿನ್ನೆ ಮಾನ್ಯ ಮಂತ್ರಿಗಳಾದ ರೋಷನ್ ಬೇಗ್‌ರವರು ಹೇಳಿದರು. ನನಗೆ ಬಹಳ ಸಂತೋಷವಾಯಿತು. ಬಹಳ ಚೆನ್ನಾಗಿ ಈ ಸದನದಲ್ಲಿ ಹೇಳಿದರು. I affreciate his stand. He had quoted so many issues. ಇಮ್ಮೆಡಿಯೇಟ್ ಆಗಿ ಅವರು ಸ್ವಂತವಾಗಿ ಸಚಿವನಾಗಿ ನಾನೇನು, ನನ್ನ ಕರ್ತವ್ಯವೇನು? ಎನ್ನುವುದರ ಬಗ್ಗೆ ಮತ್ತು ರಾಷ್ಟ್ರ, ರಾಜ್ಯದ ಬಗ್ಗೆ ಬಹಳ ಚೆನ್ನಾಗಿ ಹೇಳಿದರು.

12.10 ಪಿ.ಎಂ.

ಅವರ ತಮ್ಮ ಇರಬಹುದು, ಸಂಬಂಧಿ ಇರಬಹುದು ಅವರು ಏನಾದರೂ ಆಗಿರಲಿ, ಅವರನ್ನು ಹ್ಯಾಂಗ್ ಮಾಡಿರಿ, ನನ್ನದೇನೂ ಅಭ್ಯಂತರ ಇಲ್ಲ ಎಂಬ ಪದವನ್ನು ಬಳಸಿದರು. ಅವರಿಗೆ ಅಪರಾಧ ಅವನ ಮೇಲೆ ಇರುವುದಾದರೆ ಅಥವಾ ನನಗೆ ಅಲ್ಪಸ್ವಲ್ಪ ಗೊತ್ತಿರುವವರಾದರೆ ಅದರಲ್ಲಿ ಏನೂ ಅಭ್ಯಂತರ ಇಲ್ಲ. 'I have no objection' ಎಂದು ಅವರು ಘೋಷಣೆ ಮಾಡಿದರು I appreciate his stand. ಅದಕ್ಕೋಸ್ಕರ ಯಾರೋ ಏನೋ ಹೌದು ಮಾನ್ಯ ರೋಷನ್ ಬೇಗ್ ಅವರು ಇದ್ದಾರೋ ಅಥವಾ ಇನ್ಯಾರೋ ಇದ್ದಾರೋ ಎಂದು ಎಳೆದುಕೊಂಡು ಹೋದರು, ಅದಕ್ಕೆ ಅವರು ತಡೆ ಹಾಕಿದರು. 'I have nothing to do with this.' ಎಂದು ಅವರು ಹೇಳಿದ್ದಾರೆ. ಅದಕ್ಕೋಸ್ಕರ ನಮಗೆ ಆ ರೀತಿ ಏನಾದರೂ ಅನುಮಾನ ಇದ್ದಾಗ ತಾನೇ ಭಯ ಪಡಬೇಕಾದಂತಹುದು. ನಮ್ಮ ಸರ್ಕಾರದಲ್ಲಿ ಯಾರೋ ಶಾಮೀಲಾಗಿದ್ದಾರೆ

ನಮ್ಮ ಮಂತ್ರಿಗಳು ಯಾರೋ ಅದರಲ್ಲಿ ಇದ್ದಾರೆ. ನಾಳೆ ಏನೋ ಈಚೆಗೆ ಪ್ರಕರಣ ಬರುತ್ತದೆ. ಯಾವ್ಯಾವುದೋ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತ ಮಾಡುತ್ತಿರುವ ಸರ್ಕಾರಗಳೂ ನಾಳೆ ಈಚೆಗೆ ಬರುತ್ತದೆ. ಇದರಲ್ಲಿ ಏನೋ ಇದೆ. ದೆಹಲಿಯಿಂದ ಇಲ್ಲಿಯವರೆಗೂ ಒಳಗೆ ಏನೋ ಇದೆ, ಮಹಾರಾಷ್ಟ್ರದ ಸರ್ಕಾರ ಏನೋ ಆಗಿ ಹೋಗುತ್ತದೆ, ಏನೂ ಇಲ್ಲ ಇದರಲ್ಲಿ. ವೆರಿ ಫೇರ್ ಆಗಿ ಆಗುವಂಥಹುದು. ಯಾವುದೇ ಸರ್ಕಾರಗಳೂ ಇದರಲ್ಲಿ ಇನ್‌ವಾಲ್ವ್ ಆಗಿಲ್ಲ ಎನ್ನುವುದು ಬೇಕಾದರೆ ಇವತ್ತು ಸಿಬಿಐ ತನಿಖೆ ಆಗಬೇಕು. ನಾವು ಇವತ್ತು ಅಂದುಕೊಳ್ಳುತ್ತೇವೆ. ಯಾವ್ಯಾವುದೋ ಕಾರಣದಿಂದ ಡಿಲೇ ಆಗಿದೆ, ನಾನಾ ಕಾರಣದಿಂದ ಡಿಲೇ ಆಗಬಹುದು. ಕೆಲವು ವಾದ ಮಾಡುತ್ತಾರೆ. ಏನು ಸಿಬಿಐ ಪರವಾ ನೀವು, ಅದನ್ನೇ ನೀವು ಹೇಳುತ್ತೀರಿ, ಜಪ ಮಾಡುತ್ತೀರಲ್ಲಾ ಎಂದು ಹೇಳಬಹುದು. ಆದರೆ ನಮ್ಮ ಪೋಲೀಸ್‌ನವರಿಗೆ ಅರ್ಹತೆ ಇಲ್ಲ, ಸಿಬಿಐನವರೇ ಎಲ್ಲಾ ಮಾಡುತ್ತಾರೆ ಎಂತಲ್ಲ. ಇವರ ಅಸಿಸ್ಟೆನ್ಸ್ ಸಹ ಅವರಿಗೆ ಬೇಕಾಗುತ್ತದೆ. ಸ್ಥಳೀಯವಾಗಿ ಈ ಪೋಲೀಸ್‌ನವರೂ ಅವರಿಗೆ ಸಹಾಯ ಮಾಡಬೇಕಾಗುತ್ತದೆ. ಎರಡೂ ಬೇಕಾಗುತ್ತದೆ. ನಮ್ಮ ಸಿಸಿಬಿ ಇರಬಹುದು, ನಮ್ಮ ಸಿ.ಓ.ಡಿ ಇರಬಹುದು, ನಮ್ಮ ಇಂಟೆಲಿಜೆನ್ಸ್ ಇರಬಹುದು. ಅವರಿಗೆ ಸಹಕಾರ ಕೊಟ್ಟು ಇವತ್ತು ಸಿಬಿಐ ಮತ್ತು ನಮ್ಮ ಸ್ಥಳೀಯವಾಗಿ ಮಾಡುವಂತಹ ಎರಡೂ ಪೋಲೀಸ್‌ನವರ ಮೂಲಕ ತನಿಖೆ ಆಗಬೇಕಾಗುತ್ತದೆ. ಈ ತನಿಖೆ ಆಗಿ ಇವತ್ತು ಸತ್ಯಾಂಶಗಳು ಹೊರಗೆ ಬರಲಿ ಮತ್ತು ನಕಲಿ ಛಾಪಾ ಕಾಗದ ಎಂಬ ಈ ದಂಧೆ ಏನು ಇದೆ ಇದು ಮುಂದೆ ಆಗದ ರೀತಿಯಲ್ಲಿ ನಾವು ಕ್ರಮ ಕೈಗೊಳ್ಳಬೇಕು. ನಕಲಿ ಛಾಪಾ ಕಾಗದಗಳು ಇವತ್ತು ಎಲ್ಲಾ ಕಡೆ ಹೋಗುತ್ತಿದೆ. ಇವತ್ತೂ ರಿಜಿಸ್ಟ್ರೇಷನ್ ಆಗುತ್ತಿದೆ, ಡಾಕ್ಯುಮೆಂಟೇಷನ್ ಆಗುತ್ತಿದೆ. ಇದು ಆಗದೇ ಇರುವ ರೀತಿಯಲ್ಲಿ ಆಗುವಂತಹದಕ್ಕೆ ಮಾನ್ಯ ಸಚಿವರು ಸದನ ಸಮಿತಿಯನ್ನು ರಚನೆ ಮಾಡುತ್ತೇವೆ, ತಜ್ಞರ ಸಮಿತಿಯನ್ನು ರಚನೆ ಮಾಡುತ್ತೇವೆ ಎಂದು ಹೇಳಿದರು. ನಾನು ಹೇಳುವುದು ಏನೆಂದರೆ ಇವತ್ತು ನಕಲಿ ಛಾಪಾ ಕಾಗದ ಇದೆ ಎಂದು ಸರ್ಕಾರ ಒಪ್ಪಿಕೊಳ್ಳುವುದಾದರೆ ಅದರ ಮೂಲಕ ಆಗುವಂತಹ ರಿಜಿಸ್ಟ್ರೇಷನ್ ಅನ್ನು ಇವತ್ತೆ ರದ್ದು ಮಾಡಬೇಕು. ಆ ತೀರ್ಮಾನವನ್ನು ತಾವು ಘೋಷಣೆ ಮಾಡಬೇಕು. ಹಳೆಯ ಛಾಪಾ ಕಾಗದಗಳಿಗೆ ಇವತ್ತು ಅದರಲ್ಲಿ ಎಂಟ್ರಿ ಇರುವುದಿಲ್ಲ. 1998ರಲ್ಲಿ ಆಯಿತು, 1999ರಲ್ಲಿ ಆಯಿತು. 1996ರಲ್ಲಿ ಆಯಿತು, ಅವನೇ ಒಂದು ಸೀಲ್ ಹಾಕುವುದು. 1996ರದ್ದು ಸ್ಟ್ಯಾಂಪ್ ಕೊಡಿ ಎಂದರೆ 100 ರೂಪಾಯಿ ಜಾಸ್ತಿ ತೆಗೆದುಕೊಂಡು ಅದನ್ನೇ ಸ್ಟ್ಯಾಂಪ್‌ವೆಂಡರ್ ಕೊಡುತ್ತಾನೆ. ಅವನು ಇದನ್ನು ಮಾರುತ್ತಾ ಹೋಗುತ್ತಾನೆ. ಇದು ನಮಗೇನೂ ಅರ್ಥ ಆಗುವುದಿಲ್ಲ. ಮಾನ್ಯ ಸಚಿವರು ಹೇಳುತ್ತಾರೆ. ನಾವು ನಾಸಿಕ್-ಗೆ ಅಥವಾ ಅವರಿಗೆ ಏನು ಇಂಡೆಂಟ್ ಮಾಡುತ್ತೇವೆ ಅಷ್ಟು ಛಾಪಾ ಕಾಗದ ನಮಗೆ ಕೊಡುವುದಿಲ್ಲ, ಬೇಡಿಕೆ

ಜಾಸ್ತಿ ಇದೆ ಎಂದು ಹೇಳುತ್ತಾರೆ. ಬೇಡಿಕೆ ಜಾಸ್ತಿ ಇದೆ ಎಂದಾಗ ಈ ಕೆಲಸವೇ ಆಗುತ್ತಿರತಕ್ಕದ್ದು. ತಾವೇನು ಬೇಡಿಕೆ ಜಾಸ್ತಿ ಇದೆ, ನಮ್ಮ ಕೈಯಲ್ಲಿ ಛಾಪಾ ಕಾಗದ ಪೂರೈಸುವುದಕ್ಕೆ ಆಗುವುದಿಲ್ಲ ಜನರ ಬೇಡಿಕೆಗೆ ತಕ್ಕ ಹಾಗೆ ಎಂದು ನೀವೇನು ಹೇಳುತ್ತೀರೋ, ಅವತ್ತೇ ಈ ಕಾರ್ಯ ಆಗುವಂಥಾದ್ದು. ಬೇಡಿಕೆಗೂ ಮತ್ತು ಸರ್ಕಾರ ಹಾಕುವ ಇಂಡೆಂಟಿಗೂ ಸರಿಸಮಾನವಾಗಿ ಇರಬೇಕು. ತಾವು ಅದನ್ನು ಹೇಳಿ. ಬೇಡಿಕೆ ಈ ರಾಜ್ಯದ್ದು ಎಷ್ಟು ಇದೆ?

ಶ್ರೀ ಎಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು):- ಸ್ಟಾಂಪ್‌ಗೆ ಬೇಡಿಕೆ ಜಾಸ್ತಿ ಛಾಪಾ ಕಾಗದಕ್ಕೆ ಬೇಡಿಕೆ ಅಷ್ಟೊಂದು ಜೋರಾಗಿ ಇಲ್ಲ.

ಶ್ರೀ ಕೆ.ಶ್ರೀನಿವಾಸಗೌಡ:- ಖೋಟಾ ಎಂದು ಗೊತ್ತಾಗಿ ಬಿಟ್ಟಿದೆ. ಆದ್ದರಿಂದ ಅದಕ್ಕೆ ಬೇಡಿಕೆ ಕಡಿಮೆ ಆಗಿದೆ.

ಶ್ರೀ ಎಚ್.ಸಿ.ಶ್ರೀಕಂಠಯ್ಯ:- ಇದು ಮೊದಲಿನಿಂದಲೂ ಇದೆ, ಗೊತ್ತಾಗಿರುವುದು ಅಲ್ಲ. ಇರುವುದು ಒಂದೇ ಒಂದು. ನಮಗೆ ನಾಸಿಕ್‌ನಿಂದ ಸಪ್ಲೈ ಆಗುವುದು. ಅಲ್ಲಿಂದ ಸಪ್ಲೈ ಮಾಡುವಂಥವರು ಬಾಂಬೆ, ಯುಪಿ, ಗುಜರಾತ್ ಕಡೆಗೆ ಜಾಸ್ತಿ ಕಳುಹಿಸುತ್ತಾರೆಯೇ ಹೊರತು ನಮ್ಮ ಕಡೆಗೆ ಕಳುಹಿಸುವುದಿಲ್ಲ. ಸ್ಟ್ಯಾಂಪ್‌ಗಳನ್ನೂ ಕಳುಹಿಸುವುದಿಲ್ಲ. ಇದನ್ನು ಮಾನ್ಯ ಶೆಟ್ಟರ್‌ರವರಿಗೆ ಹೇಳಿ. ರೆಡ್ಡಿಯವರು ನನ್ನ ಸ್ನೇಹಿತರು ಎಲ್ಲೋ ಹೋಗಿದ್ದಾರೆ. ಮೈಸೂರಿನಲ್ಲಿ ಒಂದು ಟಂಕಸಾಲೆ ಇದೆ. ಅಲ್ಲೇ ಸ್ಟ್ಯಾಂಪ್ ಮಾಡಿಸಲು ಒಂದು ಟಂಕಸಾಲೆ ಮಾಡಿಸಿ ಎಂದು ಹೇಳಿದೆ ಕೇಂದ್ರ ಸರ್ಕಾರದ ಜೊತೆಗೆ ವ್ಯವಹಾರ ಮಾಡಿ. ಒಂದು ರೂಪಾಯಿ, ಐದು ರೂಪಾಯಿ ಸ್ಟ್ಯಾಂಪ್‌ಗಳೇ ಇಲ್ಲಿ ಇಲ್ಲ, ಸರಬರಾಜು ಆಗುತ್ತಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ:- ಆ ಒಂದು ತೀವ್ರತೆಯನ್ನು ಅರ್ಥ ಮಾಡಿಕೊಂಡು ಸರಬರಾಜು ಇಲ್ಲ ಎಂದುಕೊಂಡು ಇವತ್ತು ಇಂತಹ ದಂಧೆಗಳಿಗೆಲ್ಲಾ ಅವಕಾಶ ಮಾಡಿಕೊಡುವಂಥಹದು. ಆ ದೃಷ್ಟಿಯಿಂದ ಇಂತಹ ನಕಲಿ ಛಾಪಾ ಕಾಗದದಿಂದ, ನಮ್ಮ ಆರ್ಥಿಕ ವ್ಯವಸ್ಥೆಯನ್ನೇ ಹಾಳು ಮಾಡುವಂತಹ ಕಾರ್ಯಕ್ಕೆ ತಡೆ ಹಾಕುವುದರಲ್ಲಿ ಇಂಟೆಲಿಜೆನ್ಸ್, ನಮ್ಮ ಸರ್ಕಾರ, ನಾವುಗಳು ಸಾಕಷ್ಟು ಗಮನ ಕೊಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಇವನ್ನೆಲ್ಲಾ ನೋಡುತ್ತಿದ್ದರೆ ಕಡೆಗೆ ಏನು ಮಾಡುತ್ತಾರೋ ಗೊತ್ತಿಲ್ಲ? ದೇಶದ ಭದ್ರತೆ, ಅಭದ್ರತೆ ಮಾಡುವ ವ್ಯವಸ್ಥೆಗಳು ಆರ್ಥಿಕ ರಂಗದಲ್ಲೂ ಇರಬಹುದು. ನಮ್ಮ ದೇಶದ ಮೇಲೆ ಇವತ್ತು ನಾನಾ ರೀತಿಯಿಂದ ಇಂತಹ ಧಾಳಿಗಳು ನಡೆಯುತ್ತಿವೆ. ಇದನ್ನು ನಾವು ದಿನನಿತ್ಯ ನೋಡುತ್ತಿದ್ದೇವೆ. ಇದಕ್ಕೆ ಕಡಿವಾಣ ಹಾಕುವಂತಹ ಕಾರ್ಯವನ್ನು ನಾವು ಮಾಡಬೇಕಾಗುತ್ತದೆ. ಸರ್ಕಾರ ಇದನ್ನು ಬಹಳ

ಲಘುವಾಗಿ ತೆಗೆದುಕೊಳ್ಳುವ ಹಾಗಿಲ್ಲ. ನಾವು ವಿಚಾರಣೆಗೆ ಒಪ್ಪಿಸಿದ್ದೇವೆ, ಸ್ಪೆಷಲ್ ಕೋರ್ಟ್ಸ್ ಮಾಡಿದ್ದೇವೆ, ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ರಿಟ್ ಪಿಟಿಷನ್ ಹಾಕಿ ಬಿಟ್ಟಿದ್ದಾರೆ. ಯಾರು ಮಾತನಾಡಬೇಡಿ. ಎಲ್ಲರೂ ಬಾಯಿ ಮುಚ್ಚಿಕೊಳ್ಳಿ, ಇದಲ್ಲ ನೀವು ನಮಗೆ ಹೇಳಬೇಕಾದ ತತ್ವ. ಇದು ಇವರು ಮಾಡಬೇಕಾದ ಕೆಲಸ. ಏನು ಬೇಕಾದರೂ ವಿಚಾರಣೆಗೆ ಅವಕಾಶ ಮಾಡಿಕೊಡುತ್ತೇವೆ. ಸತ್ಯ ಹೊರಗೆ ಬರಲಿ ಎನ್ನುವ ತೀರ್ಮಾನ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲ ಎಂದರೆ ಜನ ಇವರನ್ನು ಸಂಶಯದಿಂದ ಕಾಣುತ್ತಾರೆ. ಏನೋ ಇವರು ಹೈಡ್ ಮಾಡುತ್ತಿದ್ದಾರೆ, ಏನೋ ಮುಚ್ಚಿಬಿಡುತ್ತಿದ್ದಾರೆ. ಇದರಲ್ಲಿ ಇವತ್ತು ಒಳಗೆ ಏನೋ ಅವ್ಯವಹಾರ ನಡೆದಿದೆ. ಆ ದೃಷ್ಟಿಯಿಂದ ಇವತ್ತು ಸರ್ಕಾರ ಅದಕ್ಕೆ ಅವಕಾಶ ಕೊಡದೇ ಓಪನ್ ಮೈಂಡಿನಲ್ಲಿ ಬಂದು ಸಿಬಿಐ ತನಿಖೆಗೆ ಒಪ್ಪಬೇಕು ಎಂದು ಈ ಸರ್ಕಾರವನ್ನು ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ, ತಮಗೆ ವಂದನೆಗಳು.

ಶ್ರೀ ವೈ.ಕೆ.ರಾಮಯ್ಯ:- ಅವರ ಭಾಷಣದ ನಂತರವಾದರೂ ಸರಿ ನನಗೆ ಎರಡು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಛೇರ್ಮನ್:- ಲಿಸ್ಟ್‌ನಲ್ಲಿ ತಮ್ಮ ಹೆಸರು ಇಲ್ಲ.

ಶ್ರೀ ವೈ.ಕೆ.ರಾಮಯ್ಯ:- ಲಿಸ್ಟ್‌ನಲ್ಲಿ ನನ್ನ ಹೆಸರು ಇಲ್ಲ ಎಂಬುದು ಗೊತ್ತಿದೆ. ನಮ್ಮ ಊರಿನಲ್ಲಿ ಹಬ್ಬದ ಭರಾಟೆ. ಇಲ್ಲೂ ಏನೂ ಮಾಡುತ್ತಿಲ್ಲ, ಅಲ್ಲಾದರೂ ಮರಿ ಊಟಕ್ಕೆ ಬನ್ನಿ ಎಂದು ಜನ ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಅಭಿಪ್ರಾಯವನ್ನೂ ಸೇರಿಸೋಣವೆಂದು, ಅದಕ್ಕೆ ಎರಡು ನಿಮಿಷ ಅವಕಾಶ ಮಾಡಿಕೊಡಿ.

ಛೇರ್ಮನ್:- ಲಿಸ್ಟ್ ಇದೆ, ಅದು ಮುಗಿದ ನಂತರ ನೋಡೋಣ.

+ ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ):- ಮಾನ್ಯ ಅಧ್ಯಕ್ಷರೆ, ಕೋಟ್ಯಾಂತರ ರೂಪಾಯಿಗಳ ನಕಲಿ ಛಾಪಾ ಕಾಗದದ ಹಗರಣ ಈ ರಾಜ್ಯದಲ್ಲಿ ಇದುವರೆಗೆ ದಾಖಲು ಆಗಿರುವ ಪ್ರಮುಖ ಕರ್ಮಕಾಂಡಗಳಲ್ಲಿ ಅತ್ಯಂತ ದೊಡ್ಡದು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಎಲ್ಲರೂ ಕೋಟ್ಯಾಂತರ ರೂಪಾಯಿಗಳ ಹಗರಣವಿದು ಎಂದು ಹೇಳುತ್ತಿದ್ದಾರೆ. ಎಷ್ಟು ಕೋಟಿ ಎಂದು ಗೊತ್ತಿದೆಯಾ? ಆಕಾಶದಲ್ಲಿ ನಕ್ಷತ್ರ ಎಣಿಸಿದ ಹಾಗೆ ಎಣಿಸುತ್ತಲೇ ಇರುವುದಾ?

ಶ್ರೀ ಕೆ.ಶ್ರೀನಿವಾಸ ಗೌಡ:- ಅದು ಸರ್ಕಾರದ ಜವಾಬ್ದಾರಿ. ನಾವು ಹೇಳುತ್ತಿದ್ದೇವೆ,

ಹತ್ತು ಸಾವಿರ ಕೋಟಿ ರೂಪಾಯಿಗಳ ವ್ಯವಹಾರ ಆಗಿದೆ ಎಂದು. ಅದನ್ನು ಕಂಡು ಹಿಡಿಯುವ ಜವಾಬ್ದಾರಿ ನಿಮ್ಮದು. ಇದುವರೆಗೂ ಎಷ್ಟು ಆಗಿದೆ ಎಂದು ಅಸೆಸ್ ಮಾಡುವುದಕ್ಕೂ ನಿಮ್ಮ ಸರ್ಕಾರದಲ್ಲಿ ಶಕ್ತಿ ಇಲ್ಲವಲ್ಲಾ?

ಶ್ರೀ ಡಿ.ಬಿ.ಚಂದ್ರೇಗೌಡ:- ಆಕಾಶದಲ್ಲಿ ನಕ್ಷತ್ರಗಳು ಎಷ್ಟು ಇದ್ದಾವೋ ಅಷ್ಟು ಕೋಟಿ.

ಶ್ರೀ ಕೆ.ಶ್ರೀನಿವಾಸ ಗೌಡ:- ಆಗಸ್ಟ್ 20, 2000ದಲ್ಲಿ ಸಿಕ್ಕಿದಂತಹ ಈ ಪ್ರಕರಣದ ಬಗ್ಗೆ ಎಷ್ಟು ಸಾವಿರ ಕೋಟಿ ವ್ಯವಹಾರ ಆಗಿದೆ ಎಂದು ಇದುವರೆಗೂ ನೀವು ಕಂಡು ಹಿಡಿದಿಲ್ಲ. ಇದು ಸರ್ಕಾರದ ಜವಾಬ್ದಾರಿ.

ಶ್ರೀ ಡಿ.ಬಿ.ಚಂದ್ರೇಗೌಡ:- ಸರ್ಕಾರ ಒಂದರದ್ದು ಜವಾಬ್ದಾರಿ ಅಲ್ಲ. ಸರ್ಕಾರಗಳ ಮತ್ತು ಕೇಂದ್ರ ಸರ್ಕಾರದ್ದು ಸೇರಿದೆ.

ಶ್ರೀ ಡಿ.ವಿ.ಸದಾನಂದ ಗೌಡ:- ಕೇಂದ್ರ ಸರ್ಕಾರವನ್ನು ಏಕೆ ಸೇರಿಸಿದಿರಿ ಹೇಳಿ?

ಶ್ರೀ ಡಿ.ಬಿ.ಚಂದ್ರೇಗೌಡ:- ಕೇಂದ್ರ ಸರ್ಕಾರದ ಜವಾಬ್ದಾರಿ ಎಲ್ಲಿದೆ ಎಂದು ಹೇಳಿದರೆ ಅಂತರ್‌ರಾಜ್ಯದ ವ್ಯವಹಾರ ಬಂದಾಗ ಕೇಂದ್ರ ಸರ್ಕಾರ ಏನು ಮಾಡಬೇಕು ಅಂತ? ಕೈಕಟ್ಟಿಕೊಂಡು ಸುಮ್ಮನೇ ಕುಳಿತು ಬಿಟ್ಟು ನಕ್ಷತ್ರ ಎಷ್ಟು ಇದೆ ಎಣಿಸಿ ಎಂದರೆ ಹೇಗೆ?

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ:- ನಾವು ಸಿಬಿಐ ತನಿಖೆಗೆ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದೆವು.

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ:- ಅಧಿಕಾರಿಗಳನ್ನು ರಕ್ಷಣೆ ಮಾಡಬೇಕು. ಶಾಮೀಲಾದ ಅಧಿಕಾರಿಗಳನ್ನು ರಕ್ಷಣೆ ಮಾಡಬೇಕು ಎಂದು ಹೇಳಿ ಕೇಂದ್ರ ಸಿಬಿಐಗೆ ಹ್ಯಾಂಡ್ ಓವರ್ ಮಾಡಲು ಏಕೆ ಹಿಂದೆ ಮುಂದೆ ನೋಡುತ್ತಿದ್ದೀರಿ? ಈಗಲೂ ಕಾಲ ಮಿಂಚಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ:- ಕೇಳಿ. ಎಲ್ಲಿ ಇನ್‌ವೆಸ್ಟಿಗೇಷನ್ ಆಗಿ...........

ಶ್ರೀ ಡಿ.ವಿ.ಸದಾನಂದಗೌಡ:- ಇನ್ನೂ ಕಾಲ ಮಿಂಚಿಲ್ಲ, ತಕ್ಷಣ ಘೋಷಣೆ ಮಾಡಿ ಸಿಬಿಐಗೆ ರೆಫರ್ ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ:- ಎಲ್ಲಿ ಇನ್‌ವೆಸ್ಟಿಗೇಷನ್ ಆಗಿ ಛಾರ್ಜ್ ಶೀಟ್ ಹಾಕಿದ್ದಾರೋ ಆ ಇನ್‌ವೆಸ್ಟಿಗೇಷನ್ ಸಿಬಿಐಗೆ ಕೊಡಿ ಎಂದು ಕೇಳುತ್ತೀರಿ. ಎಲ್ಲಿ ಇನ್ನೂ

ಪ್ರಾರಂಭವೇ ಆಗಿಲ್ಲ ಅವರ ಬಗ್ಗೆ ಮಾತನಾಡುವುದೇ ಇಲ್ಲ. ಆ ರಾಜ್ಯಗಳೂ ಹಾಗೆಯೇ ಹೋಗಿ ಬಿಡುವುದಾ? ಅದಕ್ಕೆ ಕೇಂದ್ರ ಸರ್ಕಾರದ ಜವಾಬ್ದಾರಿ ಇಲ್ಲ ಎಂದು ಸುಮ್ಮನೆ ಕುಳಿತುಬಿಡುವುದಾ?

ಶ್ರೀ ಜಗದೀಶ್ ಶೆಟ್ಟರ್:- ಆಗಸ್ಟ್ 10ನೇ ತಾರೀಖಿನ ಛಾರ್ಜ್ ಶೀಟ್ ಬಗ್ಗೆ ಹೇಳುತ್ತಿದ್ದೀರಿ. ಆ ಅಬ್ದುಲ್ ಕರೀಂ ಅರೆಸ್ಟ್ ಆದ ಮೇಲೆ ಸಬ್ಸಿಕ್ವೆಂಟ್ ಡೆವಲಪ್‌ಮೆಂಟ್ಸ್ ಆಯಿತು. ಅದರ ಬಗ್ಗೆ ಹೇಳುತ್ತಿಲ್ಲ. ಮತ್ತೊಂದಿಷ್ಟು ಹೆಸರುಗಳು ಬಂದಿವೆ.

SRI D.B.CHANDRE GOWDA:- We are discussing the Indian Stamps Act, not the Karnataka Stamps Act. It is an Act of Parliment.

ಶ್ರೀ ಜಗದೀಶ್ ಶೆಟ್ಟರ್:-ಆರೋಪಿ ಏನು ಇದ್ದಾನೆ, ಆ ಆರೋಪಿ ಕರ್ನಾಟಕದಲ್ಲಿ ಇದ್ದಾನೆ. 8-10 ಕೇಸ್‌ಗಳು ಇಲ್ಲೇ ದಾಖಲು ಆಗಿವೆ ಮತ್ತು ಇನ್ನೂ ಆ ಆರೋಪಿಗಳು ಇಲ್ಲೇ ಇದ್ದು ಅಡ್ಡಾಡುತ್ತಿದ್ದಾರೆ. ಇವತ್ತಿಗೂ ನಕಲಿ ಛಾಪಾ ಕಾಗದ ಚಲಾವಣೆ ಆಗುತ್ತಿವೆ. ಹಾಗಾದರೆ ನೀವೇಕೆ ಸಿಬಿಐಗೆ ಕೊಡಲು ಹಿಂದೇಟು ಹಾಕುತ್ತಿದ್ದೀರಿ?

ಶ್ರೀ ಡಿ.ಬಿ.ಚಂದ್ರೇಗೌಡ:- ಇನ್‌ವೆಸ್ಟಿಗೇಷನ್ ಆಗಿ ಛಾರ್ಜ್ ಶೀಟ್ ಹಾಕಿದ್ದೇವೆ ಎಂದ ಮೇಲೆ ಹಿಂದೇಟು ಏಕೆ?

ಶ್ರೀ ಜಗದೀಶ್ ಶೆಟ್ಟರ್:- ಛಾರ್ಜ್‌ಶೀಟ್ ಹಾಕಿದ ಮೇಲೆ ಮುಗಿಯಿತೋ? ಆ ಅಬ್ದುಲ್ ಕರೀಂ ಲಾಲಾ ಅರೆಸ್ಟ್ ಆಗುವ ಮುಂಚೆ ಛಾರ್ಜ್ ಶೀಟ್?

ಶ್ರೀ ಡಿ.ಬಿ.ಚಂದ್ರೇಗೌಡ:- ಅಷ್ಟಾದರೂ ಆಗಿದೆಯಲ್ಲಾ.

ಶ್ರೀ ಜಗದೀಶ್ ಶೆಟ್ಟರ್:- ಅಬ್ದುಲ್ ಕರೀಂಲಾಲಾ ಅರೆಸ್ಟ್ ಆದ ಮೇಲೆ ಮುಂದೆ ಹೊಸ ಹೆಸರುಗಳು ಬಂದಿವೆ. ಮತ್ತೆ 22 ಜನ ಆರೋಪಿಗಳ ಹೆಸರುಗಳು ಬಂದಿವೆ. ಅವರನ್ನು ಏಕೆ ಅರೆಸ್ಟ್ ಮಾಡಿಲ್ಲ?

SRI D.B.CHANDRE GOWDA:- Prime accused has been booked.

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ:- ಇವತ್ತೂ ಕೂಡ ಇನ್‌ವೆಸ್ಟಿಗೇಷನ್ ಕರ್ನಾಟಕದಲ್ಲಿ ನಡೆಯುತ್ತಿದೆಯಾ ಎಂದು ಸರ್ಕಾರ ಒಪ್ಪಿಕೊಳ್ಳುತ್ತಿದೆಯಾ?

SRI D.B.CHANREGOWDA:- Prime accused has been arrested. There are two things, one is with reference to the Home Department, with reference to the Criminal Procedure Code and the Indian Penal Code. The other is the Indian Stamps Act. I paid Compliments to the Hon'ble Member Sri Somashekhar, who was the Ex-Revenue Minister. ಬಹಳ ಪಾಸಿಟಿವ್ ಕಾಂಕ್ರೀಟ್ ಸಜೆಶನ್ಸ್ ಕೊಟ್ಟರು. ಆ ರೀತಿ ಸಜೆಶನ್ಸ್ ಕೊಡುವುದನ್ನು ಬಿಟ್ಟು ರೈತರಿಗೆ ತೊಂದರೆಯಾಗಿದೆ, ರಿಜಿಸ್ಟ್ರೇಷನ್ ಆ್ಯಕ್ಟ್‌ನಲ್ಲಿ ತೊಂದರೆಯಾಗಿದೆ ಎಂದರೆ ಅದನ್ನು ಸರಿಪಡಿಸೋಣ. ''ಸಿ.ಬಿ.ಐ.ಗೆ ಕೊಡಿರಿ, ಸಿ.ಬಿ.ಐ.ಗೆ ಕೊಡಿರಿ'' ಎನ್ನುವುದಾದರೆ ಸಿ.ಬಿ.ಐ.ಗೆ ಕೊಟ್ಟರೆ ಡೀಡ್ಸ್ ರಿಜಿಸ್ಟರ್ ಆಗಿರುವುದು ಎಲ್ಲವೂ ಸರಿಯಾಗುತ್ತದೆಯೇ?

ಶ್ರೀ ಬಿ.ಎನ್.ಬಚ್ಚೇಗೌಡ:- ಇದರ ಬಗ್ಗೆ ಸಮಾಜದಲ್ಲಿ ಒಂದು ಭಯ ಇರಬೇಕು. ಒಂದು ಏಜೆನ್ಸಿ ಮಾಡಿತು, ಇಂಥವರು ಅಪರಾಧಿಗಳಾದರು, ಇಂತಹವರನ್ನು ಹಿಡಿದರು, ಶಿಕ್ಷಿಸಿದರು ಎಂದು ಜನರಿಗೆ ತಿಳಿಯುವಂತೆ ಮಾಡಬೇಕು. ತಪ್ಪು ಮಾಡುವವರು ಭಯ ಪಡುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಎಲ್ಲರೂ ಸಹ ಅದನ್ನೇ ಮಾಡುತ್ತಾರೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಆ ಭಯ, ಆ ಕಳಕಳಿ ಇರುವುದರಿಂದಲೇ ಕನಿಷ್ಟ ಕರ್ನಾಟಕದ ಪೋಲೀಸರು ಎಂತೆಂತಹ ಕ್ಲಿಷ್ಟ ರೀತಿಯ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಮಾನ್ಯ ಸಿಂಧ್ಯರವರು ಇದರ ಬಗ್ಗೆ ಏಕೋ ಮಾತನಾಡುವುದಿಲ್ಲ. We have inherited his government. We have inherited his establishments. He should say what he has got to say about the investigation ಇಲ್ಲಿ ತೌಡು ಕುಟ್ಟುವ ಕೆಲಸ ಆಗಿಬಿಟ್ಟರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಚಂದ್ರೇಗೌಡರೇ, ಬೇರೆ ಪ್ರಕರಣಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ, ಸದರಿ ಪ್ರಕರಣದಲ್ಲಿ ಹೊಸ ಹೊಸ ಹೆಸರುಗಳು ಏನು ಹೊರಗೆ ಬರುತ್ತಿದೆ, ಏನೊಂದು ರಾಜಕೀಯ ಹಿತಾಸಕ್ತಿಯ ಜನ ಬರುತ್ತಿದ್ದಾರೆ, ಇದರ ಬಗ್ಗೆ ಕಳೆದೆರಡು ತಿಂಗಳುಗಳಿಂದ ಯಾವುದೇ ಇನ್‌ವೆಸ್ಟಿಗೇಷನ್ ಆಗಿಲ್ಲ. ಹಾಗೆಯೇ ಸ್ಟ್ಯಾಂಡ್ ಸ್ಟಿಲ್ ಇದೆ, ಈ ಕುರಿತು ಏನು ಹೇಳುತ್ತೀರಿ?

ಶ್ರೀ ಡಿ.ಬಿ.ಚಂದ್ರೇಗೌಡ:- ಇನ್‌ವೆಸ್ಟಿಗೇಷನ್ ಆಗದೇ ಚಾರ್ಜ್‌ಶೀಟ್ ಹೇಗೆ ಬಂತು? ಚಾರ್ಜ್‌ಶೀಟ್ ಬರಬೇಕಾದರೆ ಇನ್‌ವೆಸ್ಟಿಗೇಷನ್ ಆಗಿರಬೇಕಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಚಾರ್ಜ್‌ಶೀಟ್ ಯಾವಾಗ ಹಾಕಿದ್ದೀರೆಂಬ ಬಗ್ಗೆ ರೆಕಾರ್ಡ್ ಕೊಡಿ.

ಶ್ರೀ ಡಿ.ಬಿ.ಚಂದ್ರೇಗೌಡ:- ಕೊಟ್ಟಿದ್ದೇವಲ್ಲಾ. ಎಸ್.ಸಿ.ನಂಬರ್ ಹಾಗೂ ಅಕ್ಯೂಸ್ಡ್ ಹೆಸರನ್ನು ಕೊಟ್ಟಿದ್ದೇವೆ. ಇನ್ನೇನು ಹೇಳಬೇಕೆಂದು ನನಗರ್ಥವಾಗುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಅಬ್ದುಲ್ ಕರೀಂ ಅರೆಸ್ಟ್ ಆಗುವುದಕ್ಕಿಂತ ಮುಂಚಿನ ಚಾರ್ಜ್‌ಶೀಟ್ ಅದು. ನಂತರದ ಚಾರ್ಜ್‌ಶೀಟ್ ಏನು?

ಶ್ರೀ ಡಿ.ಬಿ.ಚಂದ್ರೇಗೌಡ:- ಅಡಿಷನಲ್ ಚಾರ್ಜ್‌ಶೀಟ್ ಕೊಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಛೇರ್ಮನ್‌ರವರೆ, ನಾನು ನನ್ನ ಭಾಷಣದ ಆರಂಭದಲ್ಲಿ ‘ಕೋಟ್ಯಾಂತರ’ ಎಂದು ಹೇಳಿದ್ದರ ಬಗ್ಗೆ ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಿದರು. ನಾನು ‘ಕೋಟ್ಯಾಂತರ’ ಎನ್ನದೆ ‘ಲಕ್ಷಾಂತರ’ ಎಂದು ಹೇಳಬಹುದಿತ್ತು. ಏಕೆಂದರೆ, ಸುಮಾರು ಹನ್ನೆರಡು ಕೋಟಿ ರೂಪಾಯಿಗಳಷ್ಟು ಮೌಲ್ಯದ ಫೇಕ್ ಛಾಪಾ ಕಾಗದವನ್ನು ನಮ್ಮ ರಾಜ್ಯದ ಒಬ್ಬ ಏಜೆನ್ಸಿಯವರನ್ನು ಹಿಡಿಯುವ ಮೂಲಕ ವಶಪಡಿಸಿಕೊಂಡಿದ್ದೀರಿ. ಹಾಗಾಗಿ, ಕೋಟ್ಯಾಂತರ ಎಂದು ಹೇಳಿದೆ. ಕಾನೂನು ಮಂತ್ರಿಗಳು ಸಹ ಇಷ್ಟೇ ಕೋಟಿ ಎಂದು ಹೇಳಲಿಲ್ಲ. ಆದುದರಿಂದ, ಕೋಟ್ಯಾಂತರ ಎಂದು ಹೇಳಿದ್ದು.

ಶ್ರೀ ಡಿ.ಬಿ.ಚಂದ್ರೇಗೌಡ:- ಏನಾಗಿಬಿಟ್ಟಿದೆ, ಅಂದರೆ, ‘ಕೋಟಿ’ ‘ಕೋಟಿ’ ಎಂದು ಹೇಳಿ ಆಕಾಶದಲ್ಲಿ ನಕ್ಷತ್ರ ಎಣಿಸಿದಂತಾಗಿದೆಯೆಂದು ಹೇಳಿದೆ. ಇಲ್ಲದಿದ್ದರೆ ನಾವೂ ಹೇಳಬಹುದು. ಒಮ್ಮೆ ಅಕ್ಬರ್ ತನ್ನ ಆಸ್ಥಾನದಲ್ಲಿ ‘ಆ ಮರದಲ್ಲಿ ಎಷ್ಟು ಕಾಗೆಗಳಿವೆ?’ ಎಂದು ಕೇಳಿದಾಗ ಯಾರೂ ಹೇಳುವುದಿಲ್ಲ. ಆದರೆ, ಬೀರಬಲ್ ‘999 ಕಾಗೆಗಳಿವೆ’ ಎಂದು ಉತ್ತರಿಸುತ್ತಾನೆ. ಹೇಗೆ ಹೇಳುತ್ತೀಯಾ ಎಂದಾಗ ‘ತಾವು ಹೋಗಿ ಎಣಿಕೊಂಡು ಬರಬಹುದು’ ಎನ್ನುತ್ತಾನೆ. ಎಣಿಸುವವರು ಯಾರು?

ಶ್ರೀ ಡಿ.ವಿ.ಸದಾನಂದಗೌಡ:- ಅದೇ ರೀತಿ ಇನ್ನೊಂದು ಪ್ರಶ್ನೆ ಕೇಳಿದರಂತೆ. ಒಂದು ಮರದಲ್ಲಿ ನೂರು ಕಾಗೆಗಳಿದ್ದು, ಯಾರೋ ಒಬ್ಬ ಬೇಟೆಗಾರ ಬಂದು ಗುಂಡು ಹೊಡೆಯುತ್ತಾನೆ. ಗುಂಡು ಹೊಡೆದ ಬಳಿಕ ಮರದಲ್ಲಿ ಉಳಿಯುವ ಕಾಗೆಗಳೆಷ್ಟು ಎಂದಾಗ ಉತ್ತರ ಯಾರು ಹೇಳಬೇಕು?

ಶ್ರೀ ಡಿ.ಬಿ.ಚಂದ್ರೇಗೌಡ:- ನೀವೇ ಹೇಳಬೇಕು.

ಶ್ರೀ ಡಿ.ವಿ.ಸದಾನಂದಗೌಡ:- ಹಾಗೆಯೇ ನಿಮ್ಮ ಪ್ರಶ್ನೆಗೆ ನೀವೇ ಉತ್ತರ ಹೇಳಬೇಕು. ನನ್ನ ಪ್ರಶ್ನೆಗೆ ನಾನು ಉತ್ತರ ಹೇಳುತ್ತೇನೆ. ನಿಮ್ಮ ಸರ್ಕಾರದ ಮುಂದಿರುವ ಪ್ರಶ್ನೆಗೆ ಉತ್ತರ ಕೊಡಲು ನಿಮಗೆ ಸಾಧ್ಯವಾಗದಿದ್ದರೆ ಮತ್ಯಾರು ಕೊಡುತ್ತಾರೆ?

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್:- ಈ ನಕಲಿ ಸ್ಟ್ಯಾಂಪ್ ಪೇಪರ್ ಹಗರಣ ಹೊರ ರಾಜ್ಯಗಳಿಗೂ ಹಬ್ಬಿರುವುದರಿಂದ ಇದರ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಿಕೊಟ್ಟರೆ ಅವರು ತನಿಖೆ ಮಾಡಿ ಯಾವ ರಾಜ್ಯಗಳು ಸೇರಿದೆ ಎಂದು ಹೇಳುತ್ತಾರೆ. ಬರೀ

ಕರ್ನಾಟಕದಲ್ಲಿ ತನಿಖೆಯಾದರೆ ಕರ್ನಾಟಕದ್ದು ಮಾತ್ರ ಹೇಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ನಾವು ಛಾಪಾ ಕಾಗದ ಹಗರಣ ಕುರಿತು ಪ್ರಸ್ತಾಪ ಮಾಡಿದಾಗಿನಿಂದ ಚರ್ಚೆಗೆ ಇದನ್ನು ತೆಗೆದುಕೊಳ್ಳಬೇಕೇ, ಬೇಡವೇ ಎಂಬುದರ ಬಗ್ಗೆ ಸರ್ಕಾರದವರು ತುಂಬಾ ಅಡೆ-ತಡೆ ಒಡ್ಡಿದರು. ಇದು ದುರದೃಷ್ಟಕರವಾದ ಸಂಗತಿ. ಹಗರಣದ ಪ್ರಮುಖ ಆರೋಪಿಯಾಗಿರುವ ಅಬ್ದುಲ್ ಕರೀಂಲಾಲ್ ತೆಲಗಿ ಇವೊತ್ತು ಮಾನ್ಯ ಕೃಷ್ಣರವರ ಸರ್ಕಾರದ ಆತ್ಮಸ್ಥೈರ್ಯವನ್ನು ದೊಡ್ಡದಾಗಿ ಅಲುಗಾಡಿಸುತ್ತಿದ್ದಾನೆಂದು ನನಗನ್ನಿಸುತ್ತದೆ. ಈ ವೇಳೆಗಾಗಲೇ ಸರ್ಕಾರ ಯಾವುದಾದರೊಂದು ದೃಢ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿತ್ತು. ಈಗಾಗಲೇ ಎಲ್ಲರೂ ಪ್ರಸ್ತಾಪಿಸಿರುವಂತೆ ದಿನಾಂಕ 27.11.2001ರಂದು ಗೃಹ ಸಚಿವರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಲು ವ್ಯವಸ್ಥೆ ಮಾಡಲಾಗುತ್ತಿದೆಯೆಂದು ಹೇಳಿದರು. ಹಾಗೆಯೇ ಅದಕ್ಕೂ ಮುಂಚೆ 19.11.2001ರಂದು ಈ ಕುರಿತು ಮಾನ್ಯ ಮುಖ್ಯಮಂತ್ರಿಯವರೂ ಹೇಳಿದ್ದರು. ತದನಂತರ, ಇದನ್ನು ಸಿ.ಓ.ಡಿ. ತನಿಖೆಗೆ ವಹಿಸಬೇಕೆಂದು ಪೊಲೀಸ್ ಅಧಿಕಾರಿಗಳ ವರದಿ ಕೂಡ ಬಂತು. ಇಷ್ಟೆಲ್ಲಾ ಆಗಿ ಸರ್ಕಾರ ಇನ್ನೂ ಮೀನ-ಮೇಷ ಎಣಿಸುತ್ತಿರುವುದನ್ನು ನೋಡಿದಾಗ ಸರ್ಕಾರ ತನ್ನನ್ನು ತಾನೇ ಸಾರ್ವಜನಿಕರ ಟೀಕೆಗೆ ಗುರಿ ಮಾಡಿಕೊಂಡಿರುವ ವಿಚಿತ್ರವಾದ ಪ್ರಸಂಗವನ್ನು ಕಾಣುತ್ತಿದ್ದೇವೆ. ಈ ಕುರಿತು ತಡವಾದರೆ, ಇದಕ್ಕೆ ಅಂತಿಮ ತೆರೆ ಎಳೆಯುವಲ್ಲಿ ಸರ್ಕಾರವೇನಾದರೂ ವಿಫಲವಾದರೆ ಸರ್ಕಾರದ ವರ್ಚಸ್ಸಿಗೆ ಭಾರೀ ಧಕ್ಕೆಯಾಗುತ್ತದೆಂದು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ತನಿಖೆ ಸರಿಯಾದ ನಿಟ್ಟಿನಲ್ಲಿ ನಡೆಯದಿದ್ದರೆ, ಆರೋಪಿಗಳಿಗೆ ತಕ್ಕ ಶಿಕ್ಷೆಯಾಗದಿದ್ದರೆ, ಕಾನೂನಿಗೆ ಹಾಗೂ ನ್ಯಾಯಕ್ಕೆ ಬಹಳ ದೊಡ್ಡ ಮೋಸವನ್ನು ನಾವೆಲ್ಲರೂ ಸೇರಿ ಮಾಡಿದಂತಾಗುತ್ತದೆಂದು ನನ್ನ ಅಭಿಪ್ರಾಯ. ಇಲ್ಲಿ ಆರೋಪಿ ಅಬ್ದುಲ್ ಕರೀಂಲಾಲ್ ತೆಲಗಿ ಒಬ್ಬನ ಪ್ರಶ್ನೆ ಮಾತ್ರವಲ್ಲ, ನಮ್ಮ ಸಾರ್ವಜನಿಕ ಜೀವನದಲ್ಲಿ ಅಡೆತಡೆ ಇಲ್ಲದೆ ಹಬ್ಬುತ್ತಿರುವಂಥ ಅಪರಾಧಗಳ ಜಾಲದ ಪ್ರಶ್ನೆ. ಇಂತಹ ಒಂದು ಪ್ರಕರಣದ ಹಿಂದೆ ಪ್ರಭಾವ ಬೀರತಕ್ಕಂಥ ರಾಜಕಾರಣಿಗಳು, ಅಧಿಕಾರಿಗಳು ಇವರ ಮುಖವಾಡವನ್ನು ಇವೊತ್ತು ನಾವೆಲ್ಲರೂ ಸೇರಿ ಕಳಚುವ ಅವಶ್ಯಕತೆಯಿದೆ. ಕರ್ನಾಟಕ ಸರ್ಕಾರವು ಎಲ್ಲದರಲ್ಲೂ ಪಾರದರ್ಶಕತೆಯಿಂದ ಕೂಡಿರುವುದಾಗಿ ಹೇಳುತ್ತಿದೆ. ಇಂತಹ ಸರ್ಕಾರ ಛಾಪಾ ಕಾಗದದ ಹಗರಣವನ್ನು ಲಂಬಿಸುವಂಥದ್ದನ್ನು ಗಮನಿಸಿದಾಗ ತನ್ನ ಪಾರದರ್ಶಕ ನೀತಿಗೆ ತದ್ವಿರುದ್ಧವಾದ ದಿಕ್ಕಿನಲ್ಲಿ ಸರ್ಕಾರ ಹೋಗುತ್ತಿದೆಯೆಂದು ನನಗನ್ನಿಸುತ್ತಿದೆ. ಮೊನ್ನೆ ಹಿರಿಯ ಸದಸ್ಯರಾದ ಶ್ರೀ ವೈ.ಕೆ.ರಾಮಯ್ಯನವರು ಒಂದು ಪ್ರಕರಣವನ್ನು ಕೋಟ್ ಮಾಡುತ್ತಾ 'ಈ ರೀತಿ ಫೇಕ್ ಛಾಪಾ ಕಾಗದಗಳನ್ನು ಉಪಯೋಗಿಸಿ ಆಗಿರುವ ರಿಜಿಸ್ಟ್ರೇಷನ್ಸ್‌ಗಳು ಕಾನೂನು ಬದ್ಧವಲ್ಲ' ಎಂದು ಹೇಳಿದರು. ಹಾಗಾಗಿ, ಅದು

ಕಾನೂನು ಬದ್ಧವಾಗಿ ಆಗದೇ ಇದ್ದರೆ ಈಗಾಗಲೇ ರಿಜಿಸ್ಟ್ರೇಷನ್ ಮಾಡಿರುವ ಎಲ್ಲಾ ರೈತರು ಅಥವಾ ಯಾವ್ಯಾವ ಸಂಘ-ಸಂಸ್ಥೆಗಳಿವೆಯೋ ಅವರೆಲ್ಲರನ್ನೂ ಕೂಡ ಇವೊತ್ತು ಅನಾವಶ್ಯಕವಾಗಿ ಅಪರಾಧಿಗಳನ್ನಾಗಿ ನಾವು ಮಾಡಿದ್ದೇವೆ! ಇಂತಹ ಒಂದು ಪರಿಸ್ಥಿತಿಯಲ್ಲಿ ಇವರುಗಳ ಮೇಲೆ ಮೊಕದ್ದಮೆ ಹೂಡಬೇಕೇ ಅಥವಾ ಏನು ಮಾಡಬಹುದೆನ್ನುವ ನಿರ್ಧಾರವನ್ನು ನೀವು ಇನ್ನೂ ತೆಗೆದುಕೊಳ್ಳಲಿಲ್ಲ. ಇದಾಗಿ ಎಷ್ಟು ದಿವಸವಾಯಿತು? ಪ್ರಕರಣದಲ್ಲಿ ಅಸಲಿ ಯಾವುದು, ನಕಲಿ ಯಾವುದು ಎಂದು ಕಂಡು ಹಿಡಿಯಲು ಬಹಳ ದೊಡ್ಡ ಬ್ರಹ್ಮ ಬರಬೇಕಾದ ಅವಶ್ಯಕತೆಯಿಲ್ಲ. ಇವೊತ್ತು ಯಾವುದೇ ಬ್ಯಾಂಕಿಗೆ ಹೋದರೂ ಸಹ ಒಬ್ಬ ಸಾಮಾನ್ಯ ಗುಮಾಸ್ತ ಸಹ ರೂಪಾಯಿ ನೋಟನ್ನು ಅದು ಅಸಲಿಯೇ, ನಕಲಿಯೇ ಎಂದು ಚೆಕ್ ಮಾಡುತ್ತಾನೆ. ಪರಿಸ್ಥಿತಿ ಹೀಗಿರುವಾಗ ನಮ್ಮಲ್ಲಿ ಸಬ್-ರಿಜಿಸ್ಟ್ರಾರ್ ಆಫೀಸ್ ಒಂದು ತಾಲ್ಲೂಕಿಗೆ ಒಂದೋ, ಎರಡೋ ಇರಬಹುದು. ಸಬ್ ರಿಜಿಸ್ಟ್ರಾರ್‌ಗಳೆಲ್ಲರನ್ನೂ ಕರೆದು ಅವರಿಗೆ ಯಾವುದು ಅಸಲು, ಯಾವುದು ನಕಲು ಎಂಬುದನ್ನು ಕಂಡುಹಿಡಿಯುವ ಕುರಿತು ನಮ್ಮ ಸರ್ಕಾರ ತರಬೇತಿ ನೀಡಿದ್ದರೆ ಇಷ್ಟೊತ್ತಿಗಾಗಲೇ ಬಹಳಷ್ಟು ಆರೋಪಿಗಳನ್ನು ನಮ್ಮ ರಾಜ್ಯದ ಮೂಲೆ ಮೂಲೆಗಳಲ್ಲೂ ಹಿಡಿಯಲು ಸಾಧ್ಯವಾಗುತ್ತಿತ್ತು. ಇವೊತ್ತು ಇದರ ಜಾಲ ಬಹಳ ವ್ಯಾಪ್ತಿ ಪಡೆದಿದೆ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವ್ಯಾಪ್ತಿಯ ಜಾಲ ಹೊಂದಿರುವುದರಿಂದ ಇದರ ಉದ್ದ, ಅಗಲ ಎಷ್ಟು, ಈ ಜಾಲವನ್ನು ಕೆದಕಲಿಕ್ಕೆ ಇವೊತ್ತಿನವರೆಗೆ ಆಗಲಿಲ್ಲ. ಸರ್ಕಾರ ಯಾಕೋ ಇದಕ್ಕೆ ಅಡೆ-ತಡೆ ಒಡ್ಡುತ್ತಿರುವುದನ್ನು ಕಾಣುತ್ತಿದ್ದೇವೆ. ನಿಮಗೆ ಪ್ರಾಮಾಣಿಕತೆ, ಕಾಳಜಿ ಇದ್ದರೆ, ರಾಜ್ಯದ ಹಾಗೂ ದೇಶದ ಆರ್ಥಿಕತೆಯ ಮೇಲೆ ಬಹಳ ದೊಡ್ಡ ಹೊಡೆತವನ್ನು ಹಾಕಿರುವ ಈ ಪ್ರಕರಣದ ಸತ್ಯಾಂಶವನ್ನು ಹೊರಕ್ಕೆಳೆಯುವ ಮನಸ್ಸು, ಹೃದಯ ಇದ್ದಿದ್ದರೆ ರಾಜ್ಯದ ಮೂಲೆ-ಮೂಲೆಗಳಲ್ಲಿರುವ ಯಾವುದಾದರೂ 10-15 ಸಬ್-ರಿಜಿಸ್ಟ್ರಾರ್ ಕಛೇರಿಗಳನ್ನು ರ್‍ಯಾಂಡಮ್ ಆಗಿ ತನಿಖೆ ಮಾಡಬಹುದಾಗಿತ್ತು. ಮಾನ್ಯ ಕಂದಾಯ ಮಂತ್ರಿಗಳು ಇದರ ಬಗ್ಗೆ ಹೇಳಬೇಕು. ಇದು ಈಗಲೂ ನಡೆಯುತ್ತಿದೆಯೆಂಬ ಬಗ್ಗೆ ಅನೇಕ ಹೇಳಿಕೆಗಳು ಬಂತು, ಅದರಲ್ಲಿ ಕೆಲವನ್ನು ನಿರಾಕರಿಸುತ್ತಿದ್ದೀರಿ. ಆ ನಿರಾಕರಣೆಯ ಹಿಂದೆ ತಮ್ಮ ಹೇಳಿಕೆ ಏನಿದೆಯೋ ನನಗೆ ಗೊತ್ತಿಲ್ಲ. ಆದರೆ ತಾವು ಕನಿಷ್ಟ ಹತ್ತು ಹದಿನೈದು ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ಇದರ ಬಗ್ಗೆ ತಪಾಸಣೆ ಮಾಡಿಸುವಂಥ ಪ್ರಾಮಾಣಿಕ ಪ್ರಯತ್ನ ಮಾಡಬಹುದಿತ್ತು. ಆದರೆ ಇವತ್ತಿನವರೆಗೂ ಮಾಡಿಲ್ಲ ಏಕೆ? ನಿಮ್ಮ ಸರ್ಕಾರದ ಮೇಲೆ ನಮಗಿರುವ ಅನುಮಾನ ಇದೇನೇ? ಪತ್ರಿಕೆಗಳಲ್ಲಿ ನಕಲಿ ಛಾಪಾಕಾಗದದ ಬಗ್ಗೆ ಹೇಳಿಕೆಗಳು ಪ್ರಾರಂಭವಾದ ತಕ್ಷಣ ಆರಂಭ ಶೂರತ್ವವನ್ನು ತೋರಿಸಿದಿರಿ.

(ಉಪಾಧ್ಯಕ್ಷರಾದ ಶ್ರೀ ಮನೋಹರ ಹೆಚ್.ತಹಸೀಲ್ದಾರ್‌ರವರು ಅಧ್ಯಕ್ಷರು

ಪೀಠವನ್ನು ಅಲಂಕರಿಸಿದರು)

ಇದನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗೃಹಸಚಿವರು ಮಾನ್ಯ ಕಂದಾಯ ಸಚಿವರು ಎಲ್ಲರೂ ಹೇಳಿದಿರಿ, ಅಧಿಕಾರಿಗಳೂ ಸ್ಟೇಟ್‌ಮೆಂಟ್ ಕೊಟ್ಟರು. ಆದರೆ ಇವತ್ತೇಕೆ ಇದನ್ನು ತಣ್ಣಗೆ ಮಾಡಿದಿರಿ? ಕನಿಷ್ಟ ಕೆಲವು ಸಬ್‌ರಿಜಿಸ್ಟ್ರಾರ್ ಕಛೇರಿಗಳನ್ನು ತಪಾಸಣೆ ಮಾಡಿ ವಿಚಾರವನ್ನು ತಿಳಿದು ಜನತೆಗೆ ಮನದಟ್ಟು ಮಾಡಿಕೊಡಬಹುದಿತ್ತಲ್ಲಾ. ಈ ಕೆಲಸವನ್ನೇಕೆ ಮಾಡಲಿಲ್ಲವೆಂಬುದೇ ನಮಗೆ ನಿಮ್ಮ ಸರ್ಕಾರದ ಮೇಲಿರುವ ಅನುಮಾನ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರ್.ಟಿ.ನಗರದ ಸ್ಟ್ಯಾಂಪ್ ವ್ಯಾಪಾರಿಯ ಹತ್ತಿರ 12 ಕೋಟಿ ರೂಪಾಯಿಗಳ ನಕಲಿ ಛಾಪಾಕಾಗದ ಸಿಕ್ಕಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ತೆಲಗಿಯ ಮೇಲೆ ದೊಡ್ಡ ಮೊಕದ್ದಮೆಗಳಾಗಿದೆ. ಇವೆಲ್ಲವನ್ನೂ ಪುಸ್ತಕದ ರೂಪದಲ್ಲಿ ಮಾಡಿ ತಮಗೆ ಕೊಟ್ಟಿದ್ದೇವೆ. ಅದನ್ನು ಓದುವ ಸ್ಥಿತಿಯಲ್ಲಿ ತಮ್ಮ ಸರ್ಕಾರವಿಲ್ಲ, ಅದಕ್ಕೆ ನಾವೇನು ಮಾಡಲು ಆಗುತ್ತದೆ? ಆ ಸೂತ್ರದಲ್ಲಿ ನಾವಿಲ್ಲವೆಂಬುದಕ್ಕಾದರೂ ತೋರಿಸಿಕೊಳ್ಳಬೇಕಾಗುತ್ತದೆ. ನೀವಾದರೂ ಆ ಸೂತ್ರದೊಳಗೆ ಸಿಕ್ಕಿಹಾಕಿಕೊಂಡಿದ್ದೀರಿ. ಕರೀಂಲಾಲ್‌ನ ತಮ್ಮ ಅಬ್ದುಲ್ ಅಜೀಮ್ ತೆಲಗಿ ನಿಮ್ಮ ಪಕ್ಷದ ಮೈನಾರಿಟಿ ಸೆಲ್‌ನ ಕಾರ್ಯದರ್ಶಿ. ಇವನ ಮೇಲೆ 24.11.2001ರಲ್ಲಿ ದೂರು ಕೊಟ್ಟರೆ ಇದುವರೆಗೆ ವಿಚಾರಣೆಯಾಗಲಿಲ್ಲವೆಂದರೆ ನಿಮ್ಮ ಪಕ್ಷದ ಮೇಲೆ ಆ ಕುಟುಂಬ ಎಷ್ಟು ದೊಡ್ಡ ಪ್ರಭಾವವನ್ನು ಹೊಂದಿದೆ ಎಂಬುದನ್ನು ಇದು ತೋರಿಸುತ್ತದೆ.

ಶ್ರೀ ಕಾಗೋಡುತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೆ, ಆ ವ್ಯಕ್ತಿಯ ಮೇಲೆ ಏನು ಪ್ರಸ್ತಾಪ ಮಾಡಬೇಕೋ ಅದನ್ನು ಮಾಡಿ, ಪಕ್ಷದ ಹೆಸರನ್ನು ಅನಾವಶ್ಯಕವಾಗಿ ತರುವ ಅಗತ್ಯವಿಲ್ಲ. ಏಕೆಂದರೆ ಪಕ್ಷಕ್ಕೆ ಒಂದು ಅಸ್ತಿತ್ವ ಇದೆ. ವಕ್ತಾರರು ಇದ್ದಾರೆ. ಜವಾಬ್ದಾರಿ ಇದೆ. ಪಕ್ಷಕ್ಕೆ ಸಂಬಂಧಪಟ್ಟ ಅಧಿಕೃತ ದಾಖಲೆಯನ್ನು ಇಟ್ಟುಕೊಂಡು ನಾವಿಲ್ಲಿ ಕುಳಿತಿರುವುದಿಲ್ಲ. ಆದ್ದರಿಂದ ಪಕ್ಷದ ಹೆಸರನ್ನು ಬಳಸದಿರುವುದು ಬಹಳ ಆರೋಗ್ಯ.

ಶ್ರೀ ಅರಗ ಜ್ಞಾನೇಂದ್ರ:-ಅಬ್ದುಲ್ ಅಜೀಮ್ ತೆಲಗಿ ಎಂಬ ವ್ಯಕ್ತಿ ತಮ್ಮ ಪಕ್ಷದ ಕಾರ್ಯದರ್ಶಿಯಲ್ಲ, ಪದಾಧಿಕಾರಿಯಲ್ಲವೆಂದು ತಾವು ಹೇಳಿಬಿಡಿ. ಇಲ್ಲದಿದ್ದರೆ ತಮ್ಮ ಪಕ್ಷದ ಮೈನಾರಿಟಿ ಸೆಲ್‌ನ ಕಾರ್ಯದರ್ಶಿಯೆಂದು ಹೇಳಬೇಕಾಗುತ್ತದಲ್ಲವೆ?

ಶ್ರೀ ಕಾಗೋಡುತಿಮ್ಮಪ್ಪ:- ಅವರು ಪಕ್ಷದ ಕಾರ್ಯದರ್ಶಿಯೆಂಬುದಕ್ಕೆ ತಮ್ಮ ಹತ್ತಿರ ದಾಖಲೆಯೇನಿದೆ?

ಶ್ರೀ ಅರಗ ಜ್ಞಾನೇಂದ್ರ:- ತಾವು ಅಲ್ಲವೆಂದು ಹೇಳಿಬಿಡಿ.

ಶ್ರೀ ಕಾಗೋಡುತಿಮ್ಮಪ್ಪ:- ನಾನು ಅಲ್ಲ ಎಂದು ಹೇಳಲು ಪಕ್ಷದ ಅಧ್ಯಕ್ಷನೇ? ತಾವು ಗಾಳಿ ಮಾತಿನಂತೆ ಗಾಳಿ ಹೊಡೆಯುವುದು ಸರಿಯಲ್ಲ. ಒಂದು ಪಕ್ಷದ ಮೇಲೆ ಅಧಿಕೃತವಾಗಿ ಆಪಾದನೆ ಮಾಡಬೇಕಾದರೆ, to substantiate your allegation, you must have definite information and materials.

ಶ್ರೀ ಅರಗ ಜ್ಞಾನೇಂದ್ರ:-ನನ್ನ ಹತ್ತಿರ ದಾಖಲೆ ಇದೆ. ಈಗಲೇ ಕಳುಹಿಸಿ ಕೊಡುತ್ತೇನೆ, ಆದರೆ ತಾವು ಏನು ಮಾಡುತ್ತೀರಿ ಮೊದಲು ಹೇಳಿ?

ಶ್ರೀ ಕಾಗೋಡುತಿಮ್ಮಪ್ಪ:- ತಾವು ಸುಮ್ಮನೆ ವಾದ ಮಾಡುತ್ತಿದ್ದೀರಿ.

SRI D.V.SADANANDA GOWDA:- We are placing the materilas before the House. ಅವನು ತಮ್ಮ ಪಕ್ಷದ ಸದಸ್ಯನಾಗಿದ್ದರೆ ತಾವು ಏನು ಮಾಡುತ್ತೀರಿ ಹೇಳಿ?

ಶ್ರೀ ಕಾಗೋಡುತಿಮ್ಮಪ್ಪ:- ನಾವು ಏನು ಮಾಡುತ್ತೇವೆ ಎಂಬುದು ಬೇರೆ ಮಾತು. ತಾವು ಸುಮ್ಮನೆ ಗಾಳಿ ಹೊಡೆಯುವುದಲ್ಲ. ತಾವೆಲ್ಲರೂ ವಕೀಲರು. ಪ್ರೈಮಾಫೇಸಿ ಏನು ಕೊಡಬೇಕೋ ಅದನ್ನು ಕೊಡಿ.

ಶ್ರೀ ಡಿ.ವಿ.ಸದಾನಂದಗೌಡ:- ನಾನು ದಾಖಲೆ ಕಳುಹಿಸಿಕೊಡುತ್ತೇನೆ, ಹಾಗಿದ್ದರೆ ತಾವು ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡುತ್ತೀರಾ?

ಶ್ರೀ ಕಾಗೋಡುತಿಮ್ಮಪ್ಪ:- ಅದು ಬೇರೆ ವಿಚಾರ. ತಾವು ಪ್ರೈಮಾಫೇಸಿಯಾಗಿ ಪ್ರೂವ್ ಮಾಡಬೇಕಾದರೆ, you must show your materials. ಅದು ಎಲ್ಲಿದೆ? ಸುಮ್ಮನೆ ಇದೆ, ಇದೆ ಎಂದರೆ ಹೇಗೆ? ಅದನ್ನು ಕೊಟ್ಟು ಮಾತನಾಡಿ. ತಾವು ಅದನ್ನು ಕೊಡದೇ ಪಕ್ಷದ ವಿಚಾರ ಮಾತನಾಡಲು ಹೋಗಬಾರದು.

ಶ್ರೀ ಅರಗ ಜ್ಞಾನೇಂದ್ರ:- ಮಾಹಿತಿ ಇಲ್ಲದೇ, ದಾಖಲೆ ಇಲ್ಲದೇ ಕೇವಲ ಪ್ರಚಾರಕ್ಕೋಸ್ಕರ ಇಲ್ಲಿ ಮಾತನಾಡಲು ನಾವು ಬಂದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಹಿರಿಯ ಸದಸ್ಯರು, ಪಕ್ಷದ ಬಗ್ಗೆ ಸಮರ್ಥನೆ ಮಾಡುತ್ತಿದ್ದಾರೆ, ಬಹಳ ಸಂತೋಷ. ತಮ್ಮ ಪಕ್ಷವನ್ನು ತಾವು ಸಮರ್ಥನೆ ಮಾಡದೇ ಇನ್ನಾರು ಮಾಡಬೇಕು? ಆದರೆ ಪಕ್ಷದವರು ಅಲ್ಲ, ಪಕ್ಷದವರು ಎನ್ನುವುದಕ್ಕೆ ದಾಖಲೆ ಏನು ಎಂಬುದಕ್ಕಿಂತ ದಾಖಲೆಯನ್ನು ತಂದುಕೊಟ್ಟರೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು? ನಿಮಗೆ ಏನಾದರು ಪ್ರಾಮಾಣಿಕ ಕಾಳಜಿ ಇದ್ದರೆ ನೀವು ಏನು ಮಾಡುತ್ತೀರಿ ಮಾಡಿ. ಈ ಜಾಹೀರಾತು ಕಾಣುತ್ತಿದೆಯೇ? ಇಲ್ಲಿ ನೋಡಿ, ಹಸ್ತದ ಗುರುತು, ಅವರ ಫೋಟೋ ಈ ಅಡ್ವಟೈಸ್‌ಮೆಂಟ್ ಪತ್ರಿಕೆಯಲ್ಲಿ ಬಂದಿತ್ತು. "Abdul Azeem ladasab Thelagi, State General Secretary, K.P.C.C. Minority

Department, Bangalore. T.P.C. Vice President, Kanpur" ಎಂದು ಆತನೇ ಪ್ರಿಂಟ್ ಮಾಡಿ ಹಂಚಿದ್ದಾನೆ.

ಶ್ರೀ ಕಾಗೋಡು ತಿಮ್ಮಪ್ಪ:- ಅದು ಯಾವ ಪತ್ರಿಕೆಯಲ್ಲಿ ಬಂದಿದೆ?

ಶ್ರೀ ಅರಗ ಜ್ಞಾನೇಂದ್ರ:-ಅವನು ತಮ್ಮ ಪಕ್ಷದ ಪದಾಧಿಕಾರಿಯೆಂಬುದಕ್ಕೆ ದಾಖಲೆ ಕೊಡುತ್ತೇನೆ. ಅವರು ಅಲ್ಲ ಎಂದು ನಿರಾಕರಿಸಲಿ ಏನಾಗುತ್ತದೆ?

ಶ್ರೀ ಕಾಗೊಡುತಿಮ್ಮಪ್ಪ:- ತಾವು ತಪ್ಪು ತಿಳಿದುಕೊಳ್ಳಬೇಡಿ. ಇವೆಲ್ಲಾ ಅಧಿಕೃತ ದಾಖಲೆಗಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ತಾವು ತಮ್ಮ ಪಕ್ಷದ ಮೈನಾರಿಟಿ ಲಿಸ್ಟ್ ತೆಗೆದು ಯಾರ್ಯಾರು ಪದಾಧಿಕಾರಿಗಳು ಎಂಬುದನ್ನು ನೋಡಿ. ಅದರಲ್ಲಿ ಅವರ ಹೆಸರು ಇಲ್ಲವೆಂದರೆ ಇಲ್ಲವೆಂದು ಹೇಳಿ, ಅಥವಾ ಅದು ನಮಗೆ ಸಂಬಂಧವಿಲ್ಲವೆಂದು ಹೇಳಿಬಿಡಿ. ನಾವು ಹೆಚ್ಚು ಚರ್ಚೆಯೇ ಮಾಡುವುದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ:- ಅಧ್ಯಕ್ಷರೇ, As a government, ಗೌರ್ನಮೆಂಟ್ ವಿಚಾರವನ್ನು ಹೇಳಬಹುದೇ ಹೊರತು ಇಲ್ಲಿ ಪಕ್ಷದ ವಿಚಾರವನ್ನು ಹೇಳಲು ಬರುವುದಿಲ್ಲ. You make too much of those things ಯಾವ ಫೋಟೋ, ಯಾವ ಪತ್ರಿಕೆ..

ಶ್ರೀ ಅರಗ ಜ್ಞಾನೇಂದ್ರ:- ದೀಪಾವಳಿಯ ಶುಭಾಶಯಗಳು ಎಂದು ಗ್ರೀಟಿಂಗ್ಸ್‌ನಲ್ಲಿ ಅವನ ಫೋಟೊ ಮತ್ತು ನಾನು ಮೈನಾರಿಟಿ ಸೆಲ್‌ನ ಕಾರ್ಯದರ್ಶಿಯೆಂದು ಪ್ರಿಂಟ್ ಮಾಡಿಸಿ ಎಲ್ಲರಿಗೂ ಕಳುಹಿಸಿದ್ದಾನೆ.

ಶ್ರೀ ಕಾಗೋಡುತಿಮ್ಮಪ್ಪ:- ಅದು ಯಾವ ಪತ್ರಿಕೆಯಲ್ಲಿ ಬಂದಿದೆ?

ಶ್ರೀ ಅರಗ ಜ್ಞಾನೇಂದ್ರ:- ಆತ ಎಲ್ಲರಿಗೂ ದೀಪಾವಳಿ ಗ್ರೀಟಿಂಗ್ಸ್ ಆಗಿ ಕಳುಹಿಸಿರತಕ್ಕದ್ದು.

ಶ್ರೀ ಕಾಗೋಡುತಿಮ್ಮಪ್ಪ:- ನಮಗೇನೋ ಅದು ಬಂದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ:- ಬಹುಶಃ ಬಿ.ಜೆ.ಪಿ.ಯವರಿಗೆ ಮಾತ್ರ ಕಳುಹಿಸಿರಬೇಕೇನೋ ನಾವು ಸದನದಲ್ಲಿ ಮಾತನಾಡುವಾಗ ತುಂಬಾ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಯಾರೋ ಯಾವುದೋ ಪಕ್ಷಕ್ಕೆ ಸೇರಿದವರು ಒಂದು ಚೀಟಿ ಹಂಚಿದ್ದಾರೆಂದು ಅವರು ತಮ್ಮ ಪಕ್ಷಕ್ಕೆ ಸೇರಿದವರು ಎಂದರೆ ಇಲ್ಲಿ ನಾವು ಉತ್ತರವನ್ನು

ಹೇಗೆ ಹೇಳುವುದಕ್ಕಾಗುತ್ತದೆ? ಅದು ನಮ್ಮ ಸರ್ಕಾರಕ್ಕೇನಾದರೂ ಸಂಬಂಧಪಟ್ಟದ್ದೇ? ಏನಾದರೂ ದಾಖಲೆ ಇದೆಯೇ? ಹೇಳುವುದಕ್ಕೆ ಒಂದು ಇತಿಮಿತಿ ಬೇಡವೇ? ಗ್ರೀಟಿಂಗ್ಸ್ ಕಳುಹಿಸಿಬಿಟ್ಟರೆ ಅದೊಂದು ದಾಖಲೆಯೇ? ಅದಕ್ಕೋಸ್ಕರ ಅವನು ಕಾಂಗ್ರೆಸ್ ಪಕ್ಷಕ್ಕೆ ಸೇರಿದವನೇ? ಒಂದು ವೇಳೆ ಸೇರಿದ್ದಾರೆ ಎಂದು ಇಟ್ಟುಕೊಳ್ಳಿ ಅದು ಇಲ್ಲಿ ಚರ್ಚೆಗೆ ವಸ್ತುವೇ? ಅದಕ್ಕೂ ಸರ್ಕಾರಕ್ಕೂ ಏನು ಸಂಬಂಧ? ನಿಮ್ಮ ಪಕ್ಷದ ಅಧ್ಯಕ್ಷರು ನಮ್ಮ ಪಕ್ಷದ ಅಧ್ಯಕ್ಷರಿಗೆ ಬರೆಯಲಿ, ಅನಂತರ ಅವರು ಉತ್ತರ ಕಳುಹಿಸಿಕೊಡುತ್ತಾರೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್:- ಮಾನ್ಯ ಉಪಾಧ್ಯಕ್ಷರೆ, ಅವರು ತಮ್ಮ ಪಕ್ಷಕ್ಕೆ ಸೇರಿದವರಿದ್ದಾರೆ, ಏನಾದರೂ ತನಿಖೆ ಮಾಡುವಾಗ ಅವರನ್ನು ಕೈಬಿಟ್ಟುಬಿಡುತ್ತೀರಿ ಎಂಬ ಭಯ, ಆದ್ದರಿಂದ ಸಿ.ಬಿ.ಐ.ಗೆ ಕೊಡಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಕಾಗೋಡುತಿಮ್ಮಪ್ಪ:- ನಾವು ಸರ್ಕಾರದ ವಿಚಾರವನ್ನು ಮಾತನಾಡುತ್ತಿದ್ದೇವೆ. ಪಕ್ಷದ ವಿಚಾರವನ್ನು ಮಾತನಾಡಬೇಕಾದರೆ ಬನ್ನಿ – on an open forum.

ಶ್ರೀ ಜಗದೀಶ್ ಶೆಟ್ಟರ್:- ಇದರಲ್ಲಿ ತಮ್ಮ ಪಕ್ಷದ ಪದಾಧಿಕಾರಿಯೊಬ್ಬ ಇನ್‌ವಾಲ್ವ್‌ಮೆಂಟ್ ಆಗಿದ್ದಾನೆ. ಆದ್ದರಿಂದ ಸಿ.ಬಿ.ಐ.ಗೆ ಕೊಡಿಯೆಂದು ಹೇಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:-ಸರ್ಕಾರದ ವ್ಯವಹಾರವನ್ನು ಬೇಕಾದರೆ ಇಲ್ಲಿ ಚರ್ಚೆ ಮಾಡೋಣ. ಆದರೆ ಪಕ್ಷದ ವಿಚಾರವನ್ನಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಇದರಲ್ಲಿ ತಮ್ಮ ಆಫೀಸ್ ಬೇರರ್ ಒಬ್ಬ ಶಾಮೀಲಾಗಿರುವಾಗ ಯಾವ ರೀತಿಯಲ್ಲಿ ಪ್ರೆಷರ್ ಬಿಲ್ಟ್ ಅಪ್ ಆಗುತ್ತದೆ? ಆದ್ದರಿಂದ ನಾವು ಹೇಳುತ್ತಿದ್ದೇವೆ, ಈ ಪ್ರಕರಣದಲ್ಲಿ ಅವನು ಇವತ್ತಿಗೂ ಅರೆಸ್ಟ್ ಆಗಿಲ್ಲ. ಅವನನ್ನು ವಿಚಾರಣೆಗೆ ಒಳಪಡಿಸಿಲ್ಲ. ಹೀಗಾದರೆ ತಾವು ಯಾವ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡುತ್ತೀರಿ? ಅವನು ತಮ್ಮ ಆಫೀಸ್ ಬೇರರ್ ಆಗಿದ್ದರಿಂದಲೇ ಇನ್‌ವೆಸ್ಟಿಗೇಷನ್ ಆಗುತ್ತಿಲ್ಲ.

SRI D.B.CHANDREGOWDA:- You are well within your rights to ask, ಹೇಗೆ ಇನ್‌ವೆಸ್ಟಿಗೇಟ್ ಮಾಡುತ್ತೀರಿ? ಏನೇನಾಗಿದೆ ಎಂಬ ಬಗ್ಗೆ ಇವನ್ಯಾರೋ ಗ್ರೀಟಿಂಗ್ಸ್ ಕಳುಹಿಸಿದ್ದಾನೆಂದು ಹೀಗೆ ವಾದ ಮಾಡುವುದು ಸರಿಯೇ? ನೀವೇ ಏಕೆ ಇದನ್ನು ಉದ್ಭವ ಮಾಡಿರಬಾರದು?

ಶ್ರೀ ಜಗದೀಶ್‌ಶೆಟ್ಟರ್:- ಕಾಂಗ್ರೆಸ್‌ನ ಆಫೀಸ್‌ನ ಆಫೀಸ್ ಬೇರರ್ ಆಗಿರುವುದರಿಂದ ಇನ್‌ವೆಸ್ಟಿಗೇಷನ್ ಆಗಿಲ್ಲ, ಮುಂದೆಯೂ ಸಹ ಆಗುವುದಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ:- ಚಾರ್ಜ್ ಶೀಟ್ ಹಾಕಿದ್ದು ಇನ್‌ವೆಸ್ಟಿಗೇಷನ್ ಆದಮೇಲಲ್ಲವೆ?

ಶ್ರೀ ಜಗದೀಶ್ ಶೆಟ್ಟರ್:- ಅಬ್ದುಲ್ ಕರೀಂ ಅರೆಸ್ಟ್ ಆದ ಮೇಲೆ ಮುಂದೆ ಏನು ಮಾಡಿದ್ದೀರಿ?

ಶ್ರೀ ಡಿ.ಬಿ.ಚಂದ್ರೇಗೌಡ:- ಇವರ ಆಸಕ್ತಿ ಏನು ಎಂಬುದು ಗೊತ್ತಾಗುತ್ತಿದೆ. ಎಲ್ಲವನ್ನೂ ರಾಜಕೀಕರಣ ಮಾಡುವುದಕ್ಕಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಿನ್ನೆ ಮಾನ್ಯ ಸೋಮಶೇಖರ್‌ರವರು ಮಾತನಾಡಿದರು. There is some sense in it.

ಶ್ರೀ ಜಗದೀಶ್ ಶೆಟ್ಟರ್:-ತಮಗೆ ಬೋನಾಫೈಯ್ಡ್ ಇನ್‌ಟೆನ್‌ಷನ್ ಇದ್ದರೆ ಸಿ.ಬಿ.ಐ.ಗೆ ಕೊಟ್ಟು ವಾದ ಮಾಡುತ್ತಿದ್ದೀರಿ.

ಶ್ರೀ ಡಿ.ಬಿ.ಚಂದ್ರೇಗೌಡ:- ತಾವು ಕಳೆದ ಎರಡು ಮೂರು ದಿವಸಗಳಿಂದ ಕೇವಲ ರಾಜಕೀಕರಣ ಮಾಡುವುದಕ್ಕಾಗಿಯೇ ಮಾತನಾಡುತ್ತಿದ್ದಿರಿ.

ಶ್ರೀ ಕೆ.ಕರಿಯಣ್ಣ:- ಬದನವಾಳು ಪ್ರಕರಣದ ಬಗ್ಗೆ 1992ರಲ್ಲಿ ಸಿ.ಬಿ.ಐ.-ಗೆ ಕೊಟ್ಟಿದ್ದು ಏನಾಗಿದೆ ಎಂಬುದು ತಮಗೆ ಗೊತ್ತಿದೆಯೇ? ಇದುವರೆಗೆ ಅದು ವಿಚಾರಣೆಗೆ ಬಂದಿದೆಯೇ? ಇದರಲ್ಲೂ ಏನೂ ವಿಚಾರಣೆಯಾಗಬಾರದು, ಹೇಗೂ ಚಾರ್ಜ್‌ಶೀಟ್ ಹಾಕಿದ್ದಾರೆ, ಅದೂ ಮುಳುಗಿಹೋಗಲಿ ಎಂದು ಹೀಗೆ ಹೇಳುತ್ತಿದ್ದೀರಾ?

ಶ್ರೀ ಅರಗ ಜ್ಞಾನೇಂದ್ರ:- ಅವರನ್ನು ಬೇಕಾದರೆ ಮಂತ್ರಿಯನ್ನಾಗಿ ಮಾಡಿ, ಸಂತೋಷ, ನಮ್ಮ ಜಿಲ್ಲೆಯವರೆ.

ಶ್ರೀ ಕೆ.ಕರಿಯಣ್ಣ:- ನಿಮ್ಮ ಶಿಫಾರಸ್ಸಿನಿಂದ ನಾನು ಮಂತ್ರಿಯಾಗಬೇಕಾಗಿಲ್ಲ. ಮಂತ್ರಿಯಯನ್ನಾಗಿ ಮಾಡುವ ಸಂದರ್ಭ ಬಂದರೆ ನಮ್ಮ ನಾಯಕರು ನನ್ನನ್ನು ಮಾಡುತ್ತಾರೆ. ಆದರೆ ತಾವು ಸದನದಲ್ಲಿ ಹಿರಿಯರು ಹೇಳುವ ವಿಚಾರವನ್ನು ಸ್ವಲ್ಪ ಕೇಳಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯರು. ಕೇವಲ ಮೊಂಡು ವಾದವನ್ನು ಮಾಡಿಕೊಂಡು ಇರತಕ್ಕದ್ದು ಯೋಗ್ಯವಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರಂಥ ಹಿರಿಯರು ಹೇಳಿದ್ದನ್ನು ತಮ್ಮ ನಾಯಕರೂ ಒಪ್ಪಿಕೊಳ್ಳುತ್ತಾರೆ. ನೀವು ಒಪ್ಪಿಕೊಳ್ಳದೇ ಮಾತನಾಡಿದ್ದನ್ನೇ ಮಾತನಾಡುತ್ತೀರಿ, ನಾವೇನು ಮಾಡೋಣ?

ಶ್ರೀ ಅರಗ ಜ್ಞಾನೇಂದ್ರ:- ಈ ಪ್ರಕರಣವನ್ನು ಮುಚ್ಚಿ ಹಾಕಿ ಈ ಹಣವನ್ನು ಬಂಡವಾಳ ಮಾಡಿಕೊಳ್ಳುವವರು ತಾವು. ತಾವೇಕೆ ಇದನ್ನು ಮುಚ್ಚಿ ಹಾಕುತ್ತಿದ್ದೀರಿ? ಇದನ್ನೇನು ಬಂಡವಾಳ ಮಾಡಿಕೊಂಡಿದ್ದೀರಾ? ಇದನ್ನು ಚುನಾವಣಾ ನಿಧಿಗೆ

ಉಪಯೋಗಿಸುತ್ತಿದ್ದೀರಾ? ಈ ಬಂಡವಾಳವನ್ನು ಚುನಾವಣಾ ನಿಧಿಗೆ ಉಪಯೋಗಿಸಿ.....

12.40 ಪಿ.ಎಂ.

(ಗೊಂದಲ)

ಉಪಾಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಅರಗ ಜ್ಞಾನೇಂದ್ರರವರೇ, ತಮ್ಮ ಭಾಷಣ ಮುಂದುವರೆಸಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:-ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಕಾನೂನು ಸಚಿವರು ಎಲ್ಲವನ್ನೂ ಕೂಡ ರಾಜಕೀಕರಣಗೊಳಿಸುವಂತಹ ಪ್ರಯತ್ನ ನಿಮ್ಮಿಂದಾಗಿ ಆಗುತ್ತಿದೆಯೇ ಹೊರತು ಬೇರೆ ಏನೂ ಇಲ್ಲವೆಂದು ಹೇಳಿದರು. ನಾವು ಅತ್ಯಂತ ಪ್ರಾಮಾಣಿಕವಾಗಿ ಈ ಒಂದು ಛಾಪಾ ಕಾಗದದ ಹಗರಣವನ್ನು ಬಯಲಿಗೆಳೆಯಬೇಕು, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣಕ್ಕೆ ಈ ಹಗರಣದಿಂದ ಏನು ಹೊಡೆತ ಬಿದ್ದಿದೆಯೋ ಅದನ್ನು ನೀಗಿಸಬೇಕು, ನಮ್ಮ ಇಡೀ ಸಾರ್ವಜನಿಕ ಬದುಕಿನ ಮತ್ತು ನಮ್ಮ ಪೋಲೀಸರ ಮೇಲೆ ಇದ್ದಂತಹ ಒಂದು ಕರಿ ನೆರಳನ್ನು ಹೋಗಲಾಡಿಸಬೇಕು ಎನ್ನುವಂತಹ ಪ್ರಾಮಾಣಿಕ ಕಾಳಜಿ ನಮ್ಮದಾಗಿದೆ. ಇದನ್ನು ರಾಜಕೀಕರಣಗೊಳಿಸತಕ್ಕಂಥ ಅವಶ್ಯಕತೆ ನಮಗಿಲ್ಲ. ಇತ್ತೀಚೆಗೆ ಈ ಸದನದಲ್ಲಿ ಸರ್ಕಾರ ನಡೆದುಕೊಂಡಿರತಕ್ಕಂಥ ರೀತಿ ಮತ್ತು ಸದನ ಆರಂಭವಾಗುವುದಕ್ಕಿಂತ ಮೊದಲು, ಈ ಅಬ್ದುಲ್ ಕರೀಂಲಾಲ್‌ನ ಪ್ರಕರಣ ಬೆಳಕಿಗೆ ಬಂದ ನಂತರ ಸರ್ಕಾರ ನಡೆದುಕೊಂಡಿರತಕ್ಕಂಥ ರೀತಿಯನ್ನು ನೋಡಿದಾಗ, ಸರ್ಕಾರದ ಮೇಲೆ ದೊಡ್ಡ ಸಂಶಯ ಬಂದಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ದಾಖಲಾತಿಗಳನ್ನು ಕಳುಹಿಸಿ ಕೊಡಿ ನೋಡೋಣ ಎಂದು ಹೇಳಿದರು. ನಾವು ದಾಖಲಾತಿಯನ್ನು ತೋರಿಸಿದ ಕೂಡಲೇ ಅವರು ವಿಷಯವನ್ನು ಬೇರೆ ಕಡೆ ಹೊರಳುವಂತೆ ಮಾಡುತ್ತಿದ್ದಾರೆ. ಪಕ್ಷದ ವಿಚಾರವನ್ನು ನಾನು ಹೇಳುವ ಅಗತ್ಯ ಇರಲಿಲ್ಲ. ಆದರೆ ನಾನು ಈ ವಿಚಾರವನ್ನು ಏಕೆ ಹೇಳಿದೆ ಎಂದರೆ, ದಿನಾಂಕ 24.11.2001ರಲ್ಲಿ ಆತನ ಮೇಲೆ ಒಂದು ಕಂಪ್ಲೈಂಟ್ ಕೊಟ್ಟಿದ್ದರೂ ಇದುವರೆಗೂ ಒಬ್ಬ ಪೋಲೀಸ್ ಅಧಿಕಾರಿಯೂ ಕೂಡ ಆತನನ್ನು ಕರೆದು ವಿಚಾರಣೆ ಮಾಡುವುದಿಲ್ಲ ಎನ್ನುವುದಾದರೆ ಅದು ಹೇಗೆ? ಹಳ್ಳಿಯಲ್ಲಿರುವ ಬಡ ಬೋರೇಗೌಡನ ಮೇಲೆ ಒಂದು ಸಣ್ಣ ಕಂಪ್ಲೈಂಟ್ ಕೊಟ್ಟರೆ ಸಾಕು ಅವರೊಡನೆ ನಮ್ಮ ಪೊಲೀಸರು ಯಾವ ರೀತಿಯಾಗಿ ವ್ಯವಹರಿಸುತ್ತಾರೆ ಎಂಬುದು ನಮಗೆಲ್ಲರಿಗೂ ಕೂಡ ಗೊತ್ತಿದೆ. ಒಟ್ಟಾರೆಯಾಗಿ ನಮ್ಮ ಇಚ್ಛೆ ಏನೆಂದರೆ, ಪೋಲೀಸ್ ಇಲಾಖೆ ಸಾಮಾನ್ಯ ಜನರ ಬಗ್ಗೆ ಯಾವ ರೀತಿ

ವ್ಯವಹರಿಸುತ್ತದೆಯೋ ಅದೇ ರೀತಿಯಲ್ಲಿ ಒಬ್ಬ ರಾಜಕೀಯ ಪ್ರಭಾವಿಯ ಬಗ್ಗೆಯೂ ಸಹ ವ್ಯವಹಾರ ಮಾಡಬೇಕು ಎಂಬ ಉದ್ದೇಶದಿಂದ ನಾನು ಈ ವಿಚಾರವನ್ನು ಹೇಳಿದೆ. 24.11.2001 ದಿನಾಂಕ ಕಳೆದು ಎಷ್ಟು ಸಮಯವಾಯಿತು ಎಂಬುದನ್ನು ನೀವೇ ಹೇಳಿ ಇವತ್ತು ನಾವು ಜನವರಿ ತಿಂಗಳ ಕೊನೆಯಲ್ಲಿದ್ದೇವೆ. ಇವತ್ತಿನವರೆಗೂ ಕೂಡ ಆತನನ್ನು ಕರೆಸಲಿಲ್ಲ, ವಿಚಾರಣೆ ಮಾಡಲಿಲ್ಲ ಎನ್ನುವುದಾದರೆ ಆತನ ಪ್ರಭಾವ ಈ ಪಕ್ಷದ ಪದಾಧಿಕಾರಿ ಅಲ್ಲದಿದ್ದರೆ ಯಾವ ರೀತಿ ಪ್ರಭಾವವಾಗುತ್ತಿತ್ತು? ಸಂಬಂಧಪಟ್ಟ ಆ ಪೋಲೀಸ್ ಅಧಿಕಾರಿಯ ಮೇಲೆ ಇವರೇನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಸರ್ಕಾರ ಹೇಳಿದರೆ ಸಾಕು. ಮಾನ್ಯ ಹಿರಿಯ ಸಚಿವರು, ಆತ ನಮ್ಮ ಪಕ್ಷದವನು ಎಂಬುದಕ್ಕೆ ನಿಮ್ಮ ಬಳಿ ಏನು ದಾಖಲಾತಿ ಇದೆ ಎಂದು ಕೇಳಿದ್ದಾರೆ. ಆ ದಾಖಲಾತಿಯ ಪ್ರತಿಯನ್ನು ನಾನು ಮಾನ್ಯ ಉಪಾಧ್ಯಕ್ಷರಿಗೆ ಕಳುಹಿಸಿಕೊಡುತ್ತಿದ್ದೇನೆ. ದಯವಿಟ್ಟು ಅವನ ಮೇಲೆ ಕ್ರಮ ಕೈಗೊಳ್ಳಬೇಕು. ಆತನ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಾವು ಉತ್ತರದಲ್ಲಿ ಹೇಳಬೇಕು. ಆತ ನಮ್ಮ ಪಕ್ಷದವನಲ್ಲ ಎಂದು ನೀವು ಸಾಬೀತು ಮಾಡುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ರಾಜ್ಯದ ಪೋಲೀಸ್ ಇಲಾಖೆಯ ಮೇಲೆ ಅನುಮಾನವೇ ಎಂಬ ಪ್ರಶ್ನೆ ನಿನ್ನೆಯಿಂದ ಕೇಳಿ ಬರುತ್ತಿದೆ. ರಾಜ್ಯ ಪೋಲೀಸ್ ಇಲಾಖೆಯ ಮೇಲೆ ನಮಗೆ ಅನುಮಾನ ಇಲ್ಲ, ಅವರು ಮೇಲೆ ನಮಗೆ ಅತ್ಯಂತ ಗೌರವ ಇದೆ. ನಮ್ಮ ಪೋಲೀಸರು ನಡೆದುಕೊಳ್ಳತಕ್ಕಂಥ ರೀತಿ, ಹಿಡಿದಿರತಕ್ಕಂಥ ಅನೇಕ ಪ್ರಕರಣಗಳ ಹಿನ್ನೆಲೆಯನ್ನು ನೋಡಿದಾಗ ನಮಗೆ ಅವರ ಮೇಲೆ ಅತ್ಯಂತ ಗೌರವ ಬಂದಿದೆ. ಅವರ ಗೌರವ ಅಥವಾ ಅಗೌರವಗಳ ಪ್ರಶ್ನೆ ಇಲ್ಲಿಲ್ಲ. ಸಿ.ಬಿ.ಐ.ಗೆ ವಹಿಸಿ ಎಂದು ನಾವು ಮೊದಲು ಕೇಳಲಿಲ್ಲ. ನಾವು ಹೇಳುವುದಕ್ಕಿಂತ ಮೊದಲೇ, ತಮ್ಮ ಸರ್ಕಾರ ಯಾವ ಅಧಿಕಾರಿಯ ಮೇಲೆ ಬಹಳ ದೊಡ್ಡ ಹೊಣೆಗಾರಿಕೆಯನ್ನು ಹೊರಿಸಿ, ಈ ಅಧಿಕಾರಿ ಬಹಳ ಪ್ರಾಮಾಣಿಕನಿದ್ದಾನೆ, ನಮ್ಮ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುತ್ತಾನೆ ಎಂದು ಹೇಳಿ ಯಾವ ಅಧಿಕಾರಿಯನ್ನು ಬೆಂಗಳೂರು ನಗರದ ಪೋಲೀಸ್ ಆಯುಕ್ತರನ್ನಾಗಿ ನೇಮಕ ಮಾಡಿದ್ದೀರೋ, ಆ ಅಧಿಕಾರಿಯಾದ ಸಾಂಗ್ಲಿಯಾನರವರೇ ಈ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಿ ಎಂದು ವರದಿ ಕೊಟ್ಟಿದ್ದಾರೆ. ಹಾಗಾದರೆ ಸಾಂಗ್ಲಿಯಾನರವರ ಬಗ್ಗೆ ನಾವು ಗೌರವ ವ್ಯಕ್ತಪಡಿಸುವಂಥಾದ್ದು, ನಿಮ್ಮ ಪೋಲೀಸ್ ಇಲಾಖೆಯ ಮೇಲೆ ಅಗೌರವ ವ್ಯಕ್ತಪಡಿಸಿದಂತಾಗುತ್ತದೆಯೇ ಎಂಬುದನ್ನು ತಾವೇ ಹೇಳಬೇಕು. ಈ ಪ್ರಕರಣದ ಅಗಾಧತೆಯನ್ನು ನೋಡಿಯೇ ಅವರು ಸಿ.ಬಿ.ಐ. ತನಿಖೆಗೆ ವಹಿಸಿ ಒಂದು ವರದಿ ಕೊಟ್ಟಿದ್ದಾರೆ. ಇದುವರೆಗೆ 12 ಕೋಟಿ ರೂಪಾಯಿಗಳ ನಕಲಿ ಛಾಪಾ ಕಾಗದವೇನು ಸಿಕ್ಕಿದೆಯೋ, ಅದು ಪ್ರಿಂಟ್ ಆಗಿರುವ ಪ್ರೆಸ್ ಅನ್ನು ಏನಾದರೂ ಸೀಜ್ ಮಾಡಲಾಗಿದೆಯೇ? ಅದರ ಮಾಲೀಕನನ್ನು ಏನಾದರೂ ಹಿಡಿದುಕೊಂಡು ಬಂದಿದ್ದಾರಾ? ಈ ಪ್ರಕರಣದ ತನಿಖೆ ಎಲ್ಲಿಯವರೆಗೆ ಮುಂದುವರೆದಿದೆ? ಅದು ಯಾವ ಹಂತದಲ್ಲಿದೆ? ಕೊಲ್ಕತ್ತಾದಲ್ಲಿ ಆ ಪ್ರಿಂಟಿಂಗ್ ಪ್ರೆಸ್ ಇದೆ ಎನ್ನುವಂತಹ

ಸುದ್ದಿಗಳು ಕೇಳಿ ಬರುತ್ತಿವೆ. ಹಾಗಾದರೆ ಅಲ್ಲಿಗೆ ನಮ್ಮ ರಾಜ್ಯದ ಪೋಲೀಸರು ಹೋಗಿದ್ದಾರೆಯೇ? ಅಲ್ಲಿಂದ ಯಾರನ್ನೂ ಬಂಧಿಸಿ ತರಲಿಲ್ಲವೇಕೆ? ತನಿಖೆ ಈ ಪ್ರಕರಣದಲ್ಲಿ ಏಕೆ ಮುಂದುವರೆಯಲಿಲ್ಲ? ಸಿ.ಬಿ.ಐ. ತನಿಖೆಗೆ ವಹಿಸಿ ಎನ್ನುವಂತಹ ಪೋಲೀಸ್ ಅಧಿಕಾರಿಯ ಸಲಹೆಯನ್ನೇ ನಾವು ನಿಮಗೆ ಕೊಟ್ಟ ಕೂಡಲೇ ಅವರ ಪ್ರಾಮಾಣಿಕತೆಯನ್ನು ಶಂಕಿಸಿದಂತಾಗುತ್ತದೆ ಎಂದು ನೀವು ಹೇಳುವುದಾದರೆ, ನಾವು ನಿಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕು ಎಂಬುದನ್ನು ಹೇಳಿ? ಇವತ್ತು ನಮ್ಮ ರಾಜ್ಯದ ಪೋಲೀಸರು ವಿಚಾರಣೆ ನಡೆಸತಕ್ಕಂಥ ರೀತಿಯನ್ನು ನೋಡಿದಾಗ ಕೂಡ ನಮಗೆ ಸಂಶಯ ಬಂದಿದೆ. ಇದನ್ನು ಸಿ.ಬಿ.ಐ.ಗೆ ವಹಿಸಬೇಕೆಂದು ಹಿರಿಯ ಪೋಲೀಸ್ ಅಧಿಕಾರಿಗಳು ಹೇಳಿದ ನಂತರವೂ ಕೂಡ, ಬೇಡ ಇದನ್ನು ಸಿ.ಸಿ.ಬಿ.ಗೆ ವಹಿಸೋಣ ಎಂದು ನೀವು ಹೇಳಿದಿರಿ. ಶ್ರೀಕುಮಾರ್ ಎಂಬುವವರ ನೇತೃತ್ವದಲ್ಲಿ ತಾವು ಅದಕ್ಕಾಗಿ ಒಂದು ಟೀಮ್ ಅನ್ನು ರಚನೆ ಮಾಡಿದಿರಿ. ಆ ಟೀಂನಲ್ಲಿ ಇರತಕ್ಕಂಥ ಇಬ್ಬರು ಡಿವೈಎಸ್ಪಿಗಳ ಮೇಲೆ ಇವತ್ತು ನೇರವಾದಂತಹ ಆಪಾದನೆಗಳಿವೆ. ಅಂತಹವರನ್ನೇ ತೆಗೆದುಕೊಂಡು ಹೋಗಿ ಆ ಟೀಮ್‌ನಲ್ಲಿ ಹಾಕಿದರೆ, ಈ ವ್ಯವಹಾರ ಮುಕ್ತಾಯವಾಗುತ್ತದೆ ಎನ್ನುವುದು ಹೇಗೆ ಖಾತ್ರಿಯಾಗುತ್ತದೆ? ಸಿ.ಬಿ.ಐ.ಗೆ ವಹಿಸಿ ಎಂದು ನಾವು ಹೇಳಲು ಇದೂ ಕೂಡ ಒಂದು ದೊಡ್ಡ ಕಾರಣ. ಈ ಪ್ರಕರಣ ಈಗಾಗಲೇ ರಾಷ್ಟ್ರ ಮತ್ತು ಅಂತರರಾಷ್ಟ್ರದ ಗಮನವನ್ನು ಸೆಳೆದಿದೆ. ಈಗಾಗಲೇ ಮಾತನಾಡಿದ ಎಲ್ಲಾ ಹಿರಿಯ ಸದಸ್ಯರು ಈ ವಿಚಾರವನ್ನು ಆಗಲೇ ಹೇಳಿದ್ದಾರೆ. ನಾನು ಮತ್ತೆ ಅದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಇಡೀ ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಒಂದು ದೊಡ್ಡ ಕ್ಷೋಭೆಯ ವಾತಾವರಣ ನಿರ್ಮಾಣವಾಗುತ್ತಿದೆ. ಅಂತರಾಷ್ಟ್ರೀಯ ಜಾಲ ಕೂಡ ಇದರಲ್ಲಿ ಇನ್‌ವಾಲ್ವ್ ಆಗಿದೆ. ಬಾಂಬೆಯಲ್ಲಿ ನಡೆದಿರತಕ್ಕಂಥ ಬಾಂಬ್ ಬ್ಲಾಸ್ಟ್ ಪ್ರಕರಣ ಇರಬಹುದು ಅಥವಾ ದೇಶದ ಬೇರೆ ಬೇರೆ ಭಾಗಗಳಲ್ಲಿ ನಡೆಯುತ್ತಿರುವಂತಹ ಪ್ರಕರಣಗಳು ಇರಬಹುದು, ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರತಕ್ಕಂಥ ಕೋಮು ಗಲಭೆಗಳು ಇರಬಹುದು, ಇವೆಲ್ಲವುಗಳ ಹಿಂದೆ ಮಾಫಿಯಾ ಜಾಲಗಳ ಹಣ ಬಹಳ ದೊಡ್ಡ ಪ್ರಮಾಣದಲ್ಲಿ ಹರಿಯುತ್ತಿದೆ. ಇದು ಬಹಳ ಆತಂಕಕ್ಕೀಡು ಮಾಡಿರುವಂತಹ ಸಂಗತಿಯಾಗಿದೆ. ಇದರ ಮೂಲವನ್ನು ನಾವು ಚಿವುಟಿ ಹಾಕದೇ ಹೋದರೆ ಅಥವಾ ಬೇರು ಸಹಿತ ಕಿತ್ತು ಹಾಕದೇ ಹೋದರೆ, ಇದರಿಂದ ಮುಂದೆ ಎಂತಹ ಅನರ್ಥಕಾರಿ ಪರಿಣಾಮಗಳು ಆಗುತ್ತವೆ ಎನ್ನುವಂತಹ ಕಲ್ಪನೆಯನ್ನೂ ಕೂಡ ನಾವು ಮಾಡಲಿಕ್ಕೆ ಸಾಧ್ಯವಿಲ್ಲದಂತಾಗಿದೆ. ನಿನ್ನೆ ದಿನ ನಾವು ಮಾನ್ಯ ಸಚಿವರ ಬಗ್ಗೆ ಏನನ್ನೂ ಹೇಳಿರಲಿಲ್ಲ. ಆದರೆ ಮಾನ್ಯ ಕಾನೂನು ಸಚಿವರೇ ಮೊನ್ನೆ ದಿನ ಮಾನ್ಯ ಸಚಿವರ ಹೆಸರನ್ನು ಇಲ್ಲಿ ತಂದರು. ನಿನ್ನೆ ಮಾನ್ಯ ಸದಸ್ಯರಾದ ಸದಾನಂದಗೌಡರವರು ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ರೋಷನ್‌ಬೇಗ್‌ರವರು ಮಧ್ಯೆ ಪ್ರವೇಶಿಸಿ ಮಾತನಾಡುತ್ತಾ ನಮ್ಮ ಕುಟುಂಬ ಹಾಗಲ್ಲ, ನಾವು ಬಹಳ ಪ್ರಾಮಾಣಿಕವಾಗಿ ವ್ಯವಹಾರ

ಮಾಡುತ್ತಿದ್ದೇವೆ ಎಂದು ಬಹಳ ಭಾವಪೂರ್ಣವಾಗಿ ಸಮರ್ಥನೆ ಮಾಡಿಕೊಂಡರು. ನಾನು ಅವರ ಬಗ್ಗೆ ಶಂಕಿಸಲಿಕ್ಕೆ ಹೋಗುವುದಿಲ್ಲ. ಆದರೆ ನಾನು ನನ್ನ ಕೆಲವು ಅನುಮಾನಗಳನ್ನು ಇಲ್ಲಿ ವ್ಯಕ್ತಪಡಿಸಲೇಬೇಕಾಗಿದೆ. ಬ್ರಿಗೇಡ್ ರಸ್ತೆಯ ಫಿಫ್ತ್ ಅವಿನ್ಯೂ ವಾಣಿಜ್ಯ ಸಮುಚ್ಛಯ ಮೂರನೇ ಮಹಡಿಯ 301ನೇ ಕೊಠಡಿ ನಿಮ್ಮ ಕುಟುಂಬದ ಆಸ್ತಿ ಹೌದೋ ಅಲ್ಲವೋ? ಈ 301ನೇ ಕೊಠಡಿಯಲ್ಲಿ ಕರೀಂಲಾಲ್ ಮತ್ತು ಆತನ ಟೀಮ್ ನಿಮ್ಮ ಸಹೋದರರನ ನೇತೃತ್ವದಲ್ಲಿ ನಡೆಸಿರತಕ್ಕಂಥ ಪಾರ್ಟ್‌ನರ್‌ಶಿಪ್ ಬಿಸಿನೆಸ್........

ಶ್ರೀ ಡಿ.ಬಿ.ಚಂದ್ರೇಗೌಡ:- ನೋಟೀಸ್ ಇಲ್ಲದೇ ಹೀಗೆ ಏಕಾಏಕಿಯಾಗಿ ಪ್ರಸ್ತಾಪ ಮಾಡಿದರೆ ಹೇಗೆ Let him send a notice to the concerned person.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಸಚಿವರು ನಿನ್ನೆ ಮಾತನಾಡಿದ್ದಾರೆ.....

ಶ್ರೀ ಡಿ.ಬಿ.ಚಂದ್ರೇಗೌಡ:- ಅವರು ಹೇಳಿದ ಮೇಲೆ ಅದನ್ನೆಲ್ಲಾ ಒಪ್ಪಿಕೊಳ್ಳಬೇಕು.

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಸಚಿವರು ಹೇಳಿದ ವಿಚಾರಗಳನ್ನೇ ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಬೇರೆ ಯಾವ ಹೊಸ ವಿಚಾರಗಳನ್ನೂ ಸಹ ನಾನು ಇಲ್ಲಿ ಪ್ರಸ್ತಾಪ ಮಾಡಿಲ್ಲ.

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಉಪಾಧ್ಯಕ್ಷರೇ, for a personal explanation, when a charge is made against me or when a charge is made against the Hon'ble Member, the Hon'ble Member is fully entitled for the protection of the entire House including the Chair to defend himself. ನಾವು ಆ ಡಿಫೆನ್ಸ್ ಅನ್ನೇ ಚರ್ಚೆಯ ವಸ್ತುವನ್ನಾಗಿ ಮಾಡಿಕೊಳ್ಳತಕ್ಕದ್ದು ಸರಿಯಲ್ಲ. ನಾವು ಸಬ್-ಜ್ಯುಡೀಸ್ ಎಂದು ಕಳೆದ ಎರಡು ದಿವಸಗಳಿಂದ ಹೇಳುತ್ತಿದ್ದೇವೆ. ಒಂದು ಇಂಪ್ರೆಷನ್ ನಮ್ಮಲ್ಲಿ ಬಂದಿತ್ತು ಏನೆಂದರೆ, ಹೈಕೋರ್ಟ್ ಮುಂದೆ ಇರುವಂತಹ ಎರಡು ಪ್ರಸ್ತಾವನೆಗಳನ್ನು ಬಿಟ್ಟು ಬಾಕಿ ಎಲ್ಲಾ ಪ್ರಸ್ತಾವನೆಗಳನ್ನು ಮಾಡುತ್ತೀರೆಂದು. ಅದಕ್ಕೆ ಸೀಮಿತವಾಗಿ ಮಾತನಾಡುವ ಹಾಗೆ ಮಾಡಿಕೊಳ್ಳಬೇಕೆಂದು ನನ್ನ ಮನವಿ.

ಶ್ರೀ ಆರಗ ಜ್ಞಾನೇಂದ್ರ:- ಇಷ್ಟು ದಿವಸಗಳಿಂದ ಸದನದಲ್ಲಿ ಇದರ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಎದ್ದು ಇದರ ಬಗ್ಗೆ ಬಾಯಿ ಬಿಟ್ಟಿರಲಿಲ್ಲ. ಕೊನೆಗೆ ಇವತ್ತು ಎದ್ದಿದ್ದಾರೆ. ಇದನ್ನು ಮುಕ್ತಾಯ ಮಾಡಲಿ ಎಂದು ನಾನು ಹಾರೈಸುತ್ತೇನೆ. ಅವರ ಸರ್ಕಾರದ ಮೇಲೆ ಇರುವ ಗುರುತರವಾದ ಆಪಾದನೆಯನ್ನು ಅವರು ಕಳೆದುಕೊಳ್ಳಲಿ ಎಂದು ನಾನು ಹಾರೈಸುತ್ತೇನೆ. ಇದರ ಬಗ್ಗೆ ಸರಿಯಾದ ಎನ್‌ಕ್ವೈರಿ ನಡೆಯಬೇಕಾಗುತ್ತದೆ. ಇವರು ಇದರ ಬಗ್ಗೆ ಪ್ರಾಮಾಣಿಕವಾಗಿ ವ್ಯವಹರಿಸಲಿ ಎಂದು ಹಾರೈಸುತ್ತೇನೆ. ನಾನು ಅವರ ಮೇಲೆ ಛಾರ್ಜಸ್ ಮಾಡುತ್ತಿಲ್ಲ. ಅವರು

ಯಾವುದನ್ನು ಡಿಫೆಂಡ್ ಮಾಡಿಕೊಂಡರು ಅದರ ಬಗ್ಗೆ ಕೆಲವು ವಿವರಗಳನ್ನು ಅವರಿಂದ ಪಡೆಯುವುದಕ್ಕೆ ಹೊರಟಿದ್ದೇನೆ, ಅಷ್ಟೇ ಹೊರತು ಬೇರೆ ಏನೂ ಅಲ್ಲ. ಕಮರ್ಷಿಯಲ್ ಟ್ಯಾಕ್ಸ್‌ಗೆ ಕೊಟ್ಟಿರತಕ್ಕಂತಹ ಪತ್ರ ನನ್ನ ತಮ್ಮನದು ಅಲ್ಲ, ಅದರಲ್ಲಿ ಆರ್.ಆರ್.ಬೇಗ್ ಎಂದು ಸಿಗ್ನೇಚರ್ ಹಾಕುತ್ತಾರೆ. ಅಷ್ಟೇ ಹೊರತು ಬೇರೆ ಸಹಿ ಹಾಕುವುದಿಲ್ಲವೆಂದು ಹೇಳಿದರು. ಇಷ್ಟು ದಿವಸಗಳಾಗಿವೆ, ಮಾನ್ಯ ಸಚಿವರ ಸುತ್ತ ಈ ಹಗರಣದ ಮಾಲೆ ಮಾಧ್ಯಮಗಳಲ್ಲಿ ಮತ್ತು ಇತರೆ ರೂಪದಲ್ಲಿ ತಿರುಗುತ್ತಿದೆ. ಈ ರಾಜ್ಯದಲ್ಲಿ ಮತ್ತು ಆಂಧ್ರ ರಾಜ್ಯದಲ್ಲಿ ಖ್ಯಾತಿಯಾಗಿದೆ. ಇಷ್ಟು ದಿವಸಗಳಿಂದ ಇದು ನಡೆಯುತ್ತಿದ್ದು ಆ ಪತ್ರ ನಕಲಿ ಎಂದು ಆಗುವುದಾದರೆ ಇದರ ಬಗ್ಗೆ ಕಾನೂನು ಕ್ರಮ ಏಕೆ ಜರುಗಿಸಲಿಲ್ಲವೆಂಬುದು ನನ್ನ ಆತಂಕ. ಮಾನ್ಯ ಸಚಿವರು ಏಕೆ ಕಾನೂನು ಕ್ರಮ ಜರುಗಿಸಲಿಲ್ಲ, ಅವರು ನನ್ನ ತಮ್ಮನದು ಅಲ್ಲವೆಂದು ಬಹಳ ಖಡಾಖಂಡಿತವಾಗಿ ನಿರಾಕರಿಸಿದ್ದಾರೆ. ಹೀಗೆ ನಿರಾಕರಿಸುವಂತಹವರು ಯಾವ ಕಾರಣಕ್ಕಾಗಿ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲ? ಸಿಗ್ನೇಚರ್ ಹೌದು ಅಲ್ಲವೆಂದು ಹೇಳುವ ಪ್ರಭಾವೀ ಮಂತ್ರಿಗಳು ಸರ್ಕಾರದಲ್ಲಿದ್ದಾರೆ. ಸರ್ಕಾರದಲ್ಲಿ ವಿನಂತಿ ಮಾಡಿಕೊಂಡು ಸಹಿ ಗುರುತು ಪತ್ತೆ ಹಚ್ಚುವಿಕೆ ಕೆಲಸ ಮಾಡದೆ ಇರುವುದು ಏನಿದೆ ಇದು ನಮಗೆ ಆತಂಕಕ್ಕೆ ಈಡು ಮಾಡಿರುವ ಸಂಗತಿ. ಈ ರೀತಿ ದೊಡ್ಡ ಆದಾಯ ಸೋರಿ ಹೋಗತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಹಳ ದೊಡ್ಡ ಆದಾಯ, ನಾನು ಕೋಟ್ಯಾಂತರ ರೂಪಾಯಿಗಳು ಎಂದರೆ ಮಾನ್ಯ ಕಾನೂನು ಸಚಿವರು ಮತ್ತೆ ಎದ್ದು ಮಾತನಾಡುತ್ತಾರೆ. ಎಷ್ಟು ಕೋಟಿ ರೂಪಾಯಿಗಳು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸರ್ಕಾರದ ಕಡೆಯಿಂದ ಪತ್ತೆ ಹಚ್ಚುವುದಕ್ಕೆ ಆಗದೇ ಇರುವಾಗ, ಅಂತರರಾಜ್ಯ ಮಟ್ಟದ ವ್ಯಾಪ್ತಿಯನ್ನು ಈ ಅಪರಾಧ ಪಡೆದಿರುವುದರಿಂದ, ಮಧ್ಯಪ್ರದೇಶದಿಂದ ಹಿಡಿದು, ಗುಜರಾತ್‌ನಿಂದ ಹಿಡಿದು ಎಲ್ಲಾ ಪೋಲೀಸ್ ಠಾಣೆಗಳಲ್ಲಿ ಈತನ ಬಗ್ಗೆ ಮೊಕದ್ದಮೆ ಇರುವುದರಿಂದ ಇದನ್ನು ಸಿಬಿಐಗೆ ವಹಿಸಬೇಕೆಂದು ನಿಮ್ಮ ಪೋಲೀಸ್‌ನವರೇ ಸಜೆಸ್ಟ್ ಮಾಡಿರುವುದರಿಂದ ಇದನ್ನು ಸಿಬಿಐಗೆ ಕೊಡುವುದು ತೀರಾ ಅಗತ್ಯ ಇದೆ. ತಾವು ರಾಜ್ಯಪಾಲರ ಭಾಷಣದಲ್ಲಿ ಸ್ಪೆಷಲ್ ಕೋರ್ಟ್ ಮಾಡಿಬಿಡುತ್ತೇವೆಂದು ಹೇಳಿದ್ದೀರಿ. ಇಧರಿಂದ ನಮಗೆ ಎಷ್ಟು ಕಾಳಜಿ ಇದೆ ಇದರ ಬಗ್ಗೆ ಇದೆ ಎಂದು ನೋಡಬೇಕೆಂದು ಮಾನ್ಯ ಕಾನೂನು ಸಚಿವರು ಹೇಳಿದರು. ಯಾರಾದರೂ ಸಣ್ಣ ಮಕ್ಕಳಿಗೆ ಹೇಳಬಹುದು. ಕೋರ್ಟಿಗೆ ಹೋಗುವುದು ಯಾವಾಗ ಅಂದರೆ ಎಲ್ಲಾ ವಿಚಾರಣೆ ಆದನಂತರ. ಮೊದಲು ವಿಚಾರಣೆ ಆಗಬೇಕಾಗುತ್ತದೆ. ವಿಚಾರಣೆಗಳ ಬಗ್ಗೆ ಸಂಶಯ ಇದ್ದಾಗ, ವಿಚಾರಣೆ ಕಾರ್ಯವ್ಯಾಪ್ತಿ ಬಗ್ಗೆ ಜಿಜ್ಞಾಸೆ ಇರುವಾಗ ಕೋರ್ಟ್‌ಗೆ ಹೋಗುತ್ತೇವೆಂದು ಹೇಳುತ್ತಾರೆ. ಒಟ್ಟಾರೆ ಸರ್ಕಾರಕ್ಕೆ ಇದರ ಮೇಲೆ ಕಾಳಜಿ ಇಲ್ಲ. ಏನಾದರೂ ಮಾಡಿ ತಿಪ್ಪೆ ಸಾರಿಸಿ ಇದನ್ನು ಮುಚ್ಚಿ ಹಾಕುವುದಕ್ಕೆ ದೊಡ್ಡ ಸಂಚನ್ನು ಸರ್ಕಾರವೇ ನೇರವಾಗಿ ಮಾಡುತ್ತಿದೆ. ಬೋಫೋರ್ಸ್ ಹಗರಣಕ್ಕಿಂತ ಇದು ಹೆಚ್ಚಿನದು. ಇದರ ವ್ಯಾಪ್ತಿ ಎಷ್ಟು ಇದೆ ಎಂದು ಹೇಳಬೇಕಾಗುತ್ತದೆ. ಸುಮಾರು

1200 ಕೋಟಿ ರೂಪಾಯಿಗಳು, ಫೇಕ್ ಇದೆ ಎಂದು ಹೇಳಿದರೆ, ಇದರ ವ್ಯಾಪ್ತಿ ಎಷ್ಟು ಇದೆ ಎಂಬುದನ್ನು ಯೋಚಿಸಬೇಕು. ಇಷ್ಟೊಂದು ಹಣಕಾಸಿನ ಇನ್‌ವಾಲ್ವ್‌ಮೆಂಟ್ ಇರುವುದರಿಂದ ಎರಡೂ ಸರ್ಕಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕತೆಯ ಮೇಲೆ ತುಂಬಾ ದುಷ್ಪರಿಣಾಮ ಬೀರುವುದರಿಂದ ನಿಮಗೆ ಏನಾದರೂ ನೈಜವಾದ ಕಳಕಳಿ ಇದ್ದರೆ ಸಿಬಿಐ ಎನ್‌ಕ್ವೈರಿಗೆ ವಹಿಸಿಕೊಡಬೇಕು. ಇದನ್ನು ಸರಿಯಾಗಿ ತನಿಖೆ ಮಾಡುವುದಕ್ಕೆ ಮುಕ್ತವಾದ ಅವಕಾಶ ಒದಗಿಸಿಕೊಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ(ಕೋಲಾರ):- ಸನ್ಮಾನ್ಯ ಉಪ ಸಭಾಧ್ಯಕ್ಷರೆ, ಇವತ್ತು ನಕಲಿ ಛಾಪಾ ಕಾಗದದ ಅಸಲೀಕರಣ ವಿಷಯದಲ್ಲಿ ಸುಮಾರು ಆಗಸ್ಟ್ 20,2001 ರಿಂದ 2002ನೇ ಇಸವಿಯವರೆಗೆ ಕೂಡ ಇದು ಚರ್ಚೆಗೆ ಗ್ರಾಸವಾಗಿದೆ. ಒಂದು ಕಡೆ ನಮ್ಮ ದೇಶದಲ್ಲಿ ಭಯೋತ್ಪಾದನೆ ಆದರೆ ಕೆಲವು ಮನುಷ್ಯರು ಸಾಯುತ್ತಾರೆ ಅಥವಾ ಕೆಲವು ಬಿಲ್ಡಿಂಗ್ ಹೋಗಬಹುದು. ಆದರೆ ಆರ್ಥಿಕ ಭಯೋತ್ಪಾದನೆ ಆದರೆ ಇಡೀ ಸಮಾಜ ಸಾಯುತ್ತದೆ. ಇದಕ್ಕೆ ಉದಾಹರಣೆಗಳು ಅನೇಕ ಇವೆ. ಹರ್ಷದ್‌ಮೆಹ್ತಾ ಷೇರು ಹಗರಣ ಇರಬಹುದು, ಯುಟಿಐ ಹಗರಣ ಇರಬಹುದು, ಯೂರಿಯಾ ಹಗರಣ ಇರಬಹುದು, ಬೋಫೋರ್ಸ್ ಹಗರಣ ಇರಬಹುದು, ಹೀಗೆ ಅನೇಕ ಹಗರಣಗಳ ಸರಮಾಲೆಯಲ್ಲಿ ಸಿಕ್ಕಿ ಹಾಕಿಕೊಂಡು ಇವತ್ತು ನಮ್ಮ ಆರ್ಥಿಕ ವ್ಯವಸ್ಥೆ ಎಲ್ಲಿಯವರೆಗೆ ಹೋಗಿದೆ ಎಂದರೆ ಕೆಲವು ರಾಜ್ಯ ಸರ್ಕಾರಗಳು ಸಂಬಳ ಕೊಡದೆ ಇರುವ ಪರಿಸ್ಥಿತಿಗೆ ಹೋಗಿದೆ. ಅದಕ್ಕೇ ನಾನು ಹೇಳುವುದೇನೆಂದರೆ, ನಕಲಿ ಛಾಪಾ ಕಾಗದದ ಅಸಲೀಕರಣವನ್ನು ಇಷ್ಟು ವರ್ಷಗಳಾದರೂ ಕೂಡ 2001-2002ನೇ ಇಸವಿಗೆ ಬಂದರೂ ಕೂಡ ಅದು ನಿಲ್ಲಿಸುವುದಕ್ಕೆ ಆಗಲಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ಮತ್ತು ಮಾನ್ಯ ಸಂಸದೀಯ ವ್ಯವಹಾರ ಸಚಿವರು ಹೇಳಿದರು, ಅಸಲಿ ಎಷ್ಟು ಆಗಿದೆ, ನಕಲಿ ಎಷ್ಟು ರಿಜಿಸ್ಟರ್ ಆಗಿದೆ ಎಂದು ಹೇಗೆ ಕಂಡುಹಿಡಿಯುವುದು ಎಂದು ಹೇಳಿದರು. ಈ ಸರ್ಕಾರ ನಡೆಸುತ್ತಿರುವವರು ನೀವು. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ರಾಜ್ಯದ ರಿಜಿಸ್ಟ್ರಾರ್ ಇದ್ದಾರೆ, ನಾಸಿಕ್‌ನಿಂದ ಎಷ್ಟು ಛಾಪಾ ಕಾಗದಗಳನ್ನು ಪರ್ಚೇಸ್ ಮಾಡಿದ್ದಾರೆಂದು ಲೆಕ್ಕ ಇರುತ್ತದೆ. 2000ನೇ ಇಸವಿಯಿಂದ ಡೇಟ್ ಹಾಕಿ ಆ ಡೇಟ್‌ಗೆ ಎಷ್ಟು ಇಶ್ಯೂ ಆಗಿದೆ, ಯಾವ ಯಾವ ಸಬ್ ರಿಜಿಸ್ಟ್ರಾರ್‌ಗೆ ಎಷ್ಟು ಕೊಟ್ಟಿದ್ದಾರೆ, ಅಥವಾ ಯಾವ ಯಾವ ವೆಂಡರ್‌ಗೆ ಎಷ್ಟು ಕೊಟ್ಟಿದ್ದಾರೆಂದು ಲೆಕ್ಕ ಇದೆ. 24 ಗಂಟೆಗಳಲ್ಲಿ ನಮ್ಮ ರಾಜ್ಯದಲ್ಲಿರುವ ಸಬ್ ರಿಜಿಸ್ಟ್ರಾರ್‌ಗಳಲ್ಲಿ ಎಷ್ಟು ರಿಜಿಸ್ಟರ್ ಆಗಿದೆ ಎಂದು ಮಾಹಿತಿ ತೆಗೆದುಕೊಂಡು, ನಾಸಿಕ್‌ನಿಂದ ಎಷ್ಟು ಡ್ರಾ ಮಾಡಿದ್ದಾರೆ ಎಂದು ಮಾಹಿತಿ ತೆಗೆದುಕೊಂಡರೆ ಅನುಕೂಲವಾಗುತ್ತದೆ. ನಕಲಿ ಛಾಪಾ ಕಾಗದದಿಂದ ಎಷ್ಟು

ದುಡ್ಡು ಆಗಿದೆ ಎಂದು ಗೊತ್ತಿದ್ದರೂ ನಿಮಗೆ ಹೇಳುವ ಇಚ್ಛಾಶಕ್ತಿ ಇಲ್ಲವೆಂದರೆ ನಾವು ಏನು ಹೇಳುವುದು? ಇದನ್ನು ಬಹಳ ಗುರುತರವಾಗಿ ಯೋಚನೆ ಮಾಡಬೇಕಾಗುತ್ತದೆ. ನಕಲಿ ಛಾಪಾ ಕಾಗದ 10,000ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುತ್ತದೆ ಎಂದರೆ, ಹೇಗೆ ಹೇಳುತ್ತೀರಿ ಎಂದರೆ ಹೇಗೆ? ನಿಮ್ಮ ಕೈಯಲ್ಲಿ ಆಡಳಿತ ಇದ್ದು ಕೇವಲ ಒಂದೇ ಒಂದು ಆರ್ಡರ್‌ನಲ್ಲಿ 24 ಗಂಟೆಗಳಲ್ಲಿ ನಿಮ್ಮಲ್ಲಿ ಅಸಲಿ ಎಷ್ಟು, ನಕಲಿ ಎಷ್ಟು ಇದೆ ಎಂದು ಹೇಳಬಹುದು. ಅದಕ್ಕೆ ನಿಮ್ಮ ಇಚ್ಛಾಶಕ್ತಿಯನ್ನು ಉಪಯೋಗ ಮಾಡಿಲ್ಲ. ಆಗಸ್ಟ್ 10, 2000ದಿಂದ ಇದನ್ನು ಮುಂದುವರೆಸಿಕೊಂಡು ಬಂದಿದ್ದೀರಿ. ಇದನ್ನು ಮಾನ್ಯ ಕಂದಾಯ ಮಂತ್ರಿಗಳು ಹಾಸನದಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟು ಇಲ್ಲಿ ಇಲ್ಲ ಎನ್ನುವಂಥದ್ದಲ್ಲ. ಇದನ್ನು ಹೇಳಿಕೊಡಬೇಕಾ? ನಿಮ್ಮ ಅಧಿಕಾರಿಗಳಲ್ಲಿ ಮಾಹಿತಿ ಇಲ್ಲವಾ? ನಿಮ್ಮ ಅಧಿಕಾರಿಗಳಲ್ಲಿ ಮಾಹಿತಿ ಇಟ್ಟುಕೊಂಡು ಎಷ್ಟು ಕೋಟಿ ರೂಪಾಯಿಗಳ ಹಗರಣ ಎಂದು ನಮಗೆ ಕೇಳುತ್ತಿದ್ದೀರಿ. ಇದು ಸರ್ಕಾರ ನಡೆಸುವ ರೀತಿಯಾ? ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳದೆ, ಆರ್ಥಿಕವಾಗಿ ಈಗಾಗಲೇ ನಮ್ಮ ಸರ್ಕಾರದಲ್ಲಿ ಬರುವಂತಹ ಆದಾಯದಲ್ಲಿ ಶೇಕಡ 72 ಭಾಗ ಸಂಬಳ ಸಾರಿಗೆಗೆ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ಇನ್ನೂ 2-3 ಹಗರಣಗಳು ಸೇಲ್ಸ್ ಟ್ಯಾಕ್ಸ್ ಮತ್ತು ಲಿಕ್ಕರ್‌ನಲ್ಲಿ ಆದರೆ ನಾವೂ ಕೂಡ ಈ ರಾಜ್ಯದಲ್ಲಿ ಸಂಬಳ ಕೊಡುವ ಪರಿಸ್ಥಿತಿಗೆ ಬರುವುದಿಲ್ಲ. ಇದನ್ನು ಅರ್ಥ ಮಾಡಿಕೊಳ್ಳದೆ ನಿಮ್ಮಲ್ಲಿ ಎಲ್ಲಾ ಅಧಿಕಾರ ಇದ್ದರೂ ಕೂಡ ಎಷ್ಟು ಹಣ ಎಂದು ನಮಗೆ ಮರುಪ್ರಶ್ನೆ ಕೇಳುತ್ತಾರೆಂದರೆ ಇದನ್ನು ಯಾವ ರೀತಿಯಲ್ಲಿ ಯೋಚನೆ ಮಾಡಬೇಕು? ಇದನ್ನು ಮುಚ್ಚಿ ಹಾಕುವ ಚಿಂತನೆ ಇದೆಯಾ ಎಂದು ಡೌಟ್‌ಗಳು ಅದಷ್ಟಕ್ಕೆ ಅದೇ ಬರುತ್ತವೆ. ನೀವು ಮಾಡಬೇಕಾದ ಕೆಲಸಕ್ಕೆ ನಿಮಗೆ ಇಚ್ಛಾಶಕ್ತಿ ಇಲ್ಲ ಎನ್ನುವ ಮಾತನ್ನು ನಾನು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ವೆಂಡರ್ ಹತ್ತಿರ 12 ಕೋಟಿ ರೂಪಾಯಿಗಳ ನಕಲಿ ಛಾಪಾ ಕಾಗದ ಸಿಕ್ಕಿದೆ, ಹಾಗಾದರೆ ಈ ರಾಜ್ಯದಲ್ಲಿ ಎಷ್ಟು ವೆಂಡರ್‌ಗಳು ಇದ್ದಾರೆ, ಬೇರೆ ಬೇರೆ ರಾಜ್ಯಗಳಲ್ಲಿ ಎಷ್ಟು ವೆಂಡರ್‌ಗಳು ಇದ್ದಾರೆ, ಆಂಧ್ರ ಇರಬಹುದು, ಮಹಾರಾಷ್ಟ್ರ ಇರಬಹುದು, ಇವೆಲ್ಲಾ ವೆಂಡರ್‌ನಲ್ಲಿ ಆಗಿರುವ ಹಗರಣದಲ್ಲಿ ನಕಲಿ ಛಾಪಾ ಕಾಗದದ ಬೆಲೆ ಎಷ್ಟು ಎಂಬುದನ್ನು ಹೇಳಬಹುದು. ಸನ್ಮಾನ್ಯ ಕಂದಾಯ ಮಂತ್ರಿಗಳು ಹೇಳುವಾಗ ನಾಸಿಕ್‌ನಲ್ಲಿ ಕೂಡ ನಕಲಿ ಛಾಪಾ ಕಾಗದ ಆಗುತ್ತದೆ ಎಂದು ಹೇಳಿದರು. ಅರಗ ಜ್ಞಾನೇಂದ್ರರವರು ಮಾತನಾಡುವಾಗ ಯಾವುದೋ ವಿಷಯ ಹೇಳಿದಾಗ ಅದರ ಬಗ್ಗೆ ನಿಮ್ಮಲ್ಲಿ ಮಾಹಿತಿ ಇದೆಯಾ, ಕಟಿಂಗ್ ಇದೆಯಾ ಎಂದು ಕೇಳಿದರು. ನೀವು ಹಾಗೆ ಅಲ್ಲಿ ನಕಲಿ ಛಾಪಾ ಕಾಗದ ಪ್ರಿಂಟ್ ಆಗುತ್ತಿದೆ ಎಂದು ಹೇಳುವುದಕ್ಕೆ ನಿಮ್ಮಲ್ಲಿ ಯಾವ ಆಧಾರ ಇದೆ ಇದನ್ನು ಯಾವ ದಿಕ್ಕಿನಲ್ಲಿ ನೀವು ತೆಗೆದುಕೊಂಡು ಹೋಗುತ್ತಿದ್ದೀರಿ ಎಂಬುದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಂದು 13 ಜನರನ್ನು ಬಂಧಿಸಲಾಗಿದೆ. ಇವೊತ್ತು ಅಬ್ದುಲ್ ಕರಿಂಲಾಲ್ ತೆಲಗಿ ಅವರನ್ನು ಆ ಪಕ್ಷ ಈ ಪಕ್ಷದವರು ಎಂದು ಹೇಳುವುದಕ್ಕೆ

ಹೋಗುವುದಿಲ್ಲ. ಇವೊತ್ತು ಒಳ್ಳೆಯವರು ಮತ್ತು ಕ್ರಿಮಿನಲ್‌ಗಳೂ ಕೂಡ ಎಲ್ಲಾ ಪಕ್ಷಗಳಲ್ಲೂ ಇರುತ್ತಾರೆ, ಅದೇ ರೀತಿ ಬೇರೆ ಬೇರೆ ಜನಾಂಗಗಳಲ್ಲೂ ಇರುತ್ತಾರೆ. ಇಂಥವರು ಒಂದು ಪಕ್ಷದಲ್ಲಿಯೇ ಇರುತ್ತಾರೆ ಎಂದು ನಾನು ಹೇಳಲಾರೆ. ಆದರೆ ಇಂದು ಯಾರನ್ನು ನೀವು ಹಿಡಿದಿದ್ದೀರಿ ಆತನನ್ನು ಸರಿಯಾದ ರೀತಿಯಲ್ಲಿ, ಕಾನೂನು ರೀತಿಯಲ್ಲಿ ಒಳಪಡಿಸದೇ ಹೋದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ರೀತಿಯ ಹಗರಣಗಳಿಗೆ ನಾವು ಅವಕಾಶ ಮಾಡಿಕೊಟ್ಟಿದ್ದೇ ಆದರೆ ರಾಜ್ಯದ ಬೊಕ್ಕಸಕ್ಕೆ ಆಗುವಂಥ ನಷ್ಟವನ್ನು ಯಾರು ಕಟ್ಟಿಕೊಡುತ್ತಾರೆ? ಸರ್ಕಾರ ಹೇಗೆ ನಡೆಸುವುದಕ್ಕಾಗುತ್ತದೆ? ಎಷ್ಟು ದಿವಸಗಳ ಕಾಲ ನಬಾರ್ಡ್‌ನಿಂದ ಹಾಗೂ ವಿಶ್ವಬ್ಯಾಂಕ್‌ನಿಂದ ಸಾಲ ತರುತ್ತೀರಿ? ಇದುವರೆಗೂ ತಂದಿರುವ ಸಾಲಕ್ಕೇ ಬಡ್ಡಿ ಕಟ್ಟುವುದಕ್ಕೆ ವರಮಾನದ ಭಾಗವನ್ನು ತೆಗೆದಿಡಬೇಕಾಗಿದೆ. ರಾಜ್ಯಕ್ಕೆ ಬಂದ 100 ಭಾಗದ ಆದಾಯದಲ್ಲಿ 72 ಭಾಗ ಈ ಅಧಿಕಾರ ವರ್ಗಕ್ಕೆ ಹೋಗುತ್ತಿರುವಾಗ ಇನ್ನು ಕೇವಲ 28 ಭಾಗದಲ್ಲೂ ಕೂಡ ಈ ಪರಿಸ್ಥಿತಿ ಆದರೆ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಏನು? ರಾಜ್ಯದ ಅಭಿವೃದ್ಧಿ ಏನು ಎಂಬ ಬಗ್ಗೆ ಚಿಂತನೆ ಮಾಡಬೇಕು ಎಂದು ನಾನು ಹೇಳಲಿಚ್ಛಿಸುತ್ತೇನೆ. ಈ ವ್ಯಕ್ತಿ ಕೇವಲ ಒಂದು ವರ್ಷ, ಎರಡು ವರ್ಷವಲ್ಲ, ಕಳೆದ ನಾಲ್ಕು ವರ್ಷಗಳಿಂದಲೂ ಬೇಕಾಗಿದ್ದಾನೆ. ಇಂಥ ವ್ಯಕ್ತಿಯ ಕೇಸ್‌ನ್ನು ಒಬ್ಬ ಒಳ್ಳೆಯ ಅಧಿಕಾರಿಯ ಕೈಗೆ ಕೊಟ್ಟು ಆತನನ್ನು ಹಿಡಿಸಿದ್ದೀರಿ. ಅದಕ್ಕೇ ನಾನು ರಾಜಕೀಯ ಇಚ್ಛಾಶಕ್ತಿ ಇರಬೇಕು ಎಂದು ಹೇಳಿದ್ದು. ಆದುದರಿಂದ ಈ ಹಗರಣವನ್ನು ಈಗಾಗಲೇ ನೇರವಾಗಿ ಈಚೆಗೆ ತಂದು ತನಿಖೆ ಮಾಡಿದ್ದರೆ ಇಷ್ಟುಹೊತ್ತಿಗೆ ಎಷ್ಟೋ ನಕಲಿ ವ್ಯವಹಾರಗಳನ್ನು ನಿಲ್ಲಿಸಬಹುದಾಗಿತ್ತು. ಅದನ್ನು ನೀವು ನಿಲ್ಲಿಸಲಿಲ್ಲ. ಇವೊತ್ತು ಶ್ರೀ ರವೀಂದ್ರ ಪ್ರಸಾದ್ ನೇತೃತ್ವದಲ್ಲಿ ಸರ್ಕಾರ ತಂಡ ರಚನೆ ಮಾಡಿದೆ. ಅದನ್ನು ರಚನೆ ಮಾಡಿದ ಮೇಲೆ ಏನು ರಿಸಲ್ಟ್ ಇದೆ? ಒಬ್ಬ ದಕ್ಷ ಅಧಿಕಾರಿ ಈ ಕೇಸ್‌ನ್ನು ಸಿ.ಬಿ.ಐ.ಗೆ ವಹಿಸಬೇಕು ಎಂದು ಹೇಳಿದರೆ ನೀವು ಸಿ.ಬಿ.ಐ.ಗೆ ಕೊಡುವುದಕ್ಕೆ ತೊಂದರೆ ಏನಾಗಿದೆ? ಹಿಂದೆ ಇದೇ ಸದನದಲ್ಲಿ ಅಂದು ಗೃಹ ಮಂತ್ರಿಗಳಾಗಿದ್ದ ಮಾನ್ಯ ಜಾಲಪ್ಪನವರು ರಶೀದ್ ಕೊಲೆ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಲು ಒಪ್ಪಿಕೊಂಡಿದ್ದರು. ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ರಾಮಕೃಷ್ಣ ಹೆಗಡೆಯವರು ಸಿ.ಬಿ:ಐ.ಗೆ ತನಿಖೆ ಮಾಡಲು ವಹಿಸಿಕೊಟ್ಟರು. ಇದರಿಂದಾಗಿ ರಶೀದ್ ಕೊಲೆ ಹೇಗಾಯಿತು ಎನ್ನುವ ವಿಷಯ ಈ ದೇಶದ ಜನತೆಗೆ ಗೊತ್ತಾಯಿತು. ಅದೇ ರೀತಿ ಈ ಕೇಸ್‌ನ್ನು ಸಿ.ಬಿ.ಐ.ಗೆ ವಹಿಸಲು ನಿಮಗೆ ಆಗಿರುವ ತೊಂದರೆಯಾದರೂ ಏನು? ಸಿ.ಬಿ.ಐ.ಗೆ ವಹಿಸಲು ಒಪ್ಪಿದರೆ ತಪ್ಪೇನೂ ಆಗುವುದಿಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ಇವೊತ್ತು ಈ ವ್ಯಕ್ತಿಯ ಕಾಣದ ಕೈ ಕೆಲಸಗಳು ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ ಹೊರದೇಶಗಳಾದ ನೇಪಾಳ ಮತ್ತು ಬಾಂಗ್ಲಾ ದೇಶಗಳಲ್ಲೂ ನಡೆದಿದೆ. ನಾನು ಮೂರು ತಿಂಗಳ ಹಿಂದೆ

ಕಠ್ಮಂಡ್‌ಗೆ ಹೋಗಿದ್ದಾಗ 500-00 ರೂಪಾಯಿಗಳ ನೋಟ್‌ನ್ನು ಅಲ್ಲಿ ಯಾರೂ ತೆಗೆದುಕೊಳ್ಳಲಿಲ್ಲ, ಕಡೆಗೆ ವಿಜಯಾ ಬ್ಯಾಂಕ್‌ಗೆ ಹೋಗಿ ನನ್ನ ಕ್ರೆಡಿಟ್ ಕಾರ್ಡ್ ಮೇಲೆ 100-00 ರೂಪಾಯಿಗಳ ನೋಟ್‌ಗಳನ್ನು ಪಡೆದುಕೊಂಡೆ. 500-00 ರೂಪಾಯಿಗಳ ನೋಟ್ ನಮ್ಮ ದೇಶದಲ್ಲಿ ಖೋಟಾ ಪ್ರಿಂಟ್ ಆಗಿದೆ ಎನ್ನುವ ಭಾವನೆಯೇ ಇದಕ್ಕೆ ಕಾರಣವಾದಾಗ ನನಗ [illegible] ನೋವಾಯಿತು. ಹೀಗಿರುವಾಗ ಇಂಥ ಕ್ರಿಮಿನಲ್ ಕೇಸ್ ಬಗ್ಗೆ ನಾವು ಅಸಡ್ಡೆ ಮಾಡಿದರೆ ದೇಶದ ಮತ್ತು ರಾಜ್ಯದ ಆರ್ಥಿಕ ಗತಿ ಏನಾಗಬಹುದು ಎಂಬ ಬಗ್ಗೆ ಚಿಂತನೆ ಮಾಡಬೇಕು. ಈ ಅಬ್ದುಲ್ ಕರೀಂಲಾಲ್ ತೆಲಗಿಯವರು ಬಾಂಬ್ ಸರಣಿ ಹಿನ್ನೆಲೆಯುಳ್ಳ ಡಾನ್‌ಗಳ ಜೊತೆ ಸಂಪರ್ಕವಿಟ್ಟುಕೊಂಡಿದ್ದಾರೆ ಎನ್ನುವ ವದಂತಿಗಳೂ ಕೂಡ ಇದೆ. ದಾವೂದ್ ಇಬ್ರಾಹಿಂನ ಸಂಪರ್ಕವಿಟ್ಟುಕೊಂಡಿದ್ದಾರೆ ಎನ್ನುವ ವದಂತಿಗಳೂ ಕೂಡ ಇದೆ. ಆದುದರಿಂದ ಈ ವಿಷಯಗಳ ಮೇಲೆ ಸರ್ಕಾರ ತನಿಖೆ ಮಾಡಲು ಹೊರಟರೆ ನಿಜವಾದ ವಿಷಯಗಳು ಜನತೆಗೆ ಗೊತ್ತಾಗುತ್ತದೆ. ಅದನ್ನು ಬಿಟ್ಟು ರೂಲಿಂಗ್ ಪಾರ್ಟಿಯಲ್ಲಿ ನಾವು ಇರುವುದರಿಂದ ನಾವು ಡಿಫೆಂಡ್ ಮಾಡಿಕೊಳ್ಳಲೇಬೇಕು ಎನ್ನುವ ಭಾವನೆಗೆ ಹೋಗಬಾರದು ಎನ್ನುವುದೇ ನನ್ನ ಅನಿಸಿಕೆ. ಇದೇ ಅಬ್ದುಲ್ ಕರೀಂಲಾಲ್ ತೆಲಗಿಯವರು ಕಮರ್ಷಿಯಲ್ ಸ್ಟ್ರೀಟ್‌ನಲ್ಲಿರುವ ಪೋಲೀಸ್ ಸ್ಟೇಷನ್‌ಗೆ 5 ಲಕ್ಷ ರೂಪಾಯಿಗಳನ್ನು ನವೀಕರಣಕ್ಕೆ ಕೊಡುತ್ತಾರೆ. ಇದು ಕೇವಲ ನನ್ನ ಮಾಹಿತಿಯಲ್ಲ, ಪೋಲೀಸರ ಮಾಹಿತಿ. ಒಬ್ಬ ವ್ಯಕ್ತಿ 5 ಲಕ್ಷ ರೂಪಾಯಿಗಳನ್ನು ಒಂದು ಪೋಲೀಸ್ ಸ್ಟೇಷನ್ ನವೀಕರಣಕ್ಕೆ ಕೊಡಬೇಕಾದರೆ ಅಲ್ಲಿರುವ ಸಬ್-ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಕೂಡ ಇನವಾಲ್ವ್ ಆಗಿರುತ್ತಾರೆ. ನಾವು ಏಕೆ ಇದನ್ನು ಸಿ.ಬಿ.ಐ.ಗೆ ವಹಿಸಿ ಕೊಡಬೇಕು ಎಂದು ಒತ್ತಾಯ ಮಾಡುತ್ತೇವೆಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಲ್ಲಿರುವ ಅಧಿಕಾರಿಗಳು ಇದರಲ್ಲಿ ಷಾಮೀಲಾಗಿದ್ದಾರೆ. ನಮ್ಮ ಪೋಲೀಸ್ ಅಧಿಕಾರಿಗಳ ಮೇಲೆ ಅಪನಂಬಿಕೆ ನಮಗಿಲ್ಲ. ರಾಜಕೀಯ ವ್ಯಕ್ತಿಗಳೂ ಕೂಡ ಇದರಲ್ಲಿ ಇನ್‌ವಾಲ್ವ್ ಆಗಿರಬಹುದು. ಆದುದರಿಂದ ಸಿ.ಬಿ.ಐ. ತನಿಖೆ ಮಾಡಿದರೆ ಅದು ಸಮರ್ಪಕವಾದ ತನಿಖೆ ಆಗುತ್ತದೆ ಎನ್ನುವುದೇ ನಮ್ಮ ಆಶಯ. ನಿನ್ನೆ ಮಾನ್ಯ ರೋಷನ್‌ಬೇಗ್‌ರವರು ಸದನದಲ್ಲಿ ಹೇಳಿದ್ದನ್ನು ನಾನು ಒಪ್ಪುತ್ತೇನೆ. ಹಿಂದೆ ಮಾನ್ಯ ಕೆ.ಹೆಚ್.ರಂಗನಾಥ್‌ರವರು ಒಮ್ಮೆ ಮಾತನಾಡುವಾಗ ನನ್ನ ಮಗ ತಪ್ಪು ಮಾಡಿದ್ದರೆ ನಾನು ಹೇಗೆ ಜವಾಬ್ದಾರನಾಗುತ್ತೇನೆ ಎಂದು ಹೇಳಿದ್ದರು, ನಿಜ, ಅದನ್ನು ನಾನೂ ಒಪ್ಪುತ್ತೇನೆ. ಆದುದರಿಂದ ಮಾನ್ಯ ರೋಷನ್‌ಬೇಗ್‌ರವರ ಕುಟುಂಬದಲ್ಲಿ ಕೇವಲ ತಮ್ಮನಾಗಿದ್ದ ಮಾತ್ರಕ್ಕೆ ಅವರು ಆಗಿದ್ದಾರೆ ಎಂದು ಅಲ್ಲ. ಅವರೂ ಕೂಡ ಈ ಕೇಸ್‌ನ್ನು ಸಿ.ಬಿ.ಐ.ಗೆ ವಹಿಸಿ ಎಂದು ಹೇಳಿದರೆ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಸಿ.ಬಿ.ಐ.ಗೆ ವಹಿಸಲು ಅನುಕೂಲವಾಗುತ್ತದೆ. ತನಿಖೆಯಿಂದ ಏನು ರಿಸಲ್ಟ್ ಬರುತ್ತದೋ ಬರಲಿ. ಇದರಿಂದ

ನಿಜವಾದ ಪರಿಸ್ಥಿತಿ ಮಾತ್ರ ಜನರಿಗೆ ತಿಳಿಯಲು ಅನುಕೂಲವಾಗುತ್ತದೆ. ಆದುದರಿಂದ ರೋಶನ್‌ಬೇಗ್‌ರವರೇ ಸಿ.ಬಿ.ಐ.ಗೆ ವಹಿಸಲು ಒಪ್ಪಿಕೊಂಡರೆ ಬಹಳ ಅನುಕೂಲವಾಗುತ್ತದೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ. ರಾಜಕೀಯ ಇಚ್ಛಾಶಕ್ತಿ ಇದ್ದರೆ ಯಾವುದನ್ನು ಬೇಕಾದರೂ ಸಿ.ಬಿ.ಐ.ಗೆ ಒಪ್ಪಿಸಿ ನಿಜವನ್ನು ಹೊರಗೆಳೆಯಬಹುದು. ಇದರ ಜೊತೆಗೆ ಅಬ್ದುಲ್ ಅಜೀಲಾಲ್‌ಸಾಬ್ ತೆಲಗಿ - ಖಾನಾಪುರ, ಇವರ ತಮ್ಮ ಈ ರೂಲಿಂಗ್ ಪಾರ್ಟಿಯಲ್ಲಿ ಇದ್ದಾರೆ ಎನ್ನುವಂಥ ಒಂದು ಭಾವನೆಯಿಂದ ಒಂದು ಕಪ್ಪು ಛಾಯೆ ಸರ್ಕಾರದ ಮೇಲೆ ಬಂದಿದೆ. ಆ ಛಾಯೆಯನ್ನು ಅಳಿಸುವುದಕ್ಕಾದರೂ ಈ ಕೇಸ್‌ನ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಬೇಕು ಎನ್ನುವಂಥ ಮಾತನ್ನು ಈ ಸಭೆಯಲ್ಲಿ ನಾನು ಹೇಳಬಯಸುತ್ತೇನೆ. ಕೇವಲ 24 ಗಂಟೆಗಳಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಆದೇಶ ಹೊರಡಿಸಿ ನಕಲಿ ಮತ್ತು ಅಸಲಿ ಸ್ಟ್ಯಾಂಪ್ ಪೇಪರ್‌ಗಳು ಎಷ್ಟು ಬಳಕೆಯಾಗಿದೆ ಎನ್ನುವ ವಿಷಯ ತಿಳಿಯುವ ಪರಿಸ್ಥಿತಿ ಇದ್ದರೂ ಕೂಡ ಅದಕ್ಕೆ ಅವರಲ್ಲಿ ಇಚ್ಛಾಶಕ್ತಿ ಇಲ್ಲದೇ ಇರುವುದರಿಂದ ನಿಜವಾಗಲೂ ರಾಜ್ಯಕ್ಕೆ ಬಗೆದ ದ್ರೋಹ ಎಂದು ಹೇಳುತ್ತಾ ಈ ಕೇಸನ್ನು ಸಿ.ಬಿ.ಐ.ಗೆ ವಹಿಸಬೇಕು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವೈ.ಕೆ.ರಾಮಯ್ಯ(ಹುಲಿಯೂರು ದುರ್ಗ):- ಮಾನ್ಯ ಉಪಾಧ್ಯಕ್ಷರೆ, ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರವ್ಯಾಪ್ತಿಯಲ್ಲಿ ನಕಲಿ ಛಾಪಾ ಕಾಗದಗಳ ಮಾರಾಟದ ಮುಖಾಂತರ ಚಲಾವಣೆ ಮೂಲಕ ಆಗಿರುವಂಥ ಪರಿಸ್ಥಿತಿ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈ ನಕಲಿ ಛಾಪಾ ಕಾಗದಗಳ ಚಲಾವಣೆ ಅಥವಾ ಮಾರಾಟದಿಂದ ಎರಡು ದೊಡ್ಡ ಅಘಾತಗಳು ಸೃಷ್ಟಿಯಾಗಿವೆ. ಅವು ಯಾವುವೆಂದರೆ, ಮೊದಲನೆಯದಾಗಿ ಈಗಾಗಲೇ ಸೊರಗಿ ಹೋಗುತ್ತಿರುವಂಥ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಆದಾಯ ಕಡಿಮೆಯಾಗುತ್ತಿದೆ. ಇದು ಒಂದು ಪ್ರಮುಖವಾದ ವಿಚಾರ. ಇನ್ನು ಇದಕ್ಕಿಂತಲೂ ಪ್ರಮುಖವಾದ ಆಘಾತ ಯಾವುದೆಂದರೆ,.. ನಾನೂ ಕೂಡ ಸುಮಾರು 18 ರಿಂದ 20 ವರ್ಷಗಳ ಕಾಲ ಛಾಪಾ ಕಾಗದದ ವ್ಯವಹಾರ ನಡೆಸಿ ಬದುಕಿದವನು, ಇದರಲ್ಲಿ ಹಿಂದೆ ಹೇಗೆ ತಿದ್ದುತ್ತಾರೆ, ಮುಂದೆ ಹೇಗೆ ತಿದ್ದುತ್ತಾರೆ, ಡೇಟ್ ಹಿಂದಿನದ್ದನ್ನು ಹೇಗೆ ಹಾಕುತ್ತಾರೆ ಎಂಬುದನ್ನೆಲ್ಲಾ ನಾನು ನೋಡಿದ್ದೇನೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ; ನಕಲಿ ಛಾಪಾ ಕಾಗದದ ಮೂಲಕ ವ್ಯವಹಾರವನ್ನು ಮಾಡಿದ್ದರೆ ಅದು ಅಸಿಂಧುವಾಗುತ್ತದೆ. ನನ್ನ ಪ್ರಕಾರ ಅವೆಲ್ಲವೂ ಅಸಿಂಧುವಾಗುತ್ತದೆ. All the transactions which were held on using these forged or fake stamp papers will be invalidated. ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಆದಾಯ ಕಡಿಮೆ ಆಗುವುದು ಒಂದು ಕಡೆಯಾದರೆ, ಅದು ಸರ್ಕಾರಕ್ಕೆ ಸಂಬಂಧಪಟ್ಟದ್ದು. ಆದರೆ ನಕಲಿ

ಛಾಪಾ ಕಾಗದದ ಮೇಲೆ ಕಂಪನಿ ರಿಜಿಸ್ಟ್ರೇಷನ್ ಆಗಿದೆ, ಪಾರ್ಟ್‌ನರ್‌ಶಿಪ್ ರಿಜಿಸ್ಟ್ರೇಷನ್ ಆಗಿದೆ, ಟ್ರಾನ್ಸ್‌ಫರ್ಸ್ ಆಫ್ ಪ್ರಾಪರ್ಟಿ ಆಗಿದೆ, ದಾನ ಆಗಿದೆ, ದತ್ತು ಆಗಿದೆ, ಹೀಗೆ ಸಾರ್ವಜನಿಕರು ಈ ನಕಲಿ ಛಾಪಾ ಕಾಗದಗಳನ್ನು ತೆಗೆದುಕೊಂಡು ಮಾಡಿರುವ ವ್ಯವಹಾರಗಳೆಲ್ಲವೂ ಅಸಿಂಧುವಾದರೆ ಎಂಥ ಒಂದು ಕೆಟ್ಟ ಪರಿಣಾಮ ಇಡೀ ರಾಷ್ಟ್ರದ ಮೇಲೆ ಆಗುತ್ತದೆ ಎಂಬ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸ್ನೇಹಿತರ ಮಾತಿನಲ್ಲಿಯೇ ಹೇಳುವುದಾದರೆ 1995ರಲ್ಲಿ ಕೂರ್ಗ್‌ನಲ್ಲಿಯೇ ಮೊದಲು ಈ ಪರಿಸ್ಥಿತಿ ಸೃಷ್ಟಿಯಾಗಿತ್ತು. ಮಾನ್ಯ ಮಾಜಿ ಕಂದಾಯ ಸಚಿವರ ಪ್ರಕಾರ 1998ರಲ್ಲಿ ಈ ಪರಿಸ್ಥಿತಿ ಸೃಷ್ಟಿಯಾಗಿ ಸರ್ಕಾರದ ಗಮನಕ್ಕೆ ಬಂದು ಸಿ.ಓ.ಡಿ. ಎನ್‌ಕ್ವೈರಿಗೆ ಕೂಡ ನೇಮಿಸಿದ್ದಾರೆ. ಆದರೆ ಆ ಎನ್‌ಕ್ವೈರಿ ಏನಾಗಿದೆ ಎಂಬ ಬಗ್ಗೆ ಇವೊತ್ತಿನವರೆಗೆ ಯಾರಿಗೂ ಗೊತ್ತಿಲ್ಲ. ಎನ್‌ಕ್ವೈರಿಯನ್ನು ಆರ್ಡರ್ ಮಾಡಿದಂಥ ಸರ್ಕಾರ ಅದನ್ನು ಪರ್ಸ್ಯೂ ಮಾಡಿತೇ ಮತ್ತು ಅದರಿಂದ ಬಂದಂಥ ಪರಿಣಾಮ ಏನು ಎಂಬುದು ಇವೊತ್ತಿನವರೆಗೆ ನಮಗೆ ಗೊತ್ತಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ ಈ ನಕಲಿ ಛಾಪಾ ಕಾಗದಗಳ ಚಲಾವಣೆ 1995ರಲ್ಲಿ ಮಾತ್ರವಲ್ಲ, ಅದಕ್ಕೂ ಹಿಂದೆಯೇ ಇತ್ತು. 1995 ರಿಂದ ನಿಮ್ಮ ಗಮನಕ್ಕೆ ಬಂತು, 1998ರಲ್ಲಿ ನಿಮ್ಮ ಗಮನಕ್ಕೆ ಬಂತು, ಈಗ 2001ರಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಅಂದರೆ ಈ ನಕಲಿ ಛಾಪಾ ಕಾಗದಗಳ ವ್ಯವಹಾರ ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ.

1.10 ಪಿ.ಎಂ.

ನನ್ನ ಪ್ರಕಾರ ನಾನೇನೂ ಈ ಸರ್ಕಾರದ ಒಬ್ಬ ಸದಸ್ಯನಾಗಿ ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ, ಸಹಜವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆವತ್ತಿನಿಂದ ನಡೆದುಕೊಂಡು ಬಂದಿರುವುದನ್ನು ಇವತ್ತು ಪತ್ತೆ ಹಚ್ಚಿ ಕ್ರಮ ತೆಗೆದುಕೊಂಡಿರುವ ಕಾರಣಕ್ಕಾಗಿ we have to congratulate the government. What else this government can do? ಅಪರಾಧಿಗಳನ್ನು ಬಂಧಿಸಿಯಾಯಿತು. ಕೇಸನ್ನು ರಿಜಿಸ್ಟರ್ ಮಾಡಿಸಿಯಾಯಿತು. ಛಾಪಾ ಕಾಗದಗಳನ್ನು ಸೀಜ್ ಮಾಡಿಯಾಯಿತು. ನೀವು ಅಬ್ದುಲ್ ಕರೀಂಲಾಲ್ ಅರೆಸ್ಟ್ ಮಾಡಿದ ಮೇಲೆ ಏನು ಮಾಡಿದಿರಿ ಎಂದೆಲ್ಲಾ ಕೇಳುತ್ತಿದ್ದೀರಿ. Cr.PC ಕೆಳಗಡೆ that is the prerogative of the investigation officer. No one can interfere, Not even the President of India. ಈ ದೇಶದಲ್ಲಿ ಏನಾದರೂ ಪೋಲೀಸರು ಅಷ್ಟೊಂದು ಪ್ರಬಲರಾಗಿರಬೇಕಾದರೆ ಅದು ಒಂದೇ ಒಂದು ಪ್ರಿರಾಗೇಟೀವ್ ಅವರಿಗೆ ಇರುವುದು. ಈ ದೇಶದ ರಾಷ್ಟ್ರಪತಿಯಿಂದ ಹಿಡಿದು ಯಾರೂ ಕೂಡ ಇನ್‌ವೆಸ್ಟಿಗೇಷನ್‌ನಲ್ಲಿ ಇಂಟರ್‌ಫಿಯರ್ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಕರ್ನಾಟಕ ರಾಜ್ಯದ ಗೃಹಮಂತ್ರಿಗಳು ಇಂಟರ್‌ಫಿಯರ್

ಆಗುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಗೃಹಮಂತ್ರಿಗಳು ಇಂಟರ್‌ಫಿಯರ್ ಆಗುವುದಿಲ್ಲ. ಇದು ಒಳ್ಳೆಯದು ಕೂಡ. ಏಕೆಂದರೆ ಇವತ್ತಿನ ಇನ್‌ವೆಸ್ಟಿಗೇಷನ್ ಈ ರೀತಿ ಇದೆ, ಇವತ್ತು ಈ ರೀತಿ ಇದೆ ಎಂದು ದಿನ ಹೇಳಿಕೊಂಡು ಹೋದರೆ ಇನ್‌ವೆಸ್ಟಿಗೇಷನ್ ಅನ್ನು ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ಆದುದರಿಂದ ಆಗಿರುವಂತಹ ಅವ್ಯವಹಾರವನ್ನು ಹೊರಗೆ ತೆಗೆದು ಸಿಆರ್‌ಪಿಸಿ ಪ್ರಕಾರ ಎಲ್ಲಾ ಕ್ರಮವನ್ನು ತೆಗೆದುಕೊಂಡಿರುವಂತಹ ಸರ್ಕಾರವನ್ನು ಯಾವ ಕಾರಣಕ್ಕಾಗಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದ್ದೀರಿ ಎಂದು ನನಗಂತೂ ಅರ್ಥವಾಗುತ್ತಿಲ್ಲ. I cannot understand ಏನೋ 1999 ರಿಂದೀಚೆಗೆ ಹೊಸ ಸರ್ಕಾರ ಬಂದ ಮೇಲೆ, ಅವ್ಯವಹಾರ ಶುರುವಾಗಿದ್ದರೆ, ಇಂತಹ ಅನ್ಯಾಯವಾಗಿದ್ದರೆ, ಇಂತಹ ಅವಿವೇಕ ನಡೆದಿದ್ದಾರೆ, yes, go ahead, ಆದರೆ ಆವತ್ತಿನಿಂದ ನಡೆದುಕೊಂಡು ಬಂದಿದೆ. ಅದನ್ನು ನೀವು ಬಿಟ್ಟುಕೊಂಡು ಬಂದಿದ್ದೀರಿ. ಈ ಸರ್ಕಾರ ಬಂದ ಮೇಲೆ ಅವರನ್ನು ಬಂಧಿಸಿ, ಕೇಸ್ ಹಾಕಿ, ಪ್ರಾಪರ್ಟಿ ಸೀಜ್ ಮಾಡಿದ್ದಾರೆ. ಅದಕ್ಕಾಗಿ ನಾನು ಹೇಳಿದ್ದು ಯಾವ ಕಾರಣಕ್ಕಾಗಿಯೂ ಈ ಸರ್ಕಾರವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸ್ನೇಹಿತರೆಲ್ಲರದ್ದು, ಇದನ್ನು ಸಿಬಿಐ ಎನ್‌ಕ್ವೈರಿಗೆ ಕೊಡಬೇಕೆಂದು ಏಕಕಂಠದ ಒಂದು ವಾದ. ನಾನು ಇವತ್ತು ಅತ್ಯಂತ ಕಳಕಳಿಯಿಂದ ನನ್ನ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುವುದೇನೆಂದರೆ, ಇದು ತಾಂತ್ರಿಕ ಕಾರಣಕ್ಕಾಗಿ ಇದು ಸಾಧ್ಯತೆ ಇಲ್ಲ. ಏಕೆಂದರೆ ಪ್ರಿಂಟ್ ಮಾಡಿಸುವುದು ನಾಸಿಕ್‌ನಲ್ಲಿ. ಅದನ್ನು ಪ್ರಿಂಟ್ ಮಾಡಿಸುವವರು ಕೇಂದ್ರ ಸರ್ಕಾರದವರು, ಮತ್ತು ನಡೆದಿರುವಂತಹ ಅಪರಾಧ ಈ ವ್ಯವಹಾರ ಕೇವಲ ಕರ್ನಾಟಕಕ್ಕೆ ಸೀಮಿತವಾಗಿಲ್ಲ. It goes byond the territory of Karnataka State. ಕೇರಳ ಇದೆ, ಮಹಾರಾಷ್ಟ್ರ ಇದೆ, ಆಂಧ್ರ ಪ್ರದೇಶ ಇದೆ, ಹೀಗೆ ಅನೇಕ ರಾಜ್ಯಗಳ ವ್ಯಾಪ್ತಿಗೆ ಇದು ಬರುವುದರಿಂದ ಕರ್ನಾಟಕ ರಾಜ್ಯ ಈ ಒಂದು ಸಿಬಿಐ ಎನ್‌ಕ್ವೈರಿಗೆ ಒಪ್ಪಿಗೆಯನ್ನು ಕೊಡುವ ಮೂಲಕ ಯಾವ ಸಮಸ್ಯೆಯೂ ಕೂಡ ಬಗೆಹರಿಯುವುದಿಲ್ಲ. ಆಂಧ್ರ ಪ್ರದೇಶದ ಪರವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಡುವುದಕ್ಕಾಗುತ್ತದೆಯೇ? ಕೇರಳ ಸರ್ಕಾರದ ಪರವಾಗಿ ನಮ್ಮ ಮುಖ್ಯಮಂತ್ರಿಗಳು ಒಪ್ಪಿಗೆ ಕೊಡುವುದಕ್ಕಾಗುತ್ತದೆಯೇ? ಪ್ರಿಂಟ್ ಮಾಡಿಸುವಂತಹ ಜವಾಬ್ದಾರಿ, ಕರ್ತವ್ಯ ಕೇಂದ್ರ ಸರ್ಕಾರದ್ದು. ಇದು ಒಂದನೆಯದು. ಇನ್ನು ಎರಡನೆಯದಾಗಿ ಛಾಪಾ ಕಾಗದಗಳನ್ನು ಏಕೆ ಅಬಾಲಿಷ್ ಮಾಡಬಾರದು? Stop the selling of these stamp papers. ಸ್ವಾಮಿ, ನನಗೆ ತಿಳಿದಂತಹ with my minimum common sense, ಈ ಸ್ಟಾಂಪ್ ಪೇಪರ್‌ಗಳನ್ನು ಯಾವ ರಾಜ್ಯದಿಂದ ಬೇಕಾದರೂ ಕೊಂಡುಕೊಳ್ಳಬಹುದು, ಅದನ್ನು ನಮ್ಮ ರಾಜ್ಯದಲ್ಲಿ ಕಾನೂನು ಪ್ರಕಾರ ಉಪಯೋಗಿಸಬಹುದು. ನೀವೇ ಯಾರೋ ಬೆಳಿಗ್ಗೆ ಮಾತನಾಡುತ್ತಾ ಹೇಳಿದಿರಿ,

ಕೇರಳದಿಂದ ಕೊಂಡುಕೊಂಡು ಬಂದಂತಹ ಸ್ಟಾಂಪ್ ಪೇಪರ್ ಅನ್ನು ಕೂರ್ಗ್‌ನಲ್ಲಿ ಉಪಯೋಗಿಸಿರುವ ಪ್ರಕರಣ ಗಮನಕ್ಕೆ ಬಂದಿದೆ ಎಂದು, ಅಂದರೆ ನಕಲಿ ಛಾಪಾ ಕಾಗದಗಳನ್ನು ಹೊರ ರಾಜ್ಯದಿಂದ ತಂದು ನಮ್ಮ ರಾಜ್ಯದಲ್ಲಿ ಉಪಯೋಗಿಸುವುದಕ್ಕೆ ಅವಕಾಶ ಇರುವುದರಿಂದ ಇದನ್ನು ಏನಾದರೂ ಕರ್ನಾಟಕದಲ್ಲಿ ಸೇಲ್ ಅಬಾಲಿಷ್ ಮಾಡಿದರೆ ಅಥವಾ ತಪ್ಪಿಸಿದರೆ. ಇದರಿಂದ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಬರುವಂತಹ ಹಣವೆಲ್ಲಾ ಕಡಿಮೆಯಾಗುತ್ತದೆ. ಹೊರರಾಜ್ಯದಿಂದ ಕೊಂಡುಕೊಳ್ಳುವಂತಹ ವ್ಯವಹಾರವನ್ನು ಮಾಡುತ್ತೇವೆ. I humbly pray the Revenue Minister not to go in that direction. ಈ ದಿಸೆಯಲ್ಲಿ ನಿನ್ನೆ ನಾನು ನಮ್ಮ ಕಾನೂನು ಸಚಿವರ ಜೊತೆಯಲ್ಲಿ ಅಕೆಡೆಮಿಕ್ ಇಂಟರೆಸ್ಟ್‌ನಿಂದ ಚರ್ಚೆ ಮಾಡುತ್ತಿದ್ದೆ. ಅಧಿಕಾರಿಗಳ ಜೊತೆ ಹೇಳುವಾಗ ಇದನ್ನು ಎಗ್ಸಾಮಿನ್ ಮಾಡಿ ಎಂದು ಅವರು ಹೇಳುತ್ತಾರೆ. ಹೇಗೆ ಎಗ್ಸಾಮಿನ್ ಮಾಡುವುದಕ್ಕಾಗುತ್ತದೆ? 50 ಮೈಲಿ ಹೋದರೆ ಹೊಸೂರು ಸಿಗುತ್ತದೆ, ತುಮಕೂರು ಜಿಲ್ಲೆಯಿಂದ 25 ಮೈಲಿ ಹೋದರೆ ಮಡಕ್‌ಶಿರಾ ಸಿಗುತ್ತದೆ. ಅಲ್ಲಿಂದ ಸ್ಟಾಂಪ್ ಪೇಪರ್ ತರುತ್ತಾರೆ, ಮಾರುತ್ತಾರೆ. ಆದುದರಿಂದ ನಕಲಿ ಛಾಪಾ ಕಾಗದಗಳ ಒಂದು ಅಕ್ರಮ ನಡವಳಿಕೆಗಳನ್ನು ತಪ್ಪಿಸುವುದಕ್ಕೆ, ಛಾಪಾ ಕಾಗದಗಳ ಚಲಾವಣೆಯನ್ನು ರದ್ದು ಮಾಡುವುದರಿಂದ ಅದು ಪರಿಹಾರವಾಗುವುದಿಲ್ಲವೆಂಬುದು ನನ್ನ ಭಾವನೆ. ಈ ಒಂದು ತಾಂತ್ರಿಕ ಕಾರಣವನ್ನು ಮುಂದೊಡ್ಡಿ ಇಂತಹ ವಿಷಯಗಳನ್ನು ಚರ್ಚೆಗೆ ಬರದ ಹಾಗೆ ತಡೆಯುವಂಥಾದ್ದು ಯಾವ ಸರ್ಕಾರಕ್ಕೂ ಶೋಭೆ ತರುವಂಥಾದ್ದಲ್ಲ ಎಂದು ಮಾಜಿ ಕಂದಾಯ ಸಚಿವರು ಹೇಳಿದ್ದಾರೆ. ನಾನು ಇದನ್ನು ನೂರಕ್ಕೆ ನೂರರಷ್ಟು ಒಪ್ಪಿಕೊಳ್ಳುತ್ತೇನೆ. ಯಾವ ಪಕ್ಷದ ಸದಸ್ಯ, ನಾನು ಯಾರು ಎನ್ನುವುದಕ್ಕಿಂತ ಹೆಚ್ಚಾಗಿ ಈ ಸದನದ ಒಬ್ಬ ಸದಸ್ಯನಾಗಿ ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಿದ್ದೇನೆ. ಇಲ್ಲಿರುವಂತಹ ಪ್ರಶ್ನೆ ಒಬ್ಬ ವ್ಯಕ್ತಿಯದಲ್ಲ, ಒಂದು ಗುಂಪಿನದಲ್ಲ, ಇಲ್ಲಿರುವಂತಹ ಪ್ರಶ್ನೆ ಒಂದು ಪಕ್ಷದ್ದಲ್ಲ. ಇಲ್ಲಿರುವಂತಹ ಪಕ್ಷ, ಈ ದೇಶದಲ್ಲಿ ನಡೆಯುತ್ತಿರುವಂತಹ ಅನ್ಯಾಯ, ಅವ್ಯವಹಾರ ಹಾಗೂ ಅಕ್ರಮಗಳನ್ನು ತಡೆಯುವುದಕ್ಕೆ ನಾವು ಎಲ್ಲರೂ ಕೈಜೋಡಿಸಬೇಕು. ಇದನ್ನು ಒಂದು ಪಕ್ಷದ ಚೌಕಟ್ಟಿಗಾಗಿ ಅಥವಾ ಒಬ್ಬ ವ್ಯಕ್ತಿಯನ್ನು ತೇಜೋವಧೆ ಮಾಡುವುದಕ್ಕಾಗಿ ಸೀಮಿತವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಯಾವುದು ಖೋಟಾ ಇಲ್ಲ ಹೇಳಿ, ಒಂದು ಕಾಫಿಪುಡಿ ತೆಗೆದುಕೊಳ್ಳುವುದಕ್ಕೆ ಹೋಗಿ ನಕಲಿ, ಛಾಪಾ ಕಾಗದ ತೆಗೆದುಕೊಳ್ಳುವುದಕ್ಕೆ ಹೋಗಿ ನಕಲಿ, 500 ರೂಪಾಯಿ ನೋಟು ಅಂಗಡಿಗೆ ತೆಗೆದುಕೊಂಡು ಹೋಗಿ ಅದೂ ನಕಲಿ. ಅಷ್ಟೇ ಅಲ್ಲ, ಯಾರಾದರೂ ಸಾಯಬೇಕು ಎಂದು ವಿಷ ತೆಗೆದುಕೊಂಡು ಬಂದರೆ ಅದೂ ಕೂಡ ಇವತ್ತು ನಕಲಿ. ನಮ್ಮ ಮಧ್ಯದಲ್ಲಿ ನಡೆಯುತ್ತಿರುವಂತಹ ಯಾವ ವ್ಯವಹಾರ ಕೂಡ ಇವತ್ತು ಅಸಲಿಯಾಗಿ ಉಳಿದುಕೊಂಡಿಲ್ಲ. ಎಲ್ಲವೂ ನಕಲಿ, ಎಲ್ಲವೂ ಖೋಟವಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಕೇವಲ ವಸ್ತುಗಳಲ್ಲ.

ಶ್ರೀ ಬಿ.ಸೋಮಶೇಖರ್:- ಮನುಷ್ಯರೂ ನಕಲಿಯಾಗಿದ್ದಾರೆ!

ಶ್ರೀ ವೈ.ಕೆ.ರಾಮಯ್ಯ:- ಹೌದು, ನಾನೂ ಅಲ್ಲಿಗೆ ಬರುತ್ತಿದ್ದೆ, ನನಗೆ ಬಹಳ ಸಂತೋಷವಾಯಿತು. ಅದನ್ನು ಹೇಳಬೇಕೋ, ಬೇಡವೋ, ಎಲ್ಲಿ ತಕರಾರು ಮಾಡುತ್ತೀರೋ ಎಂದು ತಡೆಯುತ್ತಿದ್ದೆ. ಮನುಷ್ಯರು ನಕಲಿ ಆಗಿಹೊಗಿದ್ದೇವೆ. ವಸ್ತುಗಳು, ಪೇಪರ್, ಹೊರ ದೇಶಕ್ಕೆ ಕಲ್ಲು ಏನು ಹೊಡೆಯುತ್ತಾರೆ ಅದು ನಕಲಿ. ಎಲ್ಲಾ ನಕಲಿ ಆದಾಗ ಎಲ್ಲಾ ನಕಲಿಗಳಿಗೆ ಮೂಲ ಕಾರಣ ಮನುಷ್ಯರೇ ನಕಲಿ ಆಗಿಹೋಗಿರುವುದು. ಆದುದರಿಂದ ಈ ನಕಲಿ ಸಾಮ್ರಾಜ್ಯವನ್ನು ಕೊನೆಗಾಣಿಸಬೇಕಾದರೆ ಈ ನಕಲಿ ವ್ಯವಸ್ಥೆಯನ್ನು ತಡೆಗಟ್ಟಬೇಕಾದರೆ, ಸಂಪೂರ್ಣವಾಗಿ, ಪಕ್ಷಾತೀತವಾಗಿ ನಾವೆಲ್ಲರೂ ಕೂಡ ಕೈಜೋಡಿಸಬೇಕಾದ್ದು ಅತ್ಯಂತ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ. ನಾನು ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಅನುಮಾನಾಸ್ಪದವಾಗಿ ನಡೆದುಕೊಳ್ಳುತ್ತಿದೆ, ಅದು ಯಾವ ವಿಷಯದಲ್ಲಿ? ಏಕೆಂದರೆ ಪತ್ರಿಕೆಯವರು ಅಥವಾ ಸಾರ್ವಜನಿಕರು, ಈ ಸರ್ಕಾರ ಏನೋ ಮುಚ್ಚಿ ಹಾಕುತ್ತಿದ್ದೆ, ಈ ಸರ್ಕಾರ ಯಾರನ್ನೋ ಶೀಲ್ಡ್ ಮಾಡುತ್ತಿದೆ ಎಂದು ತಿಳಿದುಕೊಂಡ ಹಾಗೆ ಇದೆ. ಆದರೆ ಇದು ಸರಿಯಲ್ಲ. ನಾನು ಆಗಲೇ ಹೇಳಿದ್ದೇನೆ, ಸ್ವಾಮಿ ಯಾವುದೇ ಒಬ್ಬ ವ್ಯಕ್ತಿ ಯಾವುದೇ ಸರ್ಕಾರಕ್ಕೆ ಅನಿವಾರ್ಯ ಅಲ್ಲ. ಯಾವುದೇ ಪಕ್ಷಕ್ಕೂ ಅನಿವಾರ್ಯವಲ್ಲ. ಅದೆಲ್ಲಕ್ಕಿಂತ ಹೆಚ್ಚಾಗಿ ಈ ದೇಶದ ಸರ್ವೇಸಾಮಾನ್ಯ ಬದುಕನ್ನು ನಾಶ ಮಾಡುವಂತಹ ಸಂದರ್ಭ ಬಂದಾಗ ಒಂದು ಪಕ್ಷ ಅಲ್ಲ, ಒಬ್ಬ ವ್ಯಕ್ತಿ ಅಲ್ಲ, ಒಂದು ಸಮುದಾಯವನ್ನೂ ಕೂಡ ಸಮಾಧಿ ಮಾಡಬೇಕಾಗುತ್ತದೆ, ಬೇಕಾದರೆ ತ್ಯಾಗ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಯೋಚನೆ ಮಾಡಿದಾಗ ನಾನು ನೇರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಯಾವ ವಿಷಯದಲ್ಲಿ ಸರ್ಕಾರ ಈ ಅಕ್ರಮವನ್ನು, ಅನ್ಯಾಯವನ್ನು ತಡೆಗಟ್ಟುವುದಕ್ಕೆ ಅಡ್ಡಿ ಬರುತ್ತಿದೆ, ಯಾವ ವಿಷಯವನ್ನು ಮುಚ್ಚಿ ಹಾಕಿದೆ? Yes, I can understand. ಇಲ್ಲಿ ನಮ್ಮ ಸ್ನೇಹಿತರಾದ ಮಾನ್ಯ ಸಿಂಧ್ಯರವರು ಗೃಹಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಪ್ರತಿನಿತ್ಯದ ಇನ್‌ವೆಸ್ಟಿಗೇಷನನ್ನು ಯಾರ ಮುಂದೆನೂ ಹೇಳಿಕೊಳ್ಳುವುದಕ್ಕಾಗುವುದಿಲ್ಲ ಸರ್ಕಾರಕ್ಕೆ. ಅದು ಒಂದನ್ನು ಕಾನೂನಿನ ಹಿತ ದೃಷ್ಟಿಯಿಂದ ಮಾಡದೇ ಇರುವುದನ್ನು ಬಿಟ್ಟರೆ ಸರ್ಕಾರ ಯಾವುದನ್ನು ಮುಚ್ಚಿ ಹಾಕಿದೆ ಹೇಳಿ ಸ್ವಾಮಿ? ನಾವೇ ಸರ್ಕಾರವನ್ನು ಕೇಳುತ್ತೇವೆ, ನಾವು ಆಡಳಿತ ಪಕ್ಷದವರು ಸರ್ಕಾರಕ್ಕೆ ಕೇಳುತ್ತೇವೆ. ಎಷ್ಟೊಂದು ಅನ್ಯಾಯ, ಬೊಕ್ಕಸಕ್ಕೆ ಬರುವ ದುಡ್ಡು ಕಡಿಮೆಯಾಗುತ್ತದೆ. ಇಡೀ ರಾಜ್ಯದ ಜನತೆ ಅಲ್ಲೋಲ ಕಲ್ಲೋಲವಾಗುತ್ತಿದೆ. ಏಕೆ ಇದನ್ನು ಮಾಡುತ್ತಿದ್ದೀರಿ ಎಂದು ನಾವು ಕೇಳುತ್ತೇವೆ. I would like to know which government has conceded that we are going to protect someone? I am not interested about any individual. ಯಾರಾನ್ನಾದರೂ ಒಬ್ಬರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಮಾಡಿರುವಂತಹ ಪ್ರಯತ್ನ ಯಾವುದು? ಈ ದೃಷ್ಟಿಯಿಂದ ಸಿಬಿಐ ಎನ್‌ಕ್ವೈರಿಯನ್ನು ಸರ್ಕಾರ ಒಪ್ಪಿಕೊಂಡರೂ ಕೂಡ ತಾಂತ್ರಿಕ ಕಾರಣದಿಂದ ಮಾಡುವುದಕ್ಕೆ ಸಾಧ್ಯವಿಲ್ಲ. Because this is not confined to Karnataka alone. ಆದರೆ ಒಂದೇ ಒಂದು ಮಾಡುವುದಕ್ಕೆ ಸಾಧ್ಯತೆಯಿದೆ. ಕೇಂದ್ರಸರ್ಕಾರ ಸುವೋಮೋಟೋ ಸಿಬಿಐ ಎನ್‌ಕ್ವೈರಿಯನ್ನು ಇನಿಷಿಯೇಟ್ ಮಾಡಿ ಎಲ್ಲಾ ಸಂಬಂಧಪಟ್ಟ ರಾಜ್ಯಗಳನ್ನು ಕನ್ಸೆಂಟ್ ಕೇಳಬಹುದು. ಅಂತಹ ಸಂದರ್ಭ ಬಂದಾಗ ನಮ್ಮ ರಾಜ್ಯ ಕನ್ಸೆಂಟ್ ಕೊಡಬೇಕೆ, ಬಿಡಬೇಕೇ ಎನ್ನುವುದನ್ನು ಪರಿಶೀಲನೆ ಮಾಡಬಹುದು. ಅದರ ಬಗ್ಗೆ ನನಗೆ ಗೊತ್ತಿಲ್ಲ. The right direction, the correct way of thinking in this matter is the Central Government may initiate. It can take an intiative. ನಮ್ಮ ಭಾರತೀಯ ಜನತಾ ಪಕ್ಷದ ಸ್ನೇಹಿತರು ಅವರ ಸರ್ಕಾರವನ್ನು ಒಪ್ಪಿಸಿ ಈ ರಾಷ್ಟ್ರದಲ್ಲಿ ಆಗುತ್ತಿರುವಂತಹ ಈ ಅವ್ಯವಹಾರವನ್ನು ತಡೆಯುವುದಕ್ಕೆ ಕ್ರಮ ತೆಗೆದುಕೊಂಡು ನಮ್ಮ ಸರ್ಕಾರವನ್ನೂ ಸೇರಿದಂತೆ ರಾಷ್ಟ್ರದ ಎಲ್ಲಾ ಸಂಬಂಧಪಟ್ಟ ರಾಜ್ಯ ಸರ್ಕಾರಗಳ ಒಪ್ಪಿಗೆಯನ್ನು ಕೇಳುವಂತಹ ಸಂದರ್ಭವನ್ನು ಸೃಷ್ಟಿ ಮಾಡುವವರೆಗೆ, ನೀವು ರಾಜ್ಯ ಸರ್ಕಾರದವರು ಒಪ್ಪಿಕೊಳ್ಳಿ. ನೀವು ರಾಜ್ಯ ಸರ್ಕಾರದವರು ಇಆಐ ತನಿಖೆಗೆ ಏಕೆ ಒಪ್ಪುವುದಿಲ್ಲ, ಎಂದು ಕೇಳುವುದರಲ್ಲಿ ಅರ್ಥವಿಲ್ಲ. ನಮಗೆ ಏನಾಗಿದೆ? ಇದರಿಂದ ನಮಗೆ ಏನಾಗಬೇಕಾಗಿದೆ?.......

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು):- ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಹಿರಿಯ ಸಚಿವರು ಬಹಳ ಗಂಭೀರವಾಗಿ ತಮ್ಮ ಎಲ್ಲಾ ಬರ್ಡನ್ ಅನ್ನು ಶಿಫ್ಟ್ ಮಾಡುವಂಥ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದಾರೆ. ಪ್ರಾಯಶಃ ಮೊನ್ನೆ ಕರೀಂಲಾಲ್‌ನ ಬಂಧನವಾದದ್ದು ಕೇಸುಗಳು ದಾಖಲಾದದ್ದು ಎಲ್ಲಾ ಇಲ್ಲಿದೆ. ಈ ರಾಜ್ಯದಲ್ಲಿ ಅವನ ಬಂಧನವಾದ ನಂತರ ಬೇರೆ ಎಲ್ಲಾ ಕಡೆ ಏನೇನು ನಡೆದಿದೆ ಎಂಬುದು ಗೊತ್ತಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಕೂಡ ಕೇಸುಗಳು ದಾಖಲಾಗಿವೆ. ಪ್ರಾಯಶಃ ಈ ರಾಜ್ಯದ ಪೋಲೀಸರು ದೊಡ್ಡ ಕೆಲಸವನ್ನು ಮಾಡಿದ್ದಾರೆ, ಅದರಲ್ಲಿ ಎರಡು ಮಾತಿಲ್ಲ, ಶ್ರೀ ಸಾಂಗ್ಲಿಯಾನರವರೇ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕೆನ್ನುವ ವಿನಂತಿಯನ್ನು ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿಗಳಿಗೆ ಮಾಡಿದ್ದಾರೆಂಬುದನ್ನು ಪತ್ರಿಕೆ ಇತ್ಯಾದಿಗಳಲ್ಲಿ ನಾವು ಓದಿದ್ದೇವೆ. ಇಂತಹ ಹಿನ್ನೆಲೆ ಇರುವಾಗ ಈ ರಾಜ್ಯವೇ ಒಂದು ಮುತುವರ್ಜಿ ವಹಿಸಿ ಇಂತಹ ಭ್ರಷ್ಟಾಚಾರ ನಿರ್ಮೂಲನವಾಗಬೇಕು, ಇಂತಹದ್ದು ಎಲ್ಲಿಯೂ ಇರಬಾರದು, ಈ ರೀತಿಯ ಸೋರಿಕೆ ನಮ್ಮ ರಾಜ್ಯದ ಖಜಾನೆಗೆ ಆಗುವುದನ್ನು, ಇತರ ರಾಜ್ಯಗಳಿಗೆ ಆಗುವ ಸೋರಿಕೆ ಎಲ್ಲವನ್ನು ನಿಲ್ಲಿಸಬೇಕಾದರೆ ಉನ್ನತಮಟ್ಟದ ತನಿಖೆ

ಸಿಬಿಐನಿಂದ ಆಗಬೇಕೆಂದು ನಾವೇ ಏತಕ್ಕೆ ಇನಿಷಿಯೇಟ್ ಮಾಡಬಾರದು? ಕೇಂದ್ರ ಸರ್ಕಾರಕ್ಕೆ ಕೈ ತೋರಿಸುವ ಪ್ರಯತ್ನಗಳನ್ನು ಏತಕ್ಕೆ ಮಾಡಬೇಕು? ಬಾರಿಬಾರಿಯೂ ಕೂಡ ಈ ರಾಜ್ಯದಲ್ಲಿ ನಡೆದಂಥ ಅವ್ಯವಹಾರ, ಇದರ ಒಂದು ಕೈಗಳು ಬೇರೆ ಬೇರೆ ರಾಜ್ಯಗಳಿಗೆ ಚಾಚಿದ್ದು, ಅಂತರಾಷ್ಟ್ರೀಯ ಮಟ್ಟಕ್ಕೆ ಹೋಗಿದೆ ಎಂದು ಗೊತ್ತಾದ ಮೇಲೂ ಕೂಡ ಅವರು ಮಾಡಬೇಕು, ಇವರು ಮಾಡಬೇಕು ಎಂದು ನಾವು ಏತಕ್ಕೆ ಹೇಳಬೇಕು? ಖಂಡಿತವಾಗಿಯೂ ನಮ್ಮ ಹಿರಿಯರ ಅಪೇಕ್ಷೆ ಏನಿದೆ, ನಮ್ಮ ಪಕ್ಷದ ವತಿಯಿಂದ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವಂತಹ ಕೆಲಸವನ್ನು ಮಾಡುತ್ತೇವೆ, ನಾವು ಈ ವಿಚಾರದಲ್ಲಿ ಹಿಂದಕ್ಕೆ ಸರಿಯುತ್ತೇವೆಂದು ತಿಳಿದುಕೊಳ್ಳುವುದು ಬೇಡ. ಆದರೆ ಈ ರಾಜ್ಯದಿಂದಲೂ ಕೂಡ ಅದಕ್ಕೆ ಒಂದು ಇನಿಷಿಯೇಷನ್ ಬರಲಿ. ಏತಕ್ಕೆ ಈ ರಾಜ್ಯದಿಂದ ಇನಿಷಿಯೇಷನ್ ಬರುತ್ತಿಲ್ಲ. ಈ ರಾಜ್ಯದಿಂದ ಏತಕ್ಕೆ ಅದಕ್ಕೆ ಪ್ರತಿರೋಧ ಬರಬೇಕು? ಮಾತು ಮಾತಿಗೂ ಇಲ್ಲಿಂದ ಕೇಂದ್ರ ಸರ್ಕಾರಕ್ಕೆ ರೆಫರ್ ಮಾಡಿದ ಎಲ್ಲಾ ಮ್ಯಾಟರ್‌ಗಳು ಅಲ್ಲಿ ಇನ್ನೂ ಪೆಂಡಿಂಗ್ ಇದೆ, ಯಾವುದೂ ತನಿಖೆಯಾಗುತ್ತಿಲ್ಲ, ಅವರು ಸಮರ್ಪಕವಾಗಿ ಯಾವುದೇ ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡುತ್ತಿಲ್ಲ, ನಾವೇ ಭಾರಿ ಶೂರರು, ನಮ್ಮ ಸರ್ಕಾರದಲ್ಲಿರುವ ಪೋಲೀಸ್ ವರಿಷ್ಠರು ಮಾತ್ರ ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸಬಲ್ಲರು ಎನ್ನುವ ಧಾಟಿಯಲ್ಲಿ ಹೋಗುವಂಥದ್ದು ಖಂಡಿತವಾಗಿಯೂ ಯಾವುದೋ ಒಂದು ಹಿನ್ನೆಲೆಯಿಂದ ಈ ವಾದ ಮಂಡನೆಯಾಗುತ್ತಿದೆ, ಇದು ಅತ್ಯಂತ ಸೂಕ್ತವಾದ ವಾದವಲ್ಲವೆನ್ನುವುದು ನನ್ನ ಅನ್ನಿಸಿಕೆಯಾಗಿದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ:- ನಮ್ಮ ರಾಜ್ಯದ ಪೋಲೀಸ್‌ನವರು ಬೇರೆ ರಾಜ್ಯಕ್ಕೆ ಹೋಗಿ ಇನ್‌ವೆಸ್ಟಿಗೇಷನ್ ಮಾಡಲು ಅವಕಾಶವಿದೆ. The burden is on that government and the police to assist our police. That provision is available in Cr.P.C. ನಮ್ಮ ರಾಜ್ಯ ಪೋಲೀಸ್‌ನವರು ಬೇರೆ ರಾಜ್ಯಗಳಿಗೂ ಹೋಗಿ ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಅವಕಾಶವಿರುವಾಗ, why are you insisting for CBI enquiry? Our police, not only they can enter other states but they can also enter foreign countries to investigate a particular case. There is provision in the criminal procedure code.

ಶ್ರೀ ಡಿ.ವಿ.ಸದಾನಂದಗೌಡ:- ತಾವು ಮ್ಯಾಜಿಸ್ಟ್ರೇಟ್ ಆಗಿದ್ದವರು, ಕಾನೂನಿನಲ್ಲಿ ನುರಿತವರು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮ ರಾಜ್ಯದಲ್ಲಿರುವ ಪೋಲೀಸರು ಬೇರೆ ರಾಜ್ಯದಲ್ಲಿ ಅಲ್ಲಿ ನಡೆದಂಥ ಘಟನೆಗಳನ್ನೂ ಕೂಡ ಇದಕ್ಕೆ ಲಿಂಕ್ ಮಾಡಿ ಅಲ್ಲಿಯ ಕೇಸನ್ನು ದಾಖಲು ಮಾಡುವುದಕ್ಕಾಗುತ್ತದೆಯೇ? ತಾವು ಇದನ್ನು ಹೇಳಿ? ಇತರೆ ರಾಜ್ಯಗಳಲ್ಲೂ ಕೂಡ ಅದೇ ರೀತಿಯ ಸ್ಟ್ಯಾಂಪ್ ಪೇಪರ್ ಹಗರಣ

ನಡೆದಿದೆ ಎಂದು ಬೇರೆ ಬೇರೆ ರಾಜ್ಯಗಳಲ್ಲಿ ದಾಖಲಾದ ಕೇಸುಗಳು ಇದ್ದಾವೆ. ಈ ರಾಜ್ಯದಲ್ಲಿ ದಾಖಲಾದ ಕೇಸನ್ನು ಕರ್ನಾಟಕ ರಾಜ್ಯದ ಪೋಲೀಸರು ತನಿಖೆ ಮಾಡುವುದಕ್ಕಾಗುತ್ತದೆಯೇ ಮಾಜಿ ಮ್ಯಾಜಿಸ್ಟ್ರೇಟರೇ?

ಶ್ರೀ ಎಸ್.ಪಿ.ಮುದ್ದಹನುಮೇಗೌಡ:- ತಮ್ಮ ಮನವಿ ಏನಿದೆ ಎಂದರೆ, ಇಲ್ಲಿ ಇವತ್ತು ನಮ್ಮ ರಾಜ್ಯದಲ್ಲಿ ರಿಜಿಸ್ಟರ್ ಆಗಿರುವ ಕ್ರಿಮಿನಲ್ ಕೇಸ್ ಅನ್ನು ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಸಿಬಿಐಗೆ ಕೊಡಿ ಎಂದು ಹೇಳುತ್ತಿದ್ದೀರಿ. ನನ್ನ ಸಲಹೆ ಏನೆಂದರೆ, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ನಮ್ಮ ರಾಜ್ಯದ ಪೋಲೀಸ್‌ನವರು ಬೇರೆ ರಾಜ್ಯಕ್ಕೂ ಹೋಗಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಅವಕಾಶವಿರುವುದರಿಂದ ಮತ್ತೆ ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಲ್ಲಿ ಬೇರೆ ರಾಜ್ಯದ ಪೋಲೀಸ್‌ನವರು ನಮ್ಮ ರಾಜ್ಯದ ಪೋಲಿಸ್‌ನವರಿಗೆ ತನಿಖೆ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಎಲ್ಲಾ ರೀತಿ ಸಲಹೆ, ಸಹಕಾರವನ್ನು ಕೊಡಬೇಕೆನ್ನುವ ಒಂದು ಅಬ್ಲಿಗೇಷನ್ ಇರುವ ಸಂದರ್ಭದಲ್ಲಿ ಸಿಬಿಐನವರೇ ಹೋಗಿ ಮಾಡಬೇಕೆಂದು ತಾವು ಏತಕ್ಕೆ ಇನ್‌ಸಿಸ್ಟ್ ಮಾಡುತ್ತಿದ್ದೀರಿ? We can very well encourage our police to investigate this case more effectively.

ಶ್ರೀ ವೈ.ಕೆ.ರಾಮಯ್ಯ:- ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈ ಸದನ ಅಥವಾ ಈ ವಿಷಯದ ತೀವ್ರತೆಯನ್ನಾಗಲಿ ಅಡ್ಡದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದ್ದಾರೆನ್ನುವ ಮಾತನ್ನು ಒಪ್ಪಲು ಸಿದ್ದನಿಲ್ಲ. ನಾನು ಇಲ್ಲಿ ಭಾಷಣ ಮಾಡುತ್ತಿಲ್ಲ, ನನ್ನ ಸ್ನೇಹಿತರು ವಕೀಲರಿದ್ದಾರೆ, ವಾದ ಮಾಡುತ್ತಿದ್ದೇನೆ, without fee. that is the only difference. ಅಲ್ಲೆಲ್ಲಾ ಫೀ ತೆಗೆದುಕೊಂಡು ಲಾಯರ್ ಕೆಲಸ ಮಾಡುತ್ತಿದ್ದೆವು, ಈ ದೇಶದ ಅನ್ನ ತಿಂದಿದ್ದೇವೆ, ಜನರ ಓಟು ತೆಗೆದುಕೊಂಡಿದ್ದೇವಲ್ಲಾ ಎಂದು ನಮ್ಮ ತಲೆಯಲ್ಲಿರುವ ಅಲ್ಪ ಬುದ್ಧಿಯನ್ನು ಉಪಯೋಗಿಸಿ ಜನಗಳ ಹಿತದೃಷ್ಟಿಯಿಂದ ವಾದ ಮಾಡುತ್ತಿದ್ದೇವೆ, ಅದು ಬಿಟ್ಟರೆ, ಅಡ್ಡದಾರಿ ಹಿಡಿಸುವಂಥದ್ದು ನನ್ನ ಮಟ್ಟಿಗಂತೂ ಅವಶ್ಯಕತೆ ಇಲ್ಲ, ನಾನು ಅದನ್ನು ಮಾಡುತ್ತಲೂ ಇಲ್ಲ. ನನ್ನ ಪ್ರಶ್ನೆ ನೇರವಾಗಿದೆ, As an individual I am pleading with you people. ಈ ಸರ್ಕಾರ ಈ ಒಂದು ಅವ್ಯವಹಾರವನ್ನು ತಡೆಯುವುದಕ್ಕೆ ನಡೆಸಿರುವ ಒಂದೇ ಒಂದು ಘಟನೆಯನ್ನು ಈ ಸದನದ ಮುಂದೆ ತನ್ನಿ, ಇವತ್ತು ಯಾರಾದರೂ ಎದ್ದು ನಿಂತುಕೊಂಡು ಹೇಳಿ? ಯಾರಾದರೂ ಸರ್ಕಾರದ ಒಬ್ಬ ಮಂತ್ರಿ ಪೋಲೀಸ್ ಆಫೀಸರ್‌ಗಳನ್ನು ಕರೆದು "don't proceed against so and so, don't investigate ಅವನನ್ನು ಅರೆಸ್ಟ್ ಮಾಡಬೇಡ, ಆ ಕಾಗದ ಪತ್ರವನ್ನು ಸೀಜ್ ಮಾಡಬೇಡ, ಅವನಿಗೆ ರಕ್ಷಣೆ ಕೊಡು'' ಎನ್ನುವ ಯಾವುದೇ ನಿರ್ಧಿಷ್ಟವಾದಂಥ ಘಟನೆ ನಿಮ್ಮ ಮುಂದೆ ಇದ್ದರೆ, ಒಂದು ದಾಖಲೆ ಇದ್ದರೆ, ಆಗ you produce before the House ನಾನು ನಿಮಗೆ ಶರಣಾಗುತ್ತೇನೆ. ಆವಾಗ ನಾವು ಸರ್ಕಾರದ ಜೊತೆಯಲ್ಲಿರುವುದಿಲ್ಲ, ನಿಮ್ಮ

ಜೊತೆಯಲ್ಲಿರುತ್ತೇವೆ. ಅದಿಲ್ಲವೆಂದರೆ, ಎಷ್ಟೋ ದಿವಸಗಳಿಂದ ನಡೆದುಕೊಂಡು ಬಂದಿರುವ ಈ ಅನ್ಯಾಯವನ್ನು, ಈ ಅಕ್ರಮವನ್ನು, ಈ ಅವ್ಯವಹಾರಗಳನ್ನು ಈ ಸರ್ಕಾರ ಕಂಡು ಹಿಡಿದಿದೆ ಅಕ್ಟೋಬರ್ ತಿಂಗಳಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದಿದೆ, I like to remind, ಸಾರ್ವಜನಿಕರಿಗೂ ಇದು ಗೊತ್ತಾಗಬೇಕಾಗುತ್ತದೆ, ಈ ಸರ್ಕಾರ ಅಕ್ಟೋಬರ್ ತಿಂಗಳಲ್ಲಿ ಅಧಿಕಾರಕ್ಕೆ ಬಂದಿದೆ, ಮೊದಲನೆ ಸಾರಿಗೆ ಆಗಸ್ಟ್ ತಿಂಗಳಲ್ಲಿ ಕೇಸ್ ರಿಜಿಸ್ಟರ್ ಆಗಿದೆ. ಈ ಸರ್ಕಾರವನ್ನು ಯಾವ ಕಾರಣಕ್ಕಾಗಿ ಜನರು ಸಂಶಯಾತ್ಮಕವಾಗಿ ಕಾಣುತ್ತಾರೆ? ಹೇಳಿ ಯಾವುದಾದರೂ ಒಂದು? ನನ್ನ ಸ್ನೇಹಿತರದಲ್ಲಿ ಪ್ರಾರ್ಥನೆ ಇಷ್ಟೆ ಯಾರಾದರೂ ಒಬ್ಬರು ಮಂತ್ರಿಯಾಗಲಿ ಅಥವಾ ಸರ್ಕಾರದ ಯಾವುದೇ ಯಂತ್ರವನ್ನು ಉಪಯೋಗಿಸಿಕೊಂಡು ಈ ಅಕ್ರಮದ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡದಂತೆ ತಡೆದಿದ್ದರೆ, ಅಥವಾ ಇಂಟರ್‌ಫಿಯರ್ ಮಾಡಿದ್ದರೆ ಅವತ್ತು ನಾವು ನಿಮ್ಮ ಜೊತೆಯಲ್ಲಿರುತ್ತೇವೆ. ಅದಕ್ಕೆ ಬದಲಾಗಿ ಕಾನೂನಿನ ಚೌಕಟ್ಟಿನಲ್ಲಿ ತೆಗೆದುಕೊಳ್ಳಬೇಕಾದ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿರುವ ಸರ್ಕಾರಕ್ಕೆ ನೀವು ಅಭಿನಂದಿಸಿ ಸರ್ಕಾರದ ಜೊತೆಯಲ್ಲಿರಬೇಕಾಗುತ್ತದೆ, ಇದು ನನ್ನ ಪ್ರಾರ್ಥನೆ. ಇನ್ನು ಸಿಓಡಿಯಲ್ಲಿ ಕೆಲವು ಅಧಿಕಾರಿಗಳ ಬಗ್ಗೆ, ಕರ್ನಾಟಕದಲ್ಲಿದ್ದವರು, ಸಿಬಿಐನಲ್ಲಿದ್ದರಲ್ಲಾ ಸ್ವಾಮಿ? ಸಿಬಿಐನಲ್ಲಿ ಇರುವವರು ಅವರೇನೂ ಆಕಾಶದಿಂದ ಇಳಿದು ಬಂದವರಲ್ಲ, ಅವರು ಇಲ್ಲಿಂದ ಹೋದವರೇ, ಬಿಹಾರ್‌ನವರು ಕರ್ನಾಟಕದವರು, ಗುಜರಾತ್‌ನವರೂ ಕೂಡ ಸಿಬಿಐನಲ್ಲಿದ್ದಾರೆ, ಅವರೇನೂ ಆಕಾಶದಿಂದ ಇಳಿದು ಬಂದ ಧೂತರೇನಲ್ಲ, ಈ ಸಿಬಿಐ ಇನ್‌ವೆಸ್ಟಿಗೇಟ್ ಮಾಡಿದ ಕೇಸ್‌ಗಳು ಏನಾಗಿದ್ದಾವೆನ್ನುವುದು ನಮಗೆ ಗೊತ್ತಿದೆ, ಆದರ ಮೇಲೆ ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ನೀವು ಸಿಓಡಿನಲ್ಲಿ ತಂಡ ರಚನೆ ಮಾಡಿದ್ದೀರಿ, ಅದರಲ್ಲಿರುವ ಒಬ್ಬರೋ ಇಬ್ಬರೋ ಅಧಿಕಾರಿಗಳು ಒಳ್ಳೆಯವರಲ್ಲ, yes I agree with you. ನಮ್ಮಲ್ಲಿ ಎಲ್ಲಾ ರಾಜಕಾರಣಿಗಳು ಹೇಗೆ ಒಳ್ಳೆಯವರಲ್ಲವೋ ಅಧಿಕಾರಿಗಳಲ್ಲಿಯೂ ಕೂಡ ಬಹಳ ಜನ ಒಳ್ಳೆಯವರಿಲ್ಲ, ಅಂತಹವರನ್ನು ಬದಲಾವಣೆ ಮಾಡಲು ನಾವು ಸರ್ಕಾರವನ್ನು ಕೇಳಿಕೊಳ್ಳೋಣ, ಅವರ ಹಿನ್ನೆಲೆ ಚೆನಾಗಿಲ್ಲದಿದ್ದರೆ if their honesty and integrity is questionable, we request the government to change those officers. ನೀವು ನಾವು ಹೇಳಿದ ಮೇಲೂ ಅವರು ಯಾರೋ ಇಬ್ಬರು ಅಧಿಕಾರಿಗಳನ್ನು ರಕ್ಷಣೆ ಮಾಡುವ ಕಾರಣಕ್ಕಾಗಿ ಬದಲಾವಣೆ ಮಾಡದಿದ್ದರೆ, ನಾವು ಆಗ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳೋಣ. ನಾನು ಈ ವಿಷಯದಲ್ಲಿ ನಿಮ್ಮ ಜೊತೆಯಲ್ಲಿ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಕೈ ಜೋಡಿಸುತ್ತೇನೆ. ಅಂತಹ ಇಂಟೆಗ್ರಿಟಿ, ಹಾನೆಸ್ಟಿ ಪ್ರಾಮಾಣಿಕತೆ ಬದ್ಧತೆ ಇಲ್ಲದ ಅಧಿಕಾರಿಗಳಿದ್ದರೆ, ದಯಮಾಡಿ ಮಹಾಸ್ವಾಮಿಯವರು ನಮ್ಮ ಗೃಹ ಮಂತ್ರಿಗಳು ಆ ಟೀಂನಿಂದ ಅವರನ್ನು ಬದಲಾವಣೆ ಮಾಡಬೇಕೆಂದು

ಕೇಳಿಕೊಳ್ಳುವುದರಲ್ಲಿ ನಾನೂ ಕೂಡ ನಿಮ್ಮ ಜೊತೆಯಲ್ಲಿರುತ್ತೇನೆ. ಅದನ್ನು ಬಿಟ್ಟು ಅಲ್ಲಿ ಯಾರೋ ಒಬ್ಬರಿದ್ದಾರೆಂದು ಸಿಬಿಐಗೆ ತನಿಖೆಗೆ ಕೊಡಿ ಎಂದು ಹೇಳುವುದರಲ್ಲಿ ಅರ್ಥವಿಲ್ಲವೆಂದು ನಾನು ಪ್ರತಿಪಾದನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆಡಳಿತ ಪಕ್ಷದವರೆಲ್ಲಾ ಇಂತಹ ಸಂದರ್ಭ ಬಂದಾಗ ಸರ್ಕಾರ ಮಾಡಿದ್ದೆಲ್ಲಾ ಸರಿ ಎಂದು ಪ್ರತಿಪಾದನೆ ಮಾಡುವುದಾಗಲೀ ಅಥವಾ ಈ ವಿಷಯವನ್ನು ವಿರೋಧಪಕ್ಷದವರು ತಂದಿದ್ದಾರೆಂದು ವಿರೋಧ ಮಾಡಬೇಕೆನ್ನುವ ಪ್ರವೃತ್ತಿಯಾಗಲೀ ಈ ದೇಶದ ಆಡಳಿತದ ಉತ್ತಮ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ನಮ್ಮ ಚರ್ಚೆ ಸತ್ಯವನ್ನು ಹೊರಗೆ ತರುವುದಕ್ಕೆ ಪ್ರಯತ್ನವಾಗಿರಬೇಕು, ಸತ್ಯವನ್ನು ಹೊರಗೆ ತಂದು ಅದಕ್ಕೆ ಸಂಬಂಧಿಸಿದವರನ್ನು ಶಿಕ್ಷೆ ಮಾಡುವಂತಹ ಒಂದು ಪ್ರಾಮಾಣಿಕ ಪ್ರಯತ್ನವಾಗಬೇಕು. Not only punished, but according to me they should be severly punished. ಈ ದೇಶದಲ್ಲಾಗುವಂತಹ ಅನ್ಯಾಯ, ಅವ್ಯವಹಾರ, ಅಕ್ರಮಗಳನ್ನು ನೋಡಿದರೆ ಇವರನ್ನು ಬರೀ ಜೈಲಿಗೆ ಕಳುಹಿಸಿದರೆ ಸಾಕಾಗುವುದಿಲ್ಲ, ಇಂತಹವರನ್ನು ಹಿಂದಿನ ಕಾಲದಲ್ಲಿ ಮಾಡಿದಂತೆ ಊರಿನ ಮುಂದೆ ನೇಣು ಹಾಕಿ ಛಿದ್ರ ಛಿದ್ರವಾಗಿ ಕತ್ತರಿಸಿದರೂ ಕೂಡ ನಮಗೇನೂ ತಾಪತ್ರಯವಿಲ್ಲ. ಅದನ್ನು ಮಾಡಲು ನಾವೆಲ್ಲಾ ಒಟ್ಟಾಗಬೇಕು. ಅದನ್ನು ಸಿಬಿಐ ಅಥವಾ ಸಿಓಡಿಯವರೂ ಮಾಡಲಿ, ಆರ್ಡಿನರಿ ಸಬ್‌ಇನ್‌ಸ್ಪೆಕ್ಟರ್ ಮಾಡಲಿ, ಇದಕ್ಕೆ ನಾವೆಲ್ಲರೂ ಜೊತೆಯಾಗಿ ಸೇರೋಣವೆಂದು ಹೇಳುತ್ತೇನೆ. ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ, ಈ ನಮ್ಮ ಕಂದಾಯ ಇಲಾಖೆ ಸ್ವಲ್ಪ ಎಚ್ಚರ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ತಪ್ಪಿಸಬೇಕೆಂದು ಪ್ರಾಮಾಣಿಕ ಪ್ರಯತ್ನ ಮಾಡಿದರೆ ತಪ್ಪಿಸುವುದು ಕಷ್ಟದ ಕೆಲಸವಲ್ಲ. ನಮ್ಮ ಸ್ನೇಹಿತರು ಬಹಳ ಜನ ಸಬ್‌ರಿಜಿಸ್ಟ್ರಾರ್ ಅನ್ನು ಡಿಫೆಂಡ್ ಮಾಡಿಕೊಳ್ಳುತ್ತಿದ್ದರು, ಏಕೋ ಏನೋ ಗೊತ್ತಿಲ್ಲ, It is his primary duty. He has to find out. ಡಾಕ್ಟರಿಗೆ ಕಾಯಿಲೆ ಗೊತ್ತಾಗದಿದ್ದರೆ ಯಾರಿಗೆ ಸ್ವಾಮಿ ಗೊತ್ತಾಗುತ್ತದೆ? ಪೋಸ್ಟಿಂಗ್ಸ್ ಮಾಡಿಕೊಳ್ಳಬೇಕಾದರೆ ಯಾವ ವಾಮಮಾರ್ಗದಲ್ಲಿ ಹೋಗಬೇಕೆನ್ನುವುದು ಅವರಿಗೆ ಗೊತ್ತಾಗುತ್ತದೆ, ನಕಲಿ ಕಾಗದ ಯಾವುದು, ಸಾಚಾ ಕಾಗದ ಯಾವುದು ಎಂಬುದನ್ನು ಇವರಿಗೆ ಕಂಡುಹಿಡಿಯಲಾಗುವುದಿಲ್ಲವೇ? ಈ ಪೇಪರ್ ಅನ್ನು ಅಂಗಡಿಯಲ್ಲಿ ಮಾರುವುದಿಲ್ಲ, Every paper is released from the Government Treasury. There will be a seal; there will be a number; there will be a registration. I know as an Advocate I have practised for a long two decade. ಸ್ವಾಮಿ, ನೀವು ಮಂತ್ರಿಯಾಗಿದ್ದವರು, ನಾವು ನೀವೆಲ್ಲಾ ವ್ಯವಸಾಯ ಸಿಸ್ಟಂನಲ್ಲಿ ಸೇರಿಕೊಂಡಿದ್ದೇವೆ, ನೀವು ಆಸೆಪಟ್ಟಿದ್ದೆಲ್ಲಾ ನೀವು ಮಾಡುವುದಕ್ಕಾಗಿಲ್ಲ, ನಾನು ಆಸೆ ಪಟ್ಟಿದ್ದೆಲ್ಲಾ ನಾನು ಮಾಡುವುದಕ್ಕಾಗಲಿಲ್ಲ. ಎಷ್ಟು ಜನ ಇನ್‌ಸ್ಪೆಕ್ಟರ್‌ಗಳನ್ನು ತಾವು ಸಸ್ಪೆಂಡ್ ಮಾಡಿದಿರಿ ಸ್ವಾಮಿ? Shall I take the liberty to ask that question? ಎಷ್ಟು ಜನರನ್ನು ನಮ್ಮ ಮಂತ್ರಿಗಳು ಮಾಡಿದ್ದಾರೆ ಸ್ವಾಮಿ, ಎಷ್ಟು ಜನರನ್ನು ಹಿಂದಿನ

ಮಂತ್ರಿಗಳು ಮಾಡಿದ್ದಾರೆ ಸ್ವಾಮಿ? ಆದುದರಿಂದ ಒಬ್ಬರ ಕಡೆ ಮತ್ತೊಬ್ಬರು ಕೈ ತೋರಿಸುವುದನ್ನು ಬಿಟ್ಟು ಸತ್ಯ ಯಾವುಧೆಂಬುದನ್ನು ಪರಿಶೀಲನೆ ಮಾಡಿ, ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದನ್ನು ಪರಿಶೀಲನೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರೆ ಈ ಛಾಪ ಕಾಗದದ ಹಾವಳಿಯನ್ನು ತಡೆಯುವುದಕ್ಕೆ ಸಾಧ್ಯತೆ ಇದೆ. ನನಗೆ ಗೊತ್ತಿರುವಂತೆ ರಾಜ್ಯದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ಗಮನಿಸಬೇಕು, ಐದು ಸಾವಿರದ ಎಂಟು ನೂರು ಜನ ಸ್ಟ್ಯಾಂಪ್ ವೆಂಡರ್ಸ್ ಇದ್ದಾರೆ, ಇಲ್ಲೇ ಎಲ್ಲದಕ್ಕೂ ಮೂಲ. ಮಾನ್ಯ ಸದಾನಂದಗೌಡರು, ಸಿರಿಯಸ್ ಆಗಿ ಲಾಯರ್ ಕೆಲಸ ಮಾಡಿದವರು ಅವರಿಗೆ ಚೆನ್ನಾಗಿ ಗೊತ್ತಿದೆ, ಗೌಡರೇ, ಈಗ ನಮಗೆ ಹತ್ತು ವರ್ಷದ ಸ್ಟ್ಯಾಂಪ್ ಪೇಪರ್ ಸಿಗುವುದಿಲ್ಲವೇ? ಇದು ಎಲ್ಲಿಂದ ಶುರುವಾಗುತ್ತದೆ? ಈ ಒಂದು ಅವ್ಯವಹಾರ ಮಾಡಿದಂಥ ಎಷ್ಟು ಜನರ ಲೈಸೆನ್ಸ್ ಅನ್ನು ತಾವು ಕ್ಯಾನ್ಸಲ್ ಮಾಡಿದ್ದೀರಿ ಸ್ವಾಮಿ? ಈ ದೃಷ್ಟಿಯಿಂದ ನಾವು ಕಾನೂನುಗಳನ್ನು ತರುವುದರಿಂದ, ಕಾನೂನುಗಳನ್ನು ಬಿಗಿ ಮಾಡುವುದರಿಂದ ಕರಪ್‌ಷನ್ ಜಾಸ್ತಿಯಾಗುತ್ತದೆಯೇ ಹೊರತು ಸಮಸ್ಯೆಗೆ ಪರಿಹಾರವಲ್ಲ. ಮಾನ್ಯ ಬಚ್ಚೇಗೌಡರೆ, ನಾವು ಬಿಳಿ ಪೇಪರ್ ಮೇಲೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕಾದರೆ, ಕಷ್ಟ ಆಗುತ್ತದೆ. ನಾವು ಇನ್ನೂ ಭಾವನಾತ್ಮಕವಾಗಿ ಬದುಕುವಂತಹವರು, 'ಲೇ, ಅದ್ಯಾವುದೋ ಬಿಳಿ ಪೇಪರ್ ಕನ್‌ಳಾ, ಪತ್ರನೇ ರಿಜಿಸ್ಟರ್ ಮಾಡಿಸಿಕೊಂಡಿಲ್ಲ, ಜಮೀನೇ ಕೊಂಡುಕೊಂಡಿಲ್ಲ' ಎಂದು ಅಂದು ಬಿಡುತ್ತಾರೆ. ಇವೆಲ್ಲದರ ಮಧ್ಯೆ ಬದುಕುತ್ತಿರುವ ನಮಗೆ ಆಡಳಿತ ಯಂತ್ರ ಈ ಛಾಪಕಾಗದ ಚಲಾವಣೆಯನ್ನು ನಿಲ್ಲಿಸುವುದಕ್ಕೆ ಸರ್ಕಾರಿ ಕಛೇರಿಗಳ ಹಂತದಲ್ಲಿ ಸ್ವಲ್ಪ ಬಿಗಿ ಮಾಡಿದರೆ ಈ ಹಾವಳಿಯನ್ನು ತಡೆಯುವುದಕ್ಕೆ ಸಾಧ್ಯ. ಸಂಪೂರ್ಣವಾಗಿ ಎರಾಡಿಕೇಟ್ ಮಾಡುವುದಕ್ಕಾಗದಿರಬಹುದು but certainly you can minimise this crime. ಅದನ್ನು ಮಾಡುವುದಕ್ಕೆ ಸರ್ಕಾರ ಬಿಗಿ ಕಾರ್ಯಕ್ರಮಗಳನ್ನು ಇವತ್ತಿನಿಂದಲೇ, ನಾನು ಕಂದಾಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ನಾಳೆಯೂ ಒಂದು ದಿನ ವರ್ಕಿಂಗ್ ಡೇ ಇದೆ, issue instructions from tomorrow. ನಾಳೆ ಬೆಳಿಗ್ಗೆಯಿಂದಲೇ ಮಾಡಿ ಸ್ವಾಮಿ, ನಿಮ್ಮ ಅಧಿಕಾರಿಗಳು ಯಾರಿದ್ದಾರೆ ನನಗೆ ಗೊತ್ತಿಲ್ಲ, ಅವರನ್ನು ಕೂರಿಸಿಕೊಂಡು, ಮಾಜಿ ಮಂತ್ರಿಗಳನ್ನೂ ಕೂರಿಸಿಕೊಳ್ಳಿ, ನೀವೂ ಕುಳಿತುಕೊಳ್ಳಿ, ಬೇರೆ ಇನ್ಯಾರಾದರೂ ಇಂತಹ ಅನ್ಯಾಯ, ಅಕ್ರಮಗಳನ್ನು ತಡೆಯಲು ಸಹಾಯ, ಸಹಕಾರ ಮಾಡುವಂತಹವರು ಇದ್ದರೆ ಅವರ ಸಹಕಾರವನ್ನೂ ಕೂಡ ತೆಗೆದುಕೊಳ್ಳಿ. ನಮ್ಮೆಲ್ಲರ ಆಸೆ ಇಷ್ಟೆ ಬರೀ ಛಾಪಕಾಗದದಷ್ಟೇ ಅಲ್ಲ, ಎಲ್ಲಾ ಅಕ್ರಮಗಳು ನಿಲ್ಲಬೇಕು. ಕೊನೆಯಪಕ್ಷ ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂಬು ಕೋರಿಕೊಂಡು ಇಂತಹ ಒಂದು ಗಂಭೀರವಾದ ವಿಷಯವನ್ನು ಚರ್ಚೆ ಮಾಡುವುದಕ್ಕೆ ಸದನದ ಮುಂದೆ ತಂದಂಥ ನನ್ನ ಸ್ನೇಹಿತರನ್ನು ಅಭಿನಂದಿಸುತ್ತೇನೆ. ನೀವು ನಾವು ನಿಮ್ಮ

ಜೊತೆಯಲ್ಲಿಲ್ಲವೆನ್ನುವ ಭಾವನೆಯನ್ನೇ ಬಿಟ್ಟುಬಿಡಿ. ನಾನು ಏತಕ್ಕೆ ನಿಮ್ಮ ಜೊತೆಯಲ್ಲಿಲ್ಲ? ಏತಕ್ಕೆ ನಾವು ಮುಚ್ಚಿ ಹಾಕಬೇಕು? ಏಕೆ ಯಾರಿಗೋ ರಕ್ಷಣೆ ಕೊಡಬೇಕು? ಯಾವ ಕಾರಣಕ್ಕಾಗಿ ನಾವು ಸಂಶಯಾತ್ಮಕವಾಗಿ ನಡೆಸಿಕೊಳ್ಳುವಂತಹ ಅಗತ್ಯವಿದೆ? ಆ ಭಾವನೆಯನ್ನೇ ಬಿಟ್ಟುಬಿಡಿ. ನಮ್ಮ ಕಂದಾಯ ಸಚಿವರು ಈಗಾಗಲೇ ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ಬೇಕಾದರೆ ಇವೆಲ್ಲವನ್ನೂ ಪರಿಶೀಲನೆ ಮಾಡಿ, ನಾಲ್ಕು ಜನ ಕುಳಿತುಕೊಂಡು ಒಂದು ವರದಿಯನ್ನು ಕೊಡುವುದಕ್ಕೆ ಅಥವಾ ಗೈಡ್‌ಲೈನ್ ಕೊಡುವುದಕ್ಕೆ ಒಂದು ಸದನ ಸಮಿತಿಯನ್ನು ಮಾಡುವಂತಹ ಒಂದು ಸೂಚನೆಯನ್ನು ಅವರು ಕೊಟ್ಟಿದ್ದಾರೆ, ಅದನ್ನು ಮಾಡಿ ಅದು ಬರುವುದರೊಳಗೆ ತತಕ್ಷಣವಾಗಿ ಎಲ್ಲೆ ಇಂತಹ ಅವ್ಯವಹಾರಗಳು ನಡೆಯುತ್ತಿದ್ದರೂ ತಡೆಯುವುದಕ್ಕೆ ಸೂಕ್ತ ಕ್ರಮವನ್ನು ಒತ್ತಾಯ ಮಾಡಿ, ನಮ್ಮ ವಿರೋಧ ಪಕ್ಷದ ಸ್ನೇಹಿತರಿಗೆ ಇಂತಹ ವಿಷಯಗಳಲ್ಲಿ ನಾವೂ ಕೂಡ ನಿಮ್ಮ ಜೊತೆಯಲ್ಲಿದ್ದೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ.ಆರ್.ಕೃಷ್ಣಮೂರ್ತಿ(ಸಂತೆಮಾರಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಈ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತಾ, ಈ ಒಂದು ಛಾಪ ಕಾಗದದ ವಿಚಾರದಲ್ಲಿ ಈ ಭಾಗದಿಂದ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ಮಾನ್ಯ ಸದಾನಂದಗೌಡರು, ನಮ್ಮ ನಾಯಕರಾದ ಬಚ್ಚೇಗೌಡರು, ಮಾನ್ಯ ಸೋಮಶೇಖರ್, ಮಾನ್ಯ ಶ್ರೀನಿವಾಸಗೌಡರು- ಹೀಗೆ ಹಲವರು ತಮ್ಮದೇ ಆದ ಅರ್ಥದಲ್ಲಿ ಇದನ್ನು ಅರ್ಥೈಸಿದ್ದಾರೆ. ಆ ಭಾಗದಿಂದ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ವೈ.ಕೆ.ರಾಮಯ್ಯನವರೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದನ್ನು ನಾನು ಕೇಳಿದ್ದೇನೆ. ನಾನಾದರೂ ಕೂಡ ಈ ಸದನದ ಕಿರಿಯ ಸದಸ್ಯನಾಗಿ ಈ ವಿಚಾರದಲ್ಲಿ ಬೆಳಕನ್ನು ಚೆಲ್ಲಲು ಬಯಸುತ್ತೇನೆ. ಏನು ಈ ನಕಲಿ ಛಾಪ ಕಾಗದದ ವಿಚಾರದಲ್ಲಿ ಮಾನ್ಯ ಸದಸ್ಯರಾದ ವೈ.ಕೆ.ರಾಮಯ್ಯನವರು ಸರ್ಕಾರವನ್ನು ಪ್ರಶಂಸೆ ಮಾಡಬೇಕೆನ್ನುವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಅವರು ಕೊಟ್ಟಿರುವ ಅಂಕಿಅಂಶಗಳು ಸಾಲದೆಂಬುದು ನನ್ನ ಭಾವನೆ. ಕಾರಣವೇನೆಂದರೆ ಈ ಒಂದು ವಿಚಾರ ಈ ಸದನದಲ್ಲಿ ಉದ್ಭವವಾದದ್ದಲ್ಲ. ನಾನು ಮಾಧ್ಯಮದ ಅಂಕಿಅಂಶಗಳ ಪ್ರಕಾರ ಇಲ್ಲಿ ಹೇಳಬಯಸುತ್ತೇನೆ, ಹಿಂದೆ ಶ್ರೀ ದಿನಕರ್‌ರವರು ಡಿಜಿಪಿಯಾದ ಸಂದರ್ಭದಲ್ಲಿ ಈ ನಕಲಿ ಛಾಪಕಾಗದದ ವಶೀಕರಣ ವಿಚಾರದಲ್ಲಿ ಪ್ರದರ್ಶನವನ್ನೂ ಕೂಡ ಕಮೀಷನ್‌ರವರ ಆಫೀಸ್‌ನಲ್ಲಿ ಮಾಡಿದ್ದರು. ನಮ್ಮ ಘನ ಸರ್ಕಾರದ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣರವರೂ ಕೂಡ ಇದರ ವೀಕ್ಷಣೆಯ ವ್ಯವಸ್ಥೆ ಮಾಡಿರುವುದು ಮಾಧ್ಯಮದ ಮುಖಾಂತರ ನಮಗೆ ಗೊತ್ತಾಗಿದೆ. ಜನವಾಹಿನಿ ಪತ್ರಿಕೆ, ದಿನಾಂಕ:21-8-2001ರಲ್ಲಿ ಸುಮಾರು ಹತ್ತು ಕೋಟಿ ರೂಪಾಯಿಗಳ ನಕಲಿ ಛಾಪಾಕಾಗದದ ವಶ ಎಂದು ಮಾನ್ಯ ಮುಖ್ಯಮಂತ್ರಿಗಳು ವೀಕ್ಷಣೆ ಮಾಡಿದ ಒಂದು

ಭಾವಚಿತ್ರದ ಮುಖಾಂತರ ಇಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಹಾಗೆ ಮಾನ್ಯ ಕಂದಾಯ ಸಚಿವರಾದ ಮಾನ್ಯ ಶ್ರೀ ಶ್ರೀಕಂಠಯ್ಯನವರೂ ಕೂಡ ಈ ನಕಲಿ ಛಾಪಾಕಾಗದ ವಿಚಾರದಲ್ಲಿ ಬೆಳಕನ್ನು ಚೆಲ್ಲಿದ ಮೇಲೆ, ಅವರು ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆ ದಿನಾಂಕ: 25-8-2000ರಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಇದನ್ನು ಇಲ್ಲಿ ಕೋಟ್ ಮಾಡಲು ಬಯಸುತ್ತೇನೆ, "Special Squad set up to investigate Stamp Paper Scam" ಎಂದು 2000ನೇ ಇಸವಿಯಲ್ಲಿ ಈ ವಿಚಾರವನ್ನು ಅವರು ಹೇಳಿದ್ದಾರೆ. ಮಾನ್ಯ ಹಿರಿಯ ಸದಸ್ಯರಾದ ವೈ.ಕೆ.ರಾಮಯ್ಯನವರು ಸರ್ಕಾರದ ಅಪ್ರಿಸಿಯೇಷನ್‌ಗೆ ಅವರು ಕೋಟ್ ಮಾಡಿರುವ ವಿಚಾರಗಳು ಸಾಲದು ಎಂದು ನಾನು ಏಕೆ ಹೇಳಿದೆ ಎಂದರೆ, ಈ ವಿಚಾರದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಕಳೆದ ಅಧಿವೇಶನದಲ್ಲಿ ಮಾನ್ಯ ಕಂದಾಯ ಸಚಿವರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದರು, I want to quote what the Revenue Minister has made a Statement in the Assembly. ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:721, ದಿ:2-3-2001, ಪ್ರಶ್ನೆ 1) ನಾಲ್ಕು ಅಂಶಗಳನ್ನು ಒಳಗೊಂಡಿದೆ, ಅದನ್ನು ನಾನು ಕೋಟ್ ಮಾಡಲೇಬೇಕು. ಉಪಾಧ್ಯಕ್ಷರೇ ರಾಜ್ಯದಲ್ಲಿ ಛಾಪಾ ಕಾಗದ ಮತ್ತು ಮುದ್ರಾಂಕ ನಕಲಿ ಮಾಡಿ ಮಾರಾಟ ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ವಿರೋಧಪಕ್ಷದ ನಾಯಕರು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಸರ್ಕಾರ ಹೌದೆಂದು ಉತ್ತರವನ್ನು ಕೊಟ್ಟಿದೆ. ಹಾಗೆ ಎಷ್ಟು ಮೊತ್ತದ ನಕಲಿ ಛಾಪಾ ಕಾಗದಗಳು ಮಾರಾಟವಾಗಿದೆ ಎಂದು ಕೇಳಿರುವ ಪ್ರಶ್ನೆಗೆ, ಒಟ್ಟು 12,74,360 ರೂಪಾಯಿಗಳ ನಕಲಿ ಛಾಪಾ ಕಾಗದಗಳು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ ಎನ್ನುವ ಪ್ರಶ್ನೆಗೆ ಬೆಂಗಳೂರು ಆರಕ್ಷಕ ಇಲಾಖೆ ಸುಮಾರು ಹತ್ತು ಕೋಟಿ ರೂಪಾಯಿಗಳ ಮುದ್ರಾಂಕ ಕಾಗದಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಕೂಡ ಅವರು ಉತ್ತರವನ್ನು ಕೊಟ್ಟಿದ್ದಾರೆ. ಹಾಗೆ ಈ ಪ್ರಕರಣಕ್ಕೆ ಕಾರಣರ್‍ಯಾರು? ಸರ್ಕಾರ ಇವರುಗಳ ಮೇಲೆ ಕ್ರಮ ಕೈಗೊಂಡಿದೆಯೇ ಎನ್ನುವ ಪ್ರಶ್ನೆಗೆ, ದಿನಾಂಕ:19-8-2001 ರಂದು ಬೆಂಗಳೂರು ನಗರ ಉಪ್ಪಾರಪೇಟೆ ಪೋಲೀಸ್ ಠಾಣೆಯಿಂದ ನೀಡಿರುವ ಪ್ರಥಮ ವರ್ತಮಾನ ವರದಿಯ ಪ್ರಕಾರ ಆರೋಪಿಗಳ ಪಟ್ಟಿ ಈ ಕೆಳಕಂಡಂತಿದೆ ಎಂದು, ಬದ್ರುದೀನ್ ಉರುಫ್ ಬದ್ರು, ಏತಲ್ ಮಹಮದ್ ರಿಯಾಜ್, ಅನೀಜ್, ಸೌಖತ್‌ಖಾನ್, ಮಹಮದ್ ಅಯೂಬ್, ಸಮೀರ್ ಫಯಾಜ್, ನೂರ್ ರಫೀಕ್ ಅಹಮದ್, ಚೇತನ್ ಅಫಿಬ್ ಇಲಿಯಾಸ್, ಲಾಲ್‌ಮುಂಬೈ ಮುಂತಾದವರು ಎಂದು ಮಾನ್ಯ ಕಂದಾಯ ಸಚಿವರು ಈ ಸದನಕ್ಕೆ ಉತ್ತರವನ್ನು ಕೊಟ್ಟಿರುವುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸದಸ್ಯರಾದ ವೈ.ಕೆ.ರಾಮಯ್ಯನವರು, ಸರ್ಕಾರ ಈ ಬಗ್ಗೆ ಗಮನ ಹರಿಸಿ ಈ

ಪ್ರಕರಣವನ್ನು ಪತ್ತೆ ಹಚ್ಚಿದೆ ಅದಕ್ಕೆ ಅಭಿನಂದನೆ ಸಲ್ಲಿಸಬೇಕು ಎಂದು ಏನು ಹೇಳಿದರು, ಅದು ಸಾಲದೆಂಬುದು ನನ್ನ ವೈಯಕ್ತಿಕ ಭಾವನೆ ದಿನಾಂಕ: 2-3-2001, ಮತ್ತೆ ಅದಕ್ಕೂ ಹಿಂದೆ ಮಾನ್ಯ ಕಂದಾಯ ಮಂತ್ರಿಗಳು ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆ ದಿನಾಂಕ: 25-8-2001ರಲ್ಲಿ ಸ್ಪೆಶಲ್ ಸ್ಕ್ವಾಡ್ ಅನ್ನು ರಚನೆ ಮಾಡಲಾಗುವುದೆಂದು ಪ್ರಸ್ತಾಪ ಮಾಡಿದ್ದರು. ಈವರೆವಿಗೂ ಕೂಡ ಸರ್ಕಾರ ಈ ಇನ್‌ವೆಸ್ಟಿಗೇಷನ್‌ನಿಂದ ಏಕೆ ಹೆಚ್ಚಿನ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ ಎನ್ನುವ ಪ್ರಶ್ನೆ ನನ್ನದು. ಇವತ್ತು ರಾಜ್ಯದ ಜನತೆ ವಿರೋಧ ಪಕ್ಷದವರನ್ನೂ ಕೂಡ ಪ್ರಶಂಸೆ ಮಾಡಬೇಕಾದಂಥ ವಿಚಾರವನ್ನು ನಾನು ತಮ್ಮ ಮುಂದೆ ಇಡಬಯಸುತ್ತೇನೆ.

1.40 ಪಿ.ಎಂ.

ಈ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದರು ಮತ್ತು ಈಗ ಈ ಸದನದಲ್ಲಿ ಎಲ್ಲಾ ವಿರೋಧ ಪಕ್ಷದವರು, ಈ ವಿಚಾರದಲ್ಲಿ ಗಂಭೀರವಾದ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಬಿ.ಜೆ.ಪಿ.ಯವರು ಧರಣಿ ಮಾಡಿರತಕ್ಕಂಥಾದ್ದು, ಉಭಯ ದಳಗಳು ಬಹಿಷ್ಕಾರ ಹಾಕಿರತಕ್ಕಂಥ ಹಿನ್ನೆಲೆಯಲ್ಲಿ ಸಭಾಧ್ಯಕ್ಷರು ಒಳ್ಳೆಯ ತೀರ್ಮಾನವನ್ನು ಕೈಗೊಂಡು ಚರ್ಚೆಗೆ ಅವಕಾಶ ಮಾಡಿ ಕೊಟ್ಟಿರುವುದರಿಂದ, ಮತ್ತೊಮ್ಮೆ ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲುವ ಅವಕಾಶವಾಗಿದೆ. ಇದು 2002ನೇ ಇಸವಿ. ಈ ವಿಚಾರದಲ್ಲಿ 2000ದಲ್ಲಿ ಸರ್ಕಾರ ಕ್ರಮವನ್ನು ತೆಗೆದುಕೊಂಡಿದ್ದರೂ ಸಹ, ಇಲ್ಲಿಯವರೆಗೆ ತನಿಖೆಯನ್ನು ಯಾವ ಹಂತದಲ್ಲಿ, ಯಾವ ರೀತಿಯಲ್ಲಿ ಮಾಡಿಕೊಂಡು ಬಂದಿದೆ, ಏಕೆ ಇಷ್ಟು ಡಿಲೇ ಮಾಡಿಕೊಂಡು ಬಂದಿದೆ ಎನ್ನುವ ಅನುಮಾನ ನಮ್ಮನ್ನು ಕಾಡುತ್ತಿದೆ. ಆದುದರಿಂದ, ಈ ವಿಚಾರವನ್ನು ಸಿ.ಬಿ.ಐ.ಗೆ ವಹಿಸಬೇಕು ಎಂದು ವಿರೋಧ ಪಕ್ಷದ ನಾಯಕರು ಮತ್ತು ಶಾಸಕರು ಪ್ರಸ್ತಾಪ ಮಾಡಿರುವ ವಿಚಾರದಲ್ಲಿ ನಾನು ಕೂಡ ಒತ್ತಾಯ ಮಾಡುತ್ತೇನೆ. ಕಾರಣ, ಕಳೆದ ಎರಡು ವರ್ಷಗಳಲ್ಲಿ ಈ ಕೇಸ್‌ನಲ್ಲಿ ಬಹಳಷ್ಟು ಎವಿಡೆನ್ಸ್‌ಗಳು ಡೈಲ್ಯೂಟ್ ಆಗಿವೆ ಎನ್ನುವ ಅನುಮಾನ ನನಗೆ ಆಗುತ್ತಿದೆ. ಶ್ರೀ ಸಾಂಗ್ಲಿಯಾನಾರವರು ಇಲ್ಲಿ ಪೋಲೀಸ್ ಕಮೀಷನರ್ ಆಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ, ಈ ವಿಚಾರದ ಬಗ್ಗೆ ಬಹಳ ಗಂಭೀರವಾದ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರಕ್ಕೆ ಪತ್ರವನ್ನು ಬರೆದಿದ್ದರು. ಈ ವಿಚಾರದಲ್ಲಿ ಪಟ್ಟಭದ್ರಹಿತಾಸಕ್ತಿಗಳ ಹೆಸರುಗಳನ್ನು ಇನ್‌ವೆಸ್ಟಿಗೇಷನ್ನಿನ ಎಫ್.ಐ.ಆರ್-ನಲ್ಲಿ ಹೆಸರಿಸಿದ್ದಾರೆ. ಈ ಹಗರಣದಲ್ಲಿ ಭಾಗಿಯಾಗಿರತಕ್ಕ ಅಧಿಕಾರಿಗಳು, ಅದು ರೆವಿನ್ಯೂ ಅಧಿಕಾರಿಗಳಿರಬಹುದು ಅಥವಾ ಪೋಲೀಸ್ ಅಧಿಕಾರಿಗಳಿರಬಹುದು ಅಥವಾ ರಾಜಕಾರಣಿಗಳಿರಬಹುದು, ಅವರ ಹೆಸರನ್ನು ಮಾನ್ಯ ಕಂದಾಯ ಸಚಿವರು ತಮ್ಮ ಉತ್ತರದಲ್ಲಿ ಹೆಸರಿಸಿಲ್ಲವಾದ್ದರಿಂದ ನಾನು

ಅನುಮಾನಪಡುತ್ತಿದ್ದೇನೆ. ಹಾಗೂ ಶಂಕೆಯನ್ನು ವ್ಯಕ್ತಪಡಿಸುತ್ತಿದ್ದೇನೆ ಎನ್ನುವ ಅಭಿಪ್ರಾಯವನ್ನು ಸಭೆಯ ಮುಂದಿಡುತ್ತಿದ್ದೇನೆ. ಇದು ದೊಡ್ಡ ಹಗರಣವಾಗಿರುವುದರಿಂದ ಇದನ್ನು ಸಿ.ಬಿ.ಐ.ಗೆ ವಹಿಸಬೇಕು ಎಂದು ವಿರೋಧ ಪಕ್ಷದ ನಾವೆಲ್ಲರೂ ಒಗ್ಗೂಡಿ ಒತ್ತಾಯ ಮಾಡುತ್ತಿದ್ದೇವೆ. ತಾವು ಮಾತನಾಡುವಂಥ ಸಂದರ್ಭದಲ್ಲಿ ಮಾನ್ಯ ವೈ.ಕೆ.ರಾಮಯ್ಯನವರು, ಇದಕ್ಕೆ ಒಂದು ಸದನ ಸಮಿತಿಯನ್ನು ರಚನೆ ಮಾಡಬೇಕು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದರು. ಈ ಸದನದ ಸದಸ್ಯನಾಗಿ ನಾನು ಬಹಳ ನೊಂದು ಈ ವಿಚಾರವನ್ನು ಹೇಳುತ್ತಿದ್ದೇನೆ. ಹಿಂದೆ, ನಮ್ಮ ಸರ್ಕಾರವಿದ್ದಾಗ ಶಿರಾದಲ್ಲಿ ಒಂದು ಘಟನೆ ನಡೆಯಿತು. ಪೋಲೀಸ್ ಗೋಲಿಬಾರ್‌ನಿಂದ ರೈತರ ಸಾವು-ನೋವುಗಳಾದವು. ಆಗ ಒಂದು ಸದನ ಸಮಿತಿ ರಚನೆಯಾಯಿತು. ನಾನೂ ಆ ಸಮಿತಿಯ ಸದಸ್ಯನಾಗಿದ್ದೆ. ನಾನು ಬಹಳ ನೊಂದು ಇದನ್ನು ಹೇಳುತ್ತಿದ್ದೇನೆ. ಒಬ್ಬ ಎ.ಪಿ.ಎಂ.ಸಿ. ಸೆಕ್ರೆಟರಿಯನ್ನು ಸಸ್ಪೆಂಡ್ ಮಾಡುವಂತೆ ಆ ಸದನ ಸಮಿತಿ ವರದಿಯನ್ನು ಕೊಟ್ಟಿತು. ಕೇವಲ ಒಬ್ಬ ಎ.ಪಿ.ಎಂ.ಸಿ. ಕಾರ್ಯದರ್ಶಿಯನ್ನು ಸಸ್ಪೆಂಡ್ ಮಾಡಲು ಸದನ ಸಮಿತಿ ರಚನೆಯಾಗಬೇಕಿತ್ತೇ ಎನ್ನುವುದು ನನ್ನ ಪ್ರಶ್ನೆ. ಆ ಗೋಲಿಬಾರ್ ಪ್ರಕರಣದಲ್ಲಿ ಭಾಗಿಯಾದಂಥ ಜಿಲ್ಲಾಮಟ್ಟದ ಯಾವ ಅಧಿಕಾರಿಗಳ ಮೇಲೂ ಅವರ ಕ್ರಮ ತೆಗೆದುಕೊಳ್ಳಲಿಲ್ಲ. ಹಾಗಾಗಿ, ನನಗೆ ನಮ್ಮ ಪೋಲೀಸ್ ಇಲಾಖೆಯ ಬಗ್ಗೆ ಗೌರವವಿದ್ದರೂ, ಸದನ ಸಮಿತಿಯ ಬಗ್ಗೆ ಗೌರವವಿದ್ದರೂ ಸಹ ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣಿಸಿ ಇದನ್ನು ಸಿ.ಬಿ.ಐ.ಗೆ ವಹಿಸಬೇಕು ಎಂದು ಸಭಾಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಪ್ಪಿತಸ್ಥರು ಯಾರೇ ಇದ್ದರೂ ಸಹ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಸರ್ಕಾರ ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಿ ಆದೇಶವನ್ನು ನೀಡಬೇಕು ಎನ್ನುವುದನ್ನು ತಮ್ಮ ಮುಖೇನ ಆಗ್ರಹಪೂರ್ವಕವಾಗಿ ಒತ್ತಾಯಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು):- ಸನ್ಮಾನ್ಯ ಉಪಾಧ್ಯಕ್ಷರೇ, ರಾಷ್ಟ್ರೀಯ ಭದ್ರತೆಗೆ ಧಕ್ಕೆ ತಂದ, ಆರ್ಥಿಕ ಭಯೋತ್ಪಾದಕತೆಯಿಂದ ರಾಜ್ಯದ ಹಾಗೂ ದೇಶದ ಆರ್ಥಿಕತೆಯ ಅಸ್ತಿತ್ವಕ್ಕೆ ಬೆದರಿಕೆ ತಂದಿರತಕ್ಕಂಥ ನಕಲಿ ಛಾಪಾ ಕಾಗದದ ಹಗರಣದ ಬಗ್ಗೆ ನಿಯಮ 69ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ನನ್ನ ಕೆಲವು ಅನಿಸಿಕೆಗಳನ್ನು ಹೇಳಲು ಬಯಸುತ್ತಿದ್ದೇನೆ. ಮೊದಲಿಗೆ, ನಕಲಿ ಛಾಪಾ ಕಾಗದ ಹಗರಣ ಮತ್ತು ಅದರ ಅಪರಾಧಿಗಳ ಬಗ್ಗೆ ಸುಳಿವನ್ನಿತ್ತ ಮತ್ತು ಅವರನ್ನು ಬಂಧಿಸಲು ಅನೇಕ ತರಹದ ಮಾಹಿತಿಗಳನ್ನು ನೀಡಿದಂಥ ಶ್ರೀ ಜಯಂತ್ ತಿನೇಕರ್‌ರವರನ್ನು ಅಭಿನಂದಿಸುತ್ತಿದ್ದೇನೆ. ಒಬ್ಬ ಸಾಮಾಜಿಕ ಕಾರ್ಯಕರ್ತರ ನೆಲೆಯಲ್ಲಿ, ಎಲ್ಲಾ ಹೆದರಿಕೆ ಬೆದರಿಕೆಗಳ ನಡುವೆ

ಜೀವದ ಹಂಗನ್ನು ತೊರೆದು ಮಾಹಿತಿಯನ್ನು ಸಂಗ್ರಹಿಸಿ ಒಂದು ಹಂತಕ್ಕೆ ತರಲು ಕಾರಣಕರ್ತರಾದ ಶ್ರೀ ಜಯಂತ್ ತಿನೇಕರ್‌ರವರಿಗೆ ರಾಜ್ಯ ಪ್ರಶಸ್ತಿಯನ್ನು ಕೊಡಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ, ಅವರ ಜೀವಕ್ಕೆ ಭದ್ರತೆ, ರಕ್ಷಣೆಯನ್ನು ಕೊಡುವ ವ್ಯವಸ್ಥೆಯಾಗಬೇಕು ಎನ್ನುವ ವಿನಂತಿಯನ್ನು ಸಹ ಮಾಡುತ್ತಿದ್ದೇನೆ. ಅದೇ ರೀತಿ, ಅಪರಾಧಿಗಳನ್ನು ಬಂಧಿಸಲು ಕಾರಣಕರ್ತರಾದ ಬೆಂಗಳೂರಿನ ಪೋಲೀಸ್ ಕಮೀಷನರ್ ಸಾಂಗ್ಲಿಯಾದ ಹಾಗೂ ಅಪರಾಧಿ ಕರೀಂ ಲಾಲನನ್ನು ಅಜ್ಮೀರದಿಂದ ಬಂಧಿಸಿ ತಂದ ಡಿ.ವೈ.ಎಸ್.ಪಿ.ಭಾವಾ ಹಾಗೂ ಇನ್ಸ್‌ಪೆಕ್ಟರ್ ಮರೀಗೌಡರನ್ನೂ ಸಹ ಅಭಿನಂದಿಸುತ್ತಿದ್ದೇನೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಕರೀಂಲಾಲಾನನ್ನು ತನಿಖೆಗೆ ಒಳಪಡಿಸಿದಾಗ ಅವನು ಹೇಳಿದ ಹೆಸರುಗಳೆಂದರೆ ಕೆಲವು ಪ್ರಭಾವೀ ವ್ಯಕ್ತಿಗಳು, ಪ್ರಭಾವೀ ರಾಜಕಾರಣಿಗಳು ಮತ್ತು ಅಧಿಕಾರಿಗಳು. ಇದರ ಬಗ್ಗೆ ಯಾವ ತನಿಖೆ ನಡೆದಿದೆ? ಯಾವ ಹಂತದವರೆಗೆ ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ? ಎನ್ನುವುದನ್ನು ಹೇಳಬೇಕು. ಇದರ ಬಗ್ಗೆ ಯಾವುದೇ ರೀತಿಯ ಮಾಹಿತಿ ನಮ್ಮ ಮುಂದೆ ಇಲ್ಲ. ಅಪರಾಧಿಗಳನ್ನು ಬಂಧಿಸಿ ಸಾಕಷ್ಟು ಸಮಯವಾಗಿದ್ದರೂ, ಅವರು ಹೇಳಿರುವ ಹೆಸರಿನ ವ್ಯಕ್ತಿಗಳ ಬಗ್ಗೆ ತನಿಖೆ ನಡೆಸಿದ ಯಾವುದೇ ಮಾಹಿತಿಯನ್ನು ಕೊಡದಿರುವುದರಿಂದ, ರಾಜ್ಯ ಸರ್ಕಾರದ ಈ ನಡವಳಿಕೆಯ ಬಗ್ಗೆ ಸಂಶಯ ಉದ್ಭವವಾಗಿರುವ ಹಿನ್ನೆಲೆಯಲ್ಲಿ ನಾವು ಸಿ.ಬಿ.ಐ. ತನಿಖೆಗೆ ಒತ್ತಾಯ ಮಾಡುತ್ತಿದ್ದೇವೆ. ಇನ್ನೊಂದು ಪ್ರಮುಖವಾದ ಅಂಶವೆಂದರೆ, ಈ ನಕಲಿ ಛಾಪಾ ಕಾಗದದ ಹಗರಣದಿಂದ ರಾಜ್ಯದ ಹಾಗೂ ದೇಶದ ಆರ್ಥಿಕತೆಗೆ ಉಂಟಾಗಿರತಕ್ಕಂಥ ನಷ್ಟ ಹಲವು ಸಾವಿರ ಕೋಟಿ ರೂಪಾಯಿಗಳಾಗಿದ್ದರೂ, ಈ ಹಣ ಎಲ್ಲಿ ಹೋಗಿದೆ? ಯಾವುದಕ್ಕೆ ದುರ್ವ್ಯಯವಾಗಿದೆ? ಎನ್ನುವುದರ ಬಗ್ಗೆ ಮಹತ್ತರವಾದ ತನಿಖೆಯಾಗಬೇಕಾಗಿದೆ. ಈ ಹಣ ಎ.ಕೆ.-47 ರೈಫಲ್‌ಗಳನ್ನು ಖರೀದಿ ಮಾಡಲು ಹೋಗಿದೆಯಾ, ಆರ್.ಡಿ.ಎಕ್ಸ್. ಖರೀದಿ ಮಾಡಲು ಹೋಗಿದೆಯಾ, ಐ.ಎಸ್.ಐ. ಏಜೆಂಟರುಗಳಿಗೆ ಉಗ್ರಗಾಮಿ ಚಟುವಟಿಕೆಗಳನ್ನು ನಡೆಸಲು ಹೋಗಿದೆಯಾ, ಯಾವ ರಾಜಕಾರಣಿಗಳಿಗೆ ಕೊಡಲಾಗಿದೆ, ಯಾವ ಚುನಾವಣೆಯಲ್ಲಿ ಸ್ಪರ್ಧಿಸಲು ಯಾರಿಗೆ ಸಹಾಯ ಮಾಡಿದೆ. ಇಂಥ ಎಲ್ಲಾ ವಿಷಯಗಳ ಬಗ್ಗೆ ಸತ್ಯಸಂಗತಿಗಳು ಹೊರಬರಬೇಕಾಗಿದೆ. ಈ ರೀತಿಯ ಛಾಪಾ ಕಾಗದ ಪ್ರಿಂಟ್ ಆದದ್ದು ಕೊಲ್ಕತ್ತಾ ಹತ್ತಿರದಲ್ಲಿರುವ ಬಾಂಗ್ಲಾ ಗಡಿ ಪ್ರದೇಶದಲ್ಲಿ, ಆ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕನ ಹೆಸರು ಕೊಹಿಲೆ ಎನ್ನುವಂಥ ಮಾಹಿತಿಗಳು ಬಂದಿರುವ ಹಿನ್ನೆಲೆಯಲ್ಲಿ ಬಹುಶಃ ಇದು ರಾಜ್ಯ ವ್ಯಾಪ್ತಿಯಲ್ಲಿರುವ ವಿಷಯವಲ್ಲ, ರಾಷ್ಟ್ರವ್ಯಾಪಿಯಾಗಿರುವ ವಿಷಯವಾಗಿರುವುದರಿಂದ ಯಾವುದೇ ರೀತಿಯಲ್ಲೂ ನಮ್ಮ ರಾಜ್ಯ, ರಾಜ್ಯದ ಕ್ಷೇತ್ರ ವ್ಯಾಪ್ತಿಗೆ ಸಂಬಂಧಪಟ್ಟಂತೆ ತನಿಖೆ ನಡೆಸಲು ಆಗುವುದಿಲ್ಲ, ಇದರ ಬಗ್ಗೆ ರಾಷ್ಟ್ರಮಟ್ಟದಲ್ಲಿ ಸಮಗ್ರವಾದ

ತನಿಖೆಯಾಗಬೇಕಾಗಿರುವುದರಿಂದ ಇದನ್ನು ಸಿ.ಬಿ.ಐ.ಗೆ ಒಪ್ಪಿಸಬೇಕು ಎನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ಕೆಲವು ವರ್ಷಗಳ ಹಿಂದೆ, ನಮ್ಮ ವಿಧಾನಮಂಡಲದ ಸಮಿತಿಯಿಂದ ಅಧ್ಯಯನ ಪ್ರವಾಸಕ್ಕೆ ಶ್ರೀನಗರಕ್ಕೆ ಹೋಗುವ ಅವಕಾಶವಾಗಿತ್ತು. ಆ ಸಂದರ್ಭದಲ್ಲಿ ಶ್ರೀನಗರದಲ್ಲಿರತಕ್ಕಂಥ ಬಾರ್ಡರ್ ಸೆಕ್ಯುರಿಟಿ ಫೋರ್ಸ್‌ನ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಅವರ ಜೊತೆಯಲ್ಲಿ ಸಾಕಷ್ಟು ಚರ್ಚೆಯನ್ನು ಮಾಡತಕ್ಕಂಥ ಅವಕಾಶ ನಮಗೆ ಸಿಕ್ಕಿತ್ತು. ಆ ಸಂದರ್ಭದಲ್ಲಿ ಅವರು ಹೇಳಿದರು, ''ಭಾರತದ ಗಡಿ ಪ್ರದೇಶದಲ್ಲಿ ಬರುವ ಎಂಥ ಅಪಾಯವನ್ನಾದರೂ ಎದುರಿಸಿ ದೇಶವನ್ನು ರಕ್ಷಣೆ ಮಾಡಲು ಧೃಡ ಸಂಕಲ್ಪರಾಗಿ ನಾವು ನಿಂತಿದ್ದೇವೆ, ಎಂಥ ತ್ಯಾಗಕ್ಕೂ ನಾವು ಸಿದ್ಧರಾಗಿದ್ದೇವೆ, ಆದರೆ ನಮಗೆ ಭಯವಾಗಿರುವಂಥಾದ್ದು, ಆತಂಕ ತಂದಿರುವಂಥಾದ್ದು ಎಂದರೆ ಈ ದೇಶದ ಉದ್ದಗಲಕ್ಕೂ ವ್ಯಾಪಿಸಿರುವ ಐ.ಎಸ್.ಐ. ಜಾಲ ಹಾಗೂ ಅವರಿಗೆ ಆಶ್ರಯ ಕೊಡುತ್ತಿರುವಂಥ ವಿದ್ಯಾವಂತ ಹಾಗೂ ಶ್ರೀಮಂತ ವರ್ಗ'' ಇದು ನಮಗೆ ಆತಂಕ ತಂದಿದೆ ಎಂದು ಅವರು ಹೇಳಿರುವ ಮಾತನ್ನು ನಾವು ಇವತ್ತು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಆ ಸಂದರ್ಭದಲ್ಲಿ ಅವರು ಇನ್ನೊಂದು ಮಾತನ್ನೂ ಸಹ ಹೇಳಿದರು. ಒಬ್ಬ ವೀರಪ್ಪನ್‌ನನ್ನು ಹಿಡಿಯಲು ರಾಜ್ಯ ಸರ್ಕಾರ ಎಷ್ಟು ಖರ್ಚು ಮಾಡಿದೆ, ಎಷ್ಟು ಪ್ರಯತ್ನ ಮಾಡಿದೆ, ಆದರೆ ಇನ್ನೂ ಹಿಡಿಯಲು ಸಾಧ್ಯವಾಗುತ್ತಿಲ್ಲ. ಆದರೆ ಇಡೀ ಶ್ರೀನಗರದಲ್ಲಿ ಅಂದರೆ ಜಮ್ಮು ಕಾಶ್ಮೀರದಲ್ಲಿ 3-4 ಸಾವಿರ ಜನ ಉಗ್ರಗಾಮಿಗಳಿದ್ದಾರೆ. ಇಂಥ ದುಸ್ಥಿತಿಯಲ್ಲಿ ನಾವಿದ್ದೇವೆ ಎನ್ನುವ ಅಂಶವನ್ನು ಅಧಿಕಾರಿಗಳು ನಮ್ಮ ಗಮನಕ್ಕೆ ತಂದರು. ಈ ಮಾತನ್ನು ಈಗ ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇತ್ತೀಚೆಗೆ ಪಾರ್ಲಿಮೆಂಟ್ ಮೇಲೆ ಹಲ್ಲೆ ನಡೆದಿದ್ದು, ಆ ಯೋಜನೆಯನ್ನು ರೂಪಿಸಿದ ಬ್ರೈನ್ ಒಬ್ಬ ವಿದ್ಯಾವಂತ ವ್ಯಕ್ತಿಯದ್ದು, ಅಂದರೆ ಅವರು ಒಬ್ಬ ಪ್ರೊಫೆಸರ್ ಆಗಿದ್ದರು. ಅದೇ ರೀತಿ, ಈ ಹಗರಣದಲ್ಲಿ ಸಹ, ಕರೀಂಲಾಲಾನಿಗೆ ಆಶ್ರಯ ಕೊಟ್ಟಂಥ ವ್ಯಕ್ತಿ ಎಂದರೆ ಡಾ॥ರೆಹಮಾನ್ ಎನ್ನುವವರು. ಅವರು ಮಾನ್ಯ ಸಚಿವರ ತಮ್ಮ. ಅವರು ಯಾವ ರೀತಿ ಆಶ್ರಯ ಕೊಟ್ಟರು ಎಂಬುದು ಮಾತ್ರವಲ್ಲ, ಕೇವಲ ಬಾಡಿಗೆಗೆ ಕೊಟ್ಟರು ಎಂದು ಹೇಳಿರುವುದಕ್ಕೆ ನಾನು ಹೆಚ್ಚು ಆಳವಾಗಿ ಹೇಳಲು ಹೋಗುವುದಿಲ್ಲ. ಆಶ್ರಯ ಕೊಟ್ಟಿದ್ದರ ಜೊತೆಯಲ್ಲಿ ಅವರು ಜೊತೆಯಲ್ಲಿ ಶಾಮೀಲಾಗಿ ವ್ಯವಹಾರಗಳನ್ನು ಮಾಡಿದರು ಎನ್ನುವುದು ಗಂಭೀರವಾದ ವಿಷಯ. ಇವರ ಹಿನ್ನೆಲೆ ಏನು ಎನ್ನುವುದನ್ನು ತಿಳಿದುಕೊಂಡೂ ಸಹ ಇವರ ಜೊತೆ ಈ ವ್ಯವಹಾರವನ್ನು ಮಾಡಿದ್ದಾರೆ ಎಂದಮೇಲೆ, ಇದರ ಬಗ್ಗೆ ನಾವು ಸಮಗ್ರವಾದಂಥ ತನಿಖೆ ನಡೆಸುವುದು ಅವಶ್ಯಕ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ. ಯಾವ ಯಾವ ಐ.ಎಸ್.ಐ. ಏಜೆಂಟರುಗಳು ಬಂಧಿಸಲ್ಪಟ್ಟರೋ, ಅವರ ಹಿನ್ನೆಲೆಯನ್ನು ಸ್ವಲ್ಪ ಅಧ್ಯಯನ ಮಾಡಿದಾಗ, ಅನೇಕ ಜನರು ಬೇರೆ ಬೇರೆ ತರಹದ ಬಿಳಿ ವ್ಯವಹಾರಗಳನ್ನು ತೋರಿಸುವ ರೀತಿಯಲ್ಲಿ

ವ್ಯವಹಾರಗಳನ್ನು ಮಾಡುತ್ತಿದ್ದರು, ರಫ್ತೋದ್ಯಮಗಳನ್ನು ಮಾಡುತ್ತಿದ್ದರು. ಆದರೆ, ಆಂತರಿಕವಾಗಿ ಈ ಜಾಲದ ಜೊತೆ ಸೇರಿಕೊಂಡು ದೇಶದ್ರೋಹಿ ಚಟುವಟಿಕೆಗಳನ್ನು ಮಾಡುವಂತಹ ಹಿನ್ನೆಲೆಯಲ್ಲಿ ಇದರ ಬಗ್ಗೆ ನಾವು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ ಎಂಬ ಮಾತನ್ನು ನಾನು ಹೇಳುತ್ತೇನೆ. ನಕಲಿ ನೋಟುಗಳನ್ನು ಪ್ರಿಂಟ್ ಮಾಡುವ ಮೂಲಕ, ಮಾದಕ ದ್ರವ್ಯಗಳನ್ನು ವಿತರಿಸುವ ಮೂಲಕ, ಆರ್.ಡಿ.ಎಕ್ಸ್; ಎ.ಕೆ.-47 ಬಳಸುವ ಮೂಲಕ, ಗಡಿ ಪ್ರದೇಶದಲ್ಲಿ ಅಮಾಯಕ ಜನರಲ್ಲಿ ಉಗ್ರಗಾಮಿ ಚಟುವಟಿಕೆಗಳನ್ನು ಪ್ರೇರೇಪಿಸುವ ಮೂಲಕ ಅಥವಾ ಸಾಮೂಹಿಕ ಹತ್ಯೆಗಳನ್ನು ಮತ್ತು ರಾಜಕೀಯ ಹತ್ಯೆಗಳನ್ನು ಮಾಡುವ ಮೂಲಕ ದೇಶಾದ್ಯಂತ ನಡೆಸುವಂಥ ಈ ಉಗ್ರಗಾಮಿಗಳ ಚಟುವಟಿಕೆಗೆ ಈ ಒಂದು ಹಗರಣದಿಂದ ಇಂದು ಆರ್ಥಿಕ ನೆರವು ಸಿಕ್ಕಿದೆ ಎಂದು ಹೇಳುವ ಮಾಹಿತಿ ಜನಸಾಮಾನ್ಯರಲ್ಲಿ ಒಂದು ತರಹದ ಕಂಪನವನ್ನುಂಟು ಮಾಡಿದೆ. ಇದು ಖಂಡಿತವಾಗಿ ರಾಜ್ಯಮಟ್ಟದಲ್ಲಿ ತನಿಖೆಯಾಗುವ ಸಂಗತಿಯಲ್ಲ. ಡಾ॥ಚಿತ್ತರಂಜನ್‌ರಂಥ ಒಬ್ಬ ದೇಶಭಕ್ತ ಶಾಸಕ ಬಲಿಯಾಗಬೇಕಾದ ಘಟನೆಯನ್ನು ನಾನು ನೆನಪಿಗೆ ತರುತ್ತೇನೆ. ಮುಂದಾಗುವಂಥ ಯಾವುದೇ ಅನಾಹುತಗಳನ್ನು ಅವು ಆಗುವ ಮುನ್ನವೇ ತಡೆಯಲು ಸರ್ಕಾರ ಸತತವಾಗಿ ಇದರ ಬಗ್ಗೆ ಹೆಚ್ಚಿನ ಕಾರ್ಯಾಚರಣೆ ಮಾಡಬೇಕೆಂದು ನಾನು ವಿನಂತಿಸುತ್ತೇನೆ. ಬೇರೆ ಬೇರೆ ವರದಿಗಳನ್ನು ಗಮನಿಸುವ ಸಂದರ್ಭದಲ್ಲಿ, ಕರೀಂಲಾಲಾನ ಬಳಗ ಯಾವ ಬ್ಯಾಂಕ್ನಲ್ಲಿ ಹಣವನ್ನು ಡಿಪಾಸಿಟ್ ಮಾಡಿತ್ತು? ಅವರಲ್ಲಿರುವ ಕಪ್ಪು ಹಣವನ್ನು ಬಿಳಿ ಮಾಡಲು ಯಾವೆಲ್ಲಾ ಬ್ಯಾಂಕ್ ಅಧಿಕಾರಿಗಳು ಪ್ರಯತ್ನಪಟ್ಟರು? ಈ ಎಲ್ಲಾ ಮಾಹಿತಿಗಳ ಬಗ್ಗೆ ಸ್ವಲ್ಪ ಅಧ್ಯಯನ ಮಾಡಿದಾಗ ಇನ್ನೂ ಹೆಚ್ಚಿನ ಬೆಳಕನ್ನು ನಾವು ಕಾಣಲು ಸಾಧ್ಯವಾಗುತ್ತದೆ. ಅವರು ಉಲ್ಲೇಖ ಮಾಡಿದ ಕೆಲವು ಪ್ರಭಾವಿ ವ್ಯಕ್ತಿಗಳು ಇದರಲ್ಲಿ ಶಾಮೀಲಾಗಿದ್ದಾರೆಂದು ಹೇಳುವ ಮಾಹಿತಿ ಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವೇನು ತನಿಖೆ ಮಾಡಿದೆ? ಆ ತನಿಖೆ ಯಾವ ಹಂತದಲ್ಲಿ ಪ್ರಗತಿಯಲ್ಲಿದೆ? ಈ ಬಗ್ಗೆ ನಾನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಅಂತರರಾಷ್ಟ್ರೀಯ ಅಪರಾಧಿ ಎಂದು ಗುರುತಿಸಲ್ಪಟ್ಟಿರುವ ದಾವೂದ್ ಇಬ್ರಾಹಿಂನ ಜಾಲದಲ್ಲಿ ಇವರು ಸೇರ್ಪಡೆಯಾಗಿದ್ದಾರೆಂದು ಹೇಳುವ ಮಾಹಿತಿಯನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕು. ಇದು ಸಿ.ಬಿ.ಐ. ತನಿಖೆಗೆ ತಕ್ಕುದಾದ, ಯೋಗ್ಯವಾದ ಪ್ರಕರಣವೆಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಹೇಳಬಯಸುವುದೇನೆಂದರೆ, ನಾನು ಕೇಳಿದ್ದ ಒಂದು ಪ್ರಶ್ನೆಗೆ ಲಿಖಿತ ಮೂಲಕ ಬಂದಿರುವ ಉತ್ತರ ನನಗೆ ಆಶ್ಚರ್ಯ ಮತ್ತು ಆಘಾತವನ್ನು ತಂದಿದೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಪಾಕಿಸ್ತಾನಿ ಪ್ರವಾಸಿಗರು ಇಲ್ಲಿ ಪ್ರಜೆಗಳಾಗಿ ಅಥವಾ ಗುಪ್ತವಾಗಿ, ಅಂಡರ್‌ಗ್ರೌಂಡ್ ಆಗಿ ಇದ್ದಾರೆಂದು ನಾನು ಪ್ರಶ್ನೆ ಕೇಳಿದ್ದೆ. ಬಹುಶಃ 200ಕ್ಕಿಂತ ಹೆಚ್ಚು

ಜನರು ಇವತ್ತು ಗುಪ್ತವಾಗಿ ಕರ್ನಾಟಕಾದ್ಯಂತ ಇದ್ದಾರೆಂದು ಹೇಳುವ ಮಾಹಿತಿ ನಮ್ಮ ಗಮನಕ್ಕೆ ಬಂದಿದೆ. ಇದು ಆಘಾತಕರವಾದ ಮಾಹಿತಿಯಾಗಿದೆ. ಇಂಥ ಅಂಡರ್‌ಗ್ರೌಂಡ್ ಆಗಿರುವಂಥ ಪಾಕಿಸ್ತಾನಿಗಳು, ಈ ಐ.ಎಸ್.ಐ. ಏಜೆಂಟರುಗಳ ಜೊತೆಯಲ್ಲಿ ಕರೀಂಲಾಲನ ವ್ಯೂಹವನ್ನು ಸೇರಿಕೊಂಡು ರಾಜ್ಯಕ್ಕೆ ಮಾತ್ರವಲ್ಲ ದೇಶದ ಭದ್ರತೆಗೇ ಅಪಾಯ ತರುವಂಥ ರಾಷ್ಟ್ರೀಯ ಭದ್ರತಾ ಪ್ರಶ್ನೆಯಾಗಿರುವುದರಿಂದ ಇದನ್ನು ಗಂಭೀರವಾಗಿ ತೆಗೆದುಕೊಂಡು ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ನಾನು ಒತ್ತಾಯಿಸುವ ಜೊತೆಗೆ, ನೈತಿಕ ನೆಲೆಯಲ್ಲಿ ಮಾನ್ಯ ರೋಷನ್ ಬೇಗ್‌ರವರು ರಾಜೀನಾಮೆ ಕೊಡಬೇಕು ಎನ್ನುವ ವಿನಂತಿಯನ್ನು ಒತ್ತಾಯಪೂರ್ವಕವಾಗಿ ಮಾಡುತ್ತೇನೆ. ಅಕಸ್ಮಾತ್ ಅವರು ರಾಜೀನಾಮೆ ಕೊಡದಿದ್ದರೆ, ರಾಜ್ಯಸರ್ಕಾರ ತನ್ನ ಘನತೆಯನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಅವರನ್ನು ಮಂತ್ರಿ ಸ್ಥಾನದಿಂದ ಕೈಬಿಡಬೇಕೆಂದು ಹೇಳುವ ಸ್ಪಷ್ಟವಾದ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವರಿಬ್ಬರ ಹತ್ತಿರವೂ ನಾನು ವಿನಂತಿಸುತ್ತೇನೆ, ರಾಷ್ಟ್ರೀಯ ಭದ್ರತೆಯ ಪ್ರಶ್ನೆ ಇದರಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಮಲ್ಲಿಕಾರ್ಜುನ ಎಂಬ ಹೆಸರಿನಲ್ಲಿ ಬರುವಂಥ ಅರ್ಜುನನ ಪ್ರಜ್ಞೆ, ಕೃಷ್ಣನಲ್ಲಿರುವ ಶ್ರೀ ಕೃಷ್ಣ ಪ್ರಜ್ಞೆ ಇನ್ನಾದರೂ ಜಾಗೃತವಾಗಲಿ, ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವ ದೃಢ ಸಂಕಲ್ಪವನ್ನು ತಾಳಿಕೊಂಡು, ಇದರ ಬಗ್ಗೆ ಸಮಗ್ರವಾದ ತನಿಖೆಯಾಗಿ, ಮುಂದಿನ ದಿವಸಗಳಲ್ಲಿ ದೆಹಲಿ, ಕಾಶ್ಮೀರ ಅಥವಾ ಕೊಲ್ಕತ್ತಾದಲ್ಲಾದ ಹಗರಣ ಅಥವಾ ದುರಂತ ಬೆಂಗಳೂರಿನಲ್ಲಿ ಆಗದ ರೀತಿಯಲ್ಲಿ ಹೆಚ್ಚಿನ ಕಟ್ಟೆಚ್ಚರಿಕೆ ವಹಿಸಬೇಕೆಂದು ನಾನು ವಿನಂತಿಸುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ದಿ:28ನೇ ಸೋಮವಾರದಂದು ಬೆಳಿಗ್ಗೆ 10.00 ಗಂಟೆ ಸೇರುವುದು.

(ಸದನವು ಮಧ್ಯಾಹ್ನ 1 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 28ನೇ ಜನವರಿ 2002ರ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)